ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2012
ಬೆಲೆ ರೂ. 1









## ಮಸುಕಿದ್ದ ಮಬ್ಬಿನಲಿ ಕೈ ಹಿಡಿದು ನಡೆಸಿದವರು

# 59ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ – 'ಬ್ಯಾರಿ' ಚಿತ್ರಕ್ಕೆ ಸ್ವರ್ಣಕಮಲ




59ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ, ಪ್ರಪ್ರಥಮ ಬ್ಯಾರಿ ಭಾಷಾ ಚಿತ್ರ 'ಬ್ಯಾರಿ' ಸ್ವರ್ಣಕಮಲ ಪ್ರಶಸ್ತಿಯನ್ನು ಪಡೆದಿದ್ದು, ಕನ್ನಡದ ಪ್ರಾದೇಶಿಕ ಹಿರಿಮೆಯನ್ನು ಎತ್ತಿ ಹಿಡಿದಿದೆ. 'ಬ್ಯಾರಿ' ಚಿತ್ರವು ಮರಾಠಿ ಚಿತ್ರ 'ದೇವೂಲ್' ಜೊತೆಗೆ ಪ್ರಶಸ್ತಿಯನ್ನು ಹಂಚಿಕೊಂಡಿದೆ. ಬ್ಯಾರಿ ಭಾಷೆಯ ಮೊದಲ ಕಥಾ ಚಿತ್ರ 'ಬ್ಯಾರಿ' ನ್ಯಾಯಬಾಹಿರ ಧಾರ್ಮಿಕ ಕಟ್ಟುಪಾಡುಗಳ ವಿರುದ್ಧ ಹೋರಾಡಿದ ಮಹಿಳೆಯೊಬ್ಬಳ ದುಸ್ಥಿತಿಯನ್ನು ಬಣ್ಣಿಸಿದೆ. ಇದು 'ಸ್ವರ್ಣ ಕಮಲ' ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಭಾಜನವಾಗಿರುವ ಮೊಟ್ಟ ಮೊದಲ ಚಿತ್ರ. 'ಬ್ಯಾರಿ' ಭಾಷೆಯ ಚಲನಚಿತ್ರ ನಿರ್ಮಾಪಕ ಹಾಗೂ ನಟ ಅಲ್ತಾಫ್ ಚೊಕ್ಕಬೆಟ್ಟು ವಿಶಿಷ್ಟವಾದ ಪುಟ್ಟ 'ಬ್ಯಾರಿ' ಭಾಷೆ ಹಾಗೂ ಸಮುದಾಯಕ್ಕೆ ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪ್ರಾಪ್ತವಾಗುವಲ್ಲಿ ಯಶಸ್ವಿಯಾಗಿದ್ದಾರೆ.



ಗಿರೀಶ್ ಕಾಸರವಳ್ಳಿ ನಿರ್ದೇಶನದ, ಕುಂ. ವೀರಭದ್ರಪ್ಪನವರ ಕಥಾಧಾರಿತ "ಕೂರ್ಮಾವತಾರ" ಸಿನಿಮಾ 2012ರ ಸಾಲಿನ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಜತೆಗೆ ರಜತ ಕಮಲ ಪ್ರಶಸ್ತಿ ಪಡೆದುಕೊಂಡಿದೆ. ಸಿನೆಮಾ ಜಗತ್ತಿನಲ್ಲಿ ಚೊಚ್ಚಲ ನಿರ್ದೇಶನದಲ್ಲೇ ವಿಶ್ವ ಖ್ಯಾತಿ ಪಡೆದು, ಇದುವರೆಗೂ ನಾಲ್ಕು ಬಾರಿ ರಾಷ್ಟ್ರೀಯ ಪ್ರಶಸ್ತಿ ಗಳಿಸಿರುವ ಹೆಮ್ಮೆಯ ಕನ್ನಡಿಗ ಗಿರೀಶ್ ಕಾಸರವಳ್ಳಿ ಅವರು ಇಂದು ಕನ್ನಡದ ಅತ್ಯಂತ ಪ್ರತಿಭಾವಂತ ನಿರ್ದೇಶಕರಲ್ಲಿ ಒಬ್ಬರಾಗಿ ಕನ್ನಡಿಗರ ಹಿರಿಮೆಗೆ ಗರಿ ಮೂಡಿಸಿದ್ದಾರೆ. ಸ್ವಾತಂತ್ರ್ಯಾ ನಂತರದ ಕಳೆದ 6 ದಶಕಗಳಲ್ಲಿ 'ಘಟಶ್ರಾದ್ಧ'ದಿಂದ, 'ಗುಲಾಬಿ ಟಾಕೀಸ್' ವರೆಗೆ ಗಿರೀಶ್ ಕಾಸರವಳ್ಳಿಯವರು ನಿರ್ದೇಶಿಸಿದ ಕನ್ನಡ ಚಿತ್ರಗಳು ಸಾಮಾಜಿಕ ಜೀವನದ ಸಂಘರ್ಷಗಳನ್ನು ಪ್ರತಿಬಿಂಬಿಸಿವೆ. ಅಮರೇಶ ನುಗಡೋಣಿ ಅವರ 'ಸವಾರಿ' ಸಣ್ಣಕಥೆಯನ್ನಾಧರಿಸಿದ ಇವರ "ಕನಸೆಂಬ ಕುದುರೆಯನೇರಿ" ಚಿತ್ರ 2010ರ 57ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಮತ್ತು ಅತ್ಯುತ್ತಮ ಪ್ರಾದೇಶಿಕ ಚಿತ್ರ ವಿಭಾಗದಲ್ಲಿ ರಜತ ಕಮಲ ಪ್ರಶಸ್ತಿಯನ್ನು ಪಡೆದದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನಿರಂತರವಾಗಿ ಕನ್ನಡದ ಪ್ಯಾರಲಲ್ ಸಿನಿಮಾಗಳಿಗೊಂದು ಘನತೆಯನ್ನು ನೀಡುತ್ತಾ ಬಂದಿರುವ ಏಕಾಂಗಿವೀರ ಗಿರೀಶ್‌ಗೆ ವಂದನೆಗಳು ಹಾಗೂ 'ಬ್ಯಾರಿ' ಭಾಷೆಯ ಚಲನಚಿತ್ರ ನಿರ್ಮಾಪಕ ಹಾಗೂ ನಟ ಅಲ್ತಾಫ್ ಚೊಕ್ಕಬೆಟ್ಟು ಅವರಿಗೂ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

# ರಕ್ತದಾನ – ಮಹಾದಾನ



11 ಮಾರ್ಚ್ 2012 ರಂದು ದೆಹಲಿ ಕರ್ನಾಟಕ ಸಂಘ ಮತ್ತು ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ಜಂಟಿಯಾಗಿ ಆಯೋಜಿಸಿದ ರಕ್ತದಾನ ಶಿಬಿರ ಭವ್ಯ ಯಶಸ್ಸು ಗಳಿಸಿತು. ರಕ್ತದಾನ ಮಹಾದಾನವೆನ್ನುತ್ತಾರೆ. ಪ್ರತಿ ವರ್ಷದ ಜೂನ್ 14ನ್ನು 'ವಿಶ್ವ ರಕ್ತದಾನಿಗಳ ದಿನ'ವನ್ನಾಗಿ ಆಚರಿಸಲಾಗುತ್ತದೆ. ಈ ಶಿಬಿರದಲ್ಲಿ ದೆಹಲಿ ಕನ್ನಡಿಗರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಒಂದು ಉದಾತ್ತ ಕಾರಣಕ್ಕಾಗಿ ರಕ್ತದಾನ ಮಾಡಿ ಮಾನವೀಯತೆಯನ್ನು ಮೆರೆದರು. 75 ಕ್ಕಿಂತ ಹೆಚ್ಚು ಜನ ತಮ್ಮ ಹೆಸರು ನೊಂದಾಯಿಸಿದ್ದು ಅವರಲ್ಲಿ 54 ಜನ ರಕ್ತದಾನದ ಅರ್ಹತೆಯನ್ನು ಪಡೆದಿದ್ದರು. ರಕ್ತದಾನದಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ವಿಜೇತರೆಂದು ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ AIIMS ನ ಹಿರಿಯ ಅಧಿಕಾರಿ ಡಾ. ಬಿ.ವಿ. ಅಡ್ಕೋಳಿ ಅವರು ಸಂತಸ ವ್ಯಕ್ತಪಡಿಸಿದರು. ರಕ್ತದಾನಕ್ಕಾಗಿ ಅತ್ಯುತ್ಸಾಹದಿಂದ ಎಲ್ಲರಿಗಿಂತಲೂ ಮೊದಲೇ ಬಂದು ಕಾಯುತ್ತಿದ್ದ ಕುಮಾರಿ ಸಪ್ನ ಅತ್ತಾವರ್‌ಗೆ ಡಾ. ಅಡ್ಕೋಳಿ ಅವರು ಪುಷ್ಪಗುಚ್ಛ ನೀಡಿ ಪ್ರೋತ್ಸಾಹಿಸಿ ಶಿಬಿರದ ಮುಂದಿನ ಚಟುವಟಿಕೆಗಳಿಗೆ ಚಾಲನೆ ನೀಡಿದರು.

ಪ್ರತಿದಾನಿಯ ಕೊಡುಗೆಯೂ ಅಮೂಲ್ಯವಾದುದು ಎಂದು ಅಭಿಪ್ರಾಯಪಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ದೆಹಲಿ ಕರ್ನಾಟಕ ಸಂಘ ಹಿಂದಿನಿಂದಲೂ ವಾರ್ಷಿಕೋತ್ಸವದ ದಿನದಂದು 'ರಕ್ತದಾನ ಶಿಬಿರ'ವನ್ನು ಆಯೋಜಿಸುತ್ತ ಬಂದಿದೆ. ಕಾರಣಾಂತರಗಳಿಂದ ಇತ್ತೀಚೆಗೆ ರಕ್ತದಾನವನ್ನು ಏರ್ಪಡಿಸಿರಲಿಲ್ಲ. ಇಂದು ಮತ್ತೆ ಅಖಿಲ ಭಾರತ ವೈದ್ಯಕೀಯ ಶಿಕ್ಷಣ ಕೇಂದ್ರದ ವರಿಷ್ಠ ಅಧಿಕಾರಿ ಹಾಗೂ ನಮ್ಮೆಲ್ಲರ ನಲ್ಮೆಯ ಕನ್ನಡಿಗ ಡಾ. ಬಿ.ವಿ. ಅಡ್ಕೋಳಿ ಮತ್ತು ಡಾ. ಶಿವರಾಮ್ ಶಾಸ್ತ್ರಿ ಅವರು ತಮ್ಮ ಸಿಬ್ಬಂದಿ ವೈದ್ಯರೊಡನೆ ಈ ಶಿಬಿರವನ್ನು ಏರ್ಪಡಿಸಲು ನೆರವಾಗಿದ್ದಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು. ರಕ್ತದಾನ ಶಿಬಿರದ ನಾಯಕತ್ವ ವಹಿಸಿದ AIIMS ನ ಡಾ. ಸಂದೀಪ್ ಚೌಧರಿ ಮತ್ತು ಡಾ.ಎ.ಎಸ್. ಅಂಜು ಅವರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು.

ಮೊದಲ ದಾನಿ 18 ವರ್ಷದ ಸಪ್ನಾ ಅತ್ತಾವರ್ ಅವರಿಂದ ಪ್ರಾರಂಭಿಸಿ ಎಲ್ಲಾ ವಯೋಮಾನದವರು ರಕ್ತದಾನದಲ್ಲಿ ಪಾಲ್ಗೊಂಡರು. ದೆಹಲಿ ಪೊಲೀಸ್ ಸದಸ್ಯರು, ಕರ್ನಾಟಕ ಫುಡ್ ಸೆಂಟರ್‌ನ ಸಿಬ್ಬಂದಿ, ಕರ್ನಾಟಕ ಭವನ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರೇಣುಕಾ ನಿಡಗುಂದಿ ಮುಂತಾಗಿ ದೂರದೂರದಿಂದ ಆಗಮಿಸಿದ ರಕ್ತದಾನಿಗಳ ಉತ್ಸಾಹ, ಲವಲವಿಕೆ ಇನ್ನೊಬ್ಬರಿಗೆ ಪ್ರೇರಣೆ ನೀಡುವಂತಿತ್ತು. AIIMS ತಂಡದ ಜತೆ ದೆಹಲಿ ಕರ್ನಾಟಕ ಸಂಘದ ಸಿಬ್ಬಂದಿ ಹಾಗೂ ಸಂತೋಷ್‌ಕುಮಾರ್ ಉಪಾಧ್ಯಾಯ ಅವರುಗಳು ಸ್ವಯಂಸೇವಕರಾಗಿ ಈ ಮಹಾದಾನದ ಯಶಸ್ವಿಗೆ ನೆರವಾದರು. ರಕ್ತದಾನ ಮಾಡಿದ ಪ್ರತಿಯೊಬ್ಬರಿಗೂ AIIMS ನ ಹಿರಿಯ ಅಧಿಕಾರಿ ಡಾ. ಬಿ.ವಿ. ಅಡ್ಕೋಳಿ ಅವರು ರಕ್ತದಾನ ಜಾಗೃತಿ ಮೂಡಿಸುವ ಟಿ–ಶರ್ಟ್ ಪ್ರಾಯೋಜನೆ ಮಾಡಿದರು.

■ ರೇಣುಕಾ ನಿಡಗುಂದಿ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 22 ಸಂಚಿಕೆ 7
ಏಪ್ರಿಲ್ 2012, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ನಮ್ಮ ನಾಡು ಶೈಕ್ಷಣಿಕ ಶಿಸ್ತಿಗೆ ಪ್ರಸಿದ್ಧಿ ಪಡೆದಿದೆ. ನಮ್ಮ ಕರ್ನಾಟಕದಲ್ಲಿ ಓದಿದವರ ಬಗ್ಗೆ ದೇಶದುದ್ದಗಲಗಳಲ್ಲಿ ಅಪಾರ ಗೌರವ. ಏಕೆಂದರೆ ಅನೈತಿಕ ವ್ಯವಹಾರಗಳಿಂದ ನಮ್ಮ ರಾಜ್ಯ ಬಹುದೂರ. ಹೀಗಾಗಿ ಮೌಲ್ಯಯುತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಅಗತ್ಯ ಜ್ಞಾನ ಸಂಪಾದಿಸಿ ಬದುಕನ್ನು ಸಮರ್ಥವಾಗಿ ನಿರ್ವಹಿಸುವ ಶಕ್ತಿ ಗಳಿಸುತ್ತಾರೆ ಎಂಬ ನಂಬಿಕೆ ಎಲ್ಲೆಡೆ ಇದೆ. ಈ ಬಗ್ಗೆ ನಮಗೂ ಅಪಾರ ಹೆಮ್ಮೆ. ಆದರೆ ಈ ನಂಬಿಕೆ, ಹೆಮ್ಮೆಗಳಿಗೆ ಧಕ್ಕೆ ತರುವ ದುರ್ಘಟನೆ ಕಳೆದ ತಿಂಗಳು ನಡೆದು ಹೋಯಿತು. ದ್ವಿತೀಯ ಪಿಯುಸಿಯ ಕೆಲವು ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮುನ್ನವೇ ಬಹಿರಂಗಗೊಂಡು ಆರು ಲಕ್ಷ ವಿದ್ಯಾರ್ಥಿಗಳು ಆತಂಕದ ಕಡಲಲ್ಲಿ ಮುಳುಗುವಂತೆ ಮಾಡಿದವು. ಪದವಿ ಪೂರ್ವ ಶಿಕ್ಷಣ ಇಲಾಖೆ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಈ ದುರ್ಘಟನೆಗೆ ಕಾರಣವಾದವರನ್ನು ಶಿಕ್ಷಿಸಬೇಕಿದೆ. ಅಲ್ಲದೇ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಿ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಬೇಕಿದೆ. ಇಲ್ಲದಿದ್ದರೆ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಮಣ್ಣು ಪಾಲಾಗುವುದು ಖಚಿತ. ಇದೇ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಮಂಡಳಿ ಕೈಗೊಂಡ ಮಹತ್ವದ ನಿರ್ಧಾರವನ್ನು ನಾವು ಪ್ರಶಂಸಿಸಲೇ ಬೇಕು. ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಥಮ ಪಿಯುಸಿ ಪರೀಕ್ಷೆ ಇರುವುದಿಲ್ಲ. ಬದಲಿಗೆ ಸಮಗ್ರ ಮೌಲ್ಯಮಾಪನವಿರುತ್ತದೆ. ಇದರಿಂದ ಪ್ರತಿವರ್ಷ ಪ್ರಥಮ ಪಿಯುಸಿಯಲ್ಲಿ ಫೇಲ್ ಆಗುತ್ತಿದ್ದ ಕನಿಷ್ಠ ಒಂದು ಲಕ್ಷ ವಿದ್ಯಾರ್ಥಿಗಳು 'ಅಸಹಾಯಕತೆ' ಯಿಂದ ಕೈಚೆಲ್ಲಿ ಶಿಕ್ಷಣವನ್ನು ಮೊಟಕುಗೊಳಿಸುತ್ತಿದ್ದುದು ತಪ್ಪುತ್ತದೆ. ಇದರಿಂದಾಗಿಯೇ ಟ್ಯೂಶನ್ ಮಾಫಿಯಾ ಕುಪಿತಗೊಂಡು ಪಿ.ಯು. ಬೋರ್ಡ್‌ನ ಮೇಲೆ ಯುದ್ಧ ಸಾರಿದೆ ಎಂದು ಹೇಳಲಾಗುತ್ತಿದೆ. ಬಹುಶಃ ಬೋರ್ಡ್‌ನ ಮನಃಸ್ಥೈರ್ಯವನ್ನು ಕುಗ್ಗಿಸಲು ಪ್ರಶ್ನೆ ಪತ್ರಿಕೆಗಳ "ಬಹಿರಂಗ" ಒಂದು ಯೋಜಿತ ಹುನ್ನಾರವೂ ಆಗಿರಬಹುದು. ಈಗ ತನಿಖೆ ನಮ್ಮ ಸಿಐಡಿ ಪೋಲಿಸರ ನೇತೃತ್ವದಲ್ಲಿ ನಡೆಯುತ್ತಿದೆ. ಈ ತನಿಖೆ ತಪ್ಪಿತಸ್ಥರನ್ನು ಕಟಕಟೆಯಲ್ಲಿ ನಿಲ್ಲಿಸಲಿ, ಪಿ.ಯು. ಮಂಡಳಿ ತನ್ನ ಪ್ರಗತಿಪರ ಕೆಲಸಗಳನ್ನು ಮುಂದುವರೆಸಲಿ ಎಂಬುದು ನಮ್ಮ ಹಾರೈಕೆ.

ಕೇಂದ್ರ ಮಂತ್ರಿಮಂಡಲ ಮದುವೆಯ ಕಾಯಿದೆಯ ತಿದ್ದುಪಡಿಗೆ ಅನುಮತಿ ನೀಡಿರುವುದು ಅತ್ಯಂತ ಸ್ವಾಗತಾರ್ಹ. ಇದು ಮದುವೆಗಳಲ್ಲಿ ಮಹಿಳೆಯ ಪಾತ್ರವನ್ನು ಬಲಗೊಳಿಸುತ್ತದೆ. ವಿಚ್ಛೇದನೆಯ ಸುಲಭ ಪ್ರಕ್ರಿಯೆ ಹಾಗೂ ವಿಚ್ಛೇದನದ ನಂತರ ಮಹಿಳೆಗೆ ಸೂಕ್ತ ರಕ್ಷಣೆ ನೀಡುವುದು ತಿದ್ದುಪಡಿ ತರಲಿರುವ ಕ್ರಾಂತಿ–ಕಾರಕ ಅಂಶಗಳು. ಅಷ್ಟೇ ಅಲ್ಲ, ಡೈವೋರ್ಸ್ ನಂತರವೂ ಮಹಿಳೆಗೆ ಅವಳ ವಿಚ್ಛೇದಿತ ಪತಿಯ ಆಸ್ತಿಯ ಮೇಲೆ ಹಕ್ಕಿರುತ್ತದೆ. ಈ ಮೊದಲು ಡೈವೋರ್ಸ್ ಆದ ಮೇಲೆ ಮಹಿಳೆಗೆ ಅವಳ ಗಂಡನ ಆಸ್ತಿಯ ಮೇಲೆ ಅಧಿಕಾರವೇ ಇರಲಿಲ್ಲ. ಗಂಡ ಬಿಟ್ಟ ಹೆಣ್ಣಿನ ಬಾಳು ಅತ್ಯಂತ ದುಸ್ತರವಾಗುತ್ತಿತ್ತು. ಈ ತಿದ್ದುಪಡಿಯಿಂದ ಹೆಣ್ಣಿನ ಬಾಳು ಸುಧಾರಿಸುವುದು ಖಚಿತ. ಮದುವೆಯಾದ ಮೇಲೆ ಹೆಣ್ಣು ಸಂಪಾದಿಸದಿದ್ದರೂ ಅವಳು ಹೊತ್ತ ಗೃಹ ನಿರ್ವಹಣೆ ಕೂಡ ಒಂದು ಉದ್ಯೋಗ ಹಾಗೂ ಅದನ್ನು ಗಂಡನಿಗೆ ಸರಿಸಾಟಿಯಾದ 'ಸಂಪಾದನೆ' ಎಂದು ಗುರುತಿಸಲು ಈ ತಿದ್ದುಪಡಿ ಅವಕಾಶ ಮಾಡಿಕೊಡುತ್ತದೆ. ಇನ್ನೂ ಸಂಸತ್ತಿನ ಪರಿಪೂರ್ಣ ಅನುಮೋದನೆ ಪಡೆಯಬೇಕಿರುವ ಈ ಕಾಯಿದೆ ಶೀಘ್ರ ಅನುಷ್ಠಾನ ಪಡೆಯಲಿ, ಕೋಟ್ಯಂತರ ಹೆಣ್ಣುಗಳ ಕಂಬನಿಯನ್ನೊರಸಲಿ ಎಂಬುದು ನಮ್ಮ ಅಭಿಲಾಷೆ.

ಏಪ್ರಿಲ್ ತಿಂಗಳು ಶುರುವಾದದ್ದೇ ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರನ ಜಯಂತಿಯಿಂದ. ರಾವಣತ್ವವನ್ನು ಸಂಹರಿಸಿ ರಾಮತ್ವವನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂಬುದೇ ರಾಮನವಮಿಯ ದಿವ್ಯ ಸಂದೇಶ. ಈ ತಿಂಗಳ ನಾಲ್ಕರಂದು ಇಡೀ ಜಗತ್ತಿಗೆ ಅಹಿಂಸೆಯ ಅಸ್ತ್ರವನ್ನು ಕರುಣಿಸಿದ, ಅಹಿಂಸೆಯ ಶ್ರೇಷ್ಠತೆಯನ್ನು ಪ್ರತಿಪಾದಿಸಿದ ಭಗವಾನ್ ಮಹಾವೀರರ ಜನ್ಮದಿನ. ತ್ಯಾಗ, ಮೋಕ್ಷಗಳ ನಿಜವಾದ ಅರ್ಥವನ್ನು ಮಹಾವೀರ ತೀರ್ಥಂಕರರನ್ನು ಅಧ್ಯಯಿನಿಸುವುದರ ಮೂಲಕ ಪಡೆದುಕೊಳ್ಳಬಹುದು. ಈ ತಿಂಗಳ 14ರಂದು ಭಾರತದ ರಾಜ್ಯಾಂಗವನ್ನು ರಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ, ತುಳಿಯಲ್ಪಟ್ಟ ಜನಾಂಗಕ್ಕೆ ಅದ್ಭುತ ಆತ್ಮವಿಶ್ವಾಸವನ್ನು ತುಂಬಿದ ಬಾಬಾ ಸಾಹೇಬ ಅಂಬೇಡ್ಕರ್ ಅವರು ಹುಟ್ಟಿದ ದಿನ. ನಮ್ಮ ದೇಶವನ್ನು ಸಹಸ್ರಾರು ವರ್ಷಗಳ ಕಾಲ ಆಕ್ರಮಿಸಿದ್ದ 'ಅಸ್ಪೃಶ್ಯತೆ' ಭಾವನೆಯನ್ನು ಸಂಪೂರ್ಣ ಹೊಡೆದೋಡಿಸಲು ಪಣ ತೊಡುವುದು ಅಂಬೇಡ್ಕರ್ ಭವ್ಯ ಚೇತನಕ್ಕೆ ನಾವು ಸಲ್ಲಿಸುವ ಅರ್ಥಪೂರ್ಣ ನಮನ. ಇದೇ ತಿಂಗಳ 24ರಂದು ಹನ್ನೆರಡನೆಯ ಶತಮಾನದ ಗಾಡಾಂಧಕಾರವನ್ನು ತೊಲಗಿಸಿ ಮಾನವೀಯತೆಯ ಬೆಳಕನ್ನು ಎಲ್ಲೆಡೆ ಮೂಡಿಸಿದ ಮಹಾನ್ ಮಾನವತಾವಾದಿ ಬಸವೇಶ್ವರರ ಜಯಂತಿ. 26ರಂದು ಅದ್ವೈತ ಸಿದ್ಧಾಂತದ ಪ್ರತಿಷ್ಠಾಪಕ, ದೇಶದುದ್ದಗಲಗಳಲ್ಲಿ ಸಂಚರಿಸಿ ನೊಂದವರ ಮನತಣಿಸಿದ ಪೂಜ್ಯ ಶಂಕರಾಚಾರ್ಯರ ಜಯಂತಿ. 27ರಂದು ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸಮರ್ಥವಾಗಿ ಪ್ರತಿಪಾದಿಸಿದ ಶ್ರೀ ರಾಮಾನುಜಾಚಾರ್ಯರು ಹುಟ್ಟಿದ ದಿನ. ಈ ಎಲ್ಲ ಪುಣ್ಯ ಪುರುಷರಿಗೆ ನಮ್ಮ ನಮ್ರ ನಮನಗಳು.

■ ಉಷಾ ಭರತಾದ್ರಿ

# 'ಪದ್ಮ' ಪ್ರಶಸ್ತಿಗಳ ಸುತ್ತಮುತ್ತ

ಈ ಬಾರಿ ಕನ್ನಡಿಗರಿಗೆ ಹಲವಾರು 'ಪದ್ಮ' ಪ್ರಶಸ್ತಿಗಳು ಬಂದಿವೆ. ಪ್ರತಿ ವರ್ಷವೂ ಕೇಂದ್ರ ಸರಕಾರ ಈ ಪ್ರಶಸ್ತಿಗಳನ್ನು ಘೋಷಿಸುವಾಗ ಅದರಲ್ಲಿ ಕನ್ನಡಿಗರದ್ದು ಅಷ್ಟಿಷ್ಟು ಪಾಲು ಇದ್ದೇ ಇರುತ್ತದೆ. ದೇಶದ ಬೇರೆ ಬೇರೆ ಭಾಗಗಳಿಗೂ ಸಮಾನಾಂತರವಾಗಿ ಈ ವಿವಿಧ ಹಂತಗಳ 'ಪದ್ಮ' ಪ್ರಶಸ್ತಿಯನ್ನು ಹಂಚುವುದು ಸರಕಾರದ ಹೊಣೆ. ಈ ಪ್ರಶಸ್ತಿ ಪಡೆದ ಗಣ್ಯರಿಗೆ ಶುಭಾಶಯಗಳನ್ನು ಹಾಗೂ ಅಭಿನಂದನೆಗಳನ್ನು ಸಲ್ಲಿಸುತ್ತ ಅವರೊಂದಿಗೆ ಕೆಲಕಾಲ ಕಳೆಯುವುದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದು ಬಂದ ಪದ್ಧತಿ. ಈ ಬಾರಿಯ 'ಪದ್ಮಶ್ರೀ' ಪ್ರಶಸ್ತಿಯನ್ನು ಪಡೆದ ಎಂಬತ್ತಾರರ ಶ್ರೀಮತಿ ನಾಗರತ್ನಮ್ಮ ಹಾಗೂ ಎಪ್ಪತ್ತಾರರ ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆಯವರನ್ನು ಅಭಿನಂದಿಸುವ ಕಾರ್ಯಕ್ರಮವನ್ನು ನಾವು ಸಂಘದಲ್ಲಿ ಆಯೋಜಿಸಿದೆವು. ಶ್ರೀಮತಿ ನಾಗರತ್ನಮ್ಮನವರು ಕನ್ನಡ ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿದವರು. ಅವರ ಕಂಚಿನ ಕಂಠ, ಮಾತಿನ ಹಾಗೂ ಅಭಿನಯದ ಸ್ಪಷ್ಟತೆಯ ಪುಟ್ಟ ತುಣುಕು ನಮಗೆಲ್ಲಾ ಮೊನ್ನೆ ಸಂಜೆ ದೊರೆತದ್ದು ಒಂದು ಅಭೂತಪೂರ್ವ ಅನುಭವವೇ ಸರಿ. ಎಲ್ಲದಕ್ಕೂ ಮಿಗಿಲಾಗಿ ಅವರ ಜೀವನೋತ್ಸಾಹ, ನಾಟಕಗಳಲ್ಲಿನ ಪಾತ್ರಗಳ ಪುಟ್ಟ ಸಂಭಾಷಣೆಗಳ ಝಲಕನ್ನು ನೀಡುವಾಗ ಅವರ ಕಣ್ಣಿನಂಚಿನಲ್ಲಿ ಮೂಡುವ ಸಂತಸದ ಬೆಳಕು ಈ ಬದುಕಿನ ಕುರಿತಾಗಿ ಹೊಸ ಆಶಯಗಳನ್ನು ಹುಟ್ಟಿಸುತ್ತದೆ. ಆರೋಗ್ಯ ಅಷ್ಟೊಂದು ಚೆನ್ನಾಗಿಲ್ಲದಿದ್ದರೂ, ನಾಟಕದ ನೆನಪು ಮನದಾಳದಿಂದ ಇಳಿದಾಗ ಅವರಲ್ಲಿ ಉಂಟಾಗುವ ಪ್ರಕ್ರಿಯೆಯೇ ಬೇರೆ. ಯಾವುದೋ ಇನ್ನೊಂದು ಲೋಕಕ್ಕೆ ಅವರು ಲಗ್ಗೆ ಹಾಕುವವರಂತೆ ಕಾಣುತ್ತಾರೆ. ಈ ಬಗೆಯ ಜನ ಸಮುದಾಯ ನಮ್ಮೆಲ್ಲರ ನಡುವೆ ಕೆಲ ದಶಕಗಳ ಹಿಂದೆ ಜೀವಂತವಾಗಿ ಸ್ಪಂದಿಸಿಕೊಂಡು ನೆಲೆ ನಿಂತಿತ್ತು ಎಂಬುವುದೇ ಒಂದು ದೊಡ್ಡ ವಿಸ್ಮಯವಾದ ಸಂಗತಿಯಾಗಿದೆ.

ಚಿಟ್ಟಾಣಿ ರಾಮಚಂದ್ರ ಹೆಗಡೆಯವರದ್ದೂ ಸಹ ಬಣ್ಣದ ಬದುಕೇ. ಸುಮಾರು ಆರು ದಶಕಗಳಿಗೂ ಮೀರಿ ಅವರು ಯಕ್ಷಗಾನದ ರಂಗಭೂಮಿಯಲ್ಲಿ ಹಲವಾರು ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಕೀಚಕ, ಕಂಸ, ಭಸ್ಮಾಸುರ ಹೀಗೆ ಈ ನಟನಾ ಹಾಗೂ ಕುಣಿತದ ಕೌಶಲ್ಯದ ಪಟ್ಟಿ ಸಾಗುತ್ತದೆ. ಬಡಗುತಿಟ್ಟಿನ ಯಕ್ಷಗಾನ ರಂಗಭೂಮಿಯಲ್ಲಿ ಅವರು ಸವೆಸಿದ ದಾರಿ ಸುಲಭದ್ದಾಗಿರಲಿಲ್ಲ. ಕಲಾವಿದನ ಜೀವನಕ್ಕೆ ಸಮರ್ಪಿಸಿಕೊಂಡ ಮೇಲೆ ಬೇರೆ ಇನ್ನಾವ ದಾರಿಯಲ್ಲಿ ನಡೆಯಲಾದೀತು? ನಂತರದಲ್ಲಿ ಅವರು ಯಕ್ಷಗಾನ ರಂಗಭೂಮಿಯಲ್ಲಿ, ಅದರಲ್ಲೂ ಅವರ ವಿಶಿಷ್ಟ ಕುಣಿತದ ಹಾಗೂ ಅಭಿನಯದ ಪರಿಯಲ್ಲಿ, ಮೂಡಿಸಿದ ಛಾಪು ಹಾಗೂ ಹಾಕಿಕೊಟ್ಟ ದಾರಿ ಅದ್ಭುತವಾದದ್ದು. ಈ ಮಹಾಮೇರು ಕಲಾವಿದರ ದೆಸೆಯಿಂದಾಗಿ 'ಪದ್ಮ' ಪ್ರಶಸ್ತಿಗಳ ಗೌರವ ಇಮ್ಮಡಿಯಾಯಿತೆಂದರೆ ಅತಿಶಯೋಕ್ತಿಯಲ್ಲ. ಕಲಾವಿದರಿಗೆ ಪ್ರಶಸ್ತಿ ದಕ್ಕಲಿ ಅಥವಾ ದಕ್ಕದೇ ಇರಲಿ–ಅವರ ಬದುಕಿನ ಭಾವನೆಗಳ ಸೆಲೆಯಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ.

ಕಳೆದ ಒಂದೆರಡು ವರುಷಗಳಲ್ಲಿ ಸಂಘಕ್ಕೆ ಬಂದ 'ಪದ್ಮ' ಪ್ರಶಸ್ತಿ ವಿಜೇತರ ಒಂದೇ ಕೊರಗೆಂದರೆ–"ಈ ಪ್ರಶಸ್ತಿ ಹತ್ತಾರು ವರುಷಗಳ ಮೊದಲೇ ಬಂದಿದ್ದರೆ, ಅದು ಬಂದ ಸಂತಸದ ಗಳಿಗೆಗಳನ್ನು ಇನ್ನೂ ಸ್ವಲ್ಪ ಹೆಚ್ಚಾಗಿ ಅನುಭವಿಸಬಹುದಾಗಿತ್ತು". ಎಂಬತ್ತಾರರ ಹರೆಯದ ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದನ್ನು ಶ್ರೀ ಆರ್.ಕೆ. ಶ್ರೀಕಂಠನ್‌ನವರು ಕಳೆದ ವರ್ಷ ಹೇಳಿದ್ದರು–"ಕೊಟ್ಟವರು ಕೊಟ್ಟರಲ್ಲ ಹತ್ತಾರು ವರುಷಗಳ ಮೊದಲೇ ಕೊಡಬಾರದಾಗಿತ್ತಾ?" ಅಂತೂ ಕೊನೆಗೂ ಏನೋ ಬಂತಲ್ಲ ಎಂಬುದೇ ಒಂದು ಆನಂದದ ವಿಷಯ. ದೆಹಲಿ ಕರ್ನಾಟಕ ಸಂಘಕ್ಕೆ ಅಭಿನಂದನೆ ಸ್ವೀಕರಿಸಲು ಮುಂದಿನ ವಾರ ಬರಲಿರುವ ಪರಿಸರ ತಜ್ಞ ಡಾ. ಉಲ್ಲಾಸ್ ಕಾರಂತರಿಗೆ ಈ 'ಪದ್ಮ' ಪ್ರಶಸ್ತಿ ಸರಿಯಾದ ವೇಳೆಯಲ್ಲಿ, ಸರಿಯಾದ ವಯಸ್ಸಿನಲ್ಲೇ ಬಂದಿತೆಂದು ನಾವು ಅಂದುಕೊಂಡರೆ ಉದ್ಧಟತನವಾದೀತು. ಡಾ. ಕಾರಂತರು ಪರಿಸರ ವಿಜ್ಞಾನದಲ್ಲಿ, ಅದರಲ್ಲೂ ಹುಲಿಗಳ ಸಂರಕ್ಷಣೆ ಕುರಿತಾಗಿ ಮಾಡಿದ ಕೆಲಸ ಅಪೂರ್ವವಾದದ್ದು.

ಇನ್ನೂ ಹಲವಾರು ಕನ್ನಡಿಗರಿಗೆ 'ಪದ್ಮ' ಪ್ರಶಸ್ತಿಗಳು ಬಂದಿವೆ. ಹೃದಯರೋಗ ತಜ್ಞ ಡಾ. ದೇವಿಪ್ರಸಾದ ಶೆಟ್ಟಿಯವರು ಇದರಲ್ಲಿ ಸೇರಿದ್ದಾರೆ. ಅವರೂ ಸಹ ಮುಂದೊಂದು ದಿನ ಸಂಘಕ್ಕೆ ಬರಲಿ ಎಂದು ನಾವೆಲ್ಲರೂ ಹಾರೈಸೋಣ.

ಈ ಸರಕಾರ ನೀಡುವ ಪ್ರಶಸ್ತಿಗಳ ಕುರಿತಾಗಿ ಒಂದೆರಡು ವಿಚಾರಗಳನ್ನಾದರೂ ಬರೆಯಲೇ ಬೇಕು. ಈ ಪ್ರಶಸ್ತಿಗಳು ಯಾರಿಗೆ ಯಾವ ವೇಳೆಯಲ್ಲಿ ಯಾವ ಕಾಲದಲ್ಲಿ ಲಭ್ಯವಾಗಬೇಕೋ ಆ ಕಾಲದಲ್ಲಿ ಯಾಕೆ ಲಭ್ಯವಾಗುವುದಿಲ್ಲ ಎಂಬುದಕ್ಕೆ ಹಲವಾರು ರಾಜಕೀಯ ಹಾಗೂ ಇತರ ಕಾರಣಗಳೇ ಇರಬಹುದು. ಪ್ರಶಸ್ತಿ ಪಡೆದವರೆಲ್ಲ ದಿಗ್ಗಜರೇ. ಕೆಲವರಿಗೆ ಮೊದಲೇ ಬರಬೇಕಾಗಿತ್ತು. ಇನ್ನೂ ಕೆಲವರು ಸ್ವಲ್ಪ ಕಾಲ ಕಾಯಬಹುದಾಗಿತ್ತು. ಇನ್ನೂ ಹಲವರು ಕಾಯುತ್ತಲೇ ಇದ್ದಾರೆ. ಕೆಲವರಂತೂ ಈ ಪ್ರಶಸ್ತಿಗಳ ಆಶಯವನ್ನೇ ಬಿಟ್ಟು ಇನ್ನೊಂದು ಲೋಕದತ್ತ ಪ್ರಯಾಣ ಬೆಳೆಸಿದವರೂ ಇದ್ದಾರೆ. ಭಾರತ ದೇಶದಲ್ಲಿ ಸರಕಾರ ನೀಡುವ ಈ ಬಗೆಯ ಪ್ರಶಸ್ತಿಗಳ ಬಗ್ಗೆ ನಮಗೆ ಯಾಕೋ ತುಂಬಾ ಹೆಗ್ಗಳಿಕೆಯಿದೆ. ಯಾರೋ ಖಾಸಗಿಯವರು ನೀಡುವ ಪ್ರಶಸ್ತಿಗಿಂತ ಸರಕಾರ ನೀಡುವ ಪ್ರಶಸ್ತಿಯಲ್ಲಿ ಹೆಚ್ಚು ಗೌರವದ ಅಂಶಗಳು ತುಂಬಿವೆ ಎಂಬ ಭಾವನೆ ಎಲ್ಲೆಡೆಯೂ ಇದೆ.

ಒಟ್ಟಾರೆ ಈ ಬಗೆಯ ವಿಚಾರಗಳಿಗೆ ಕಾರಣಗಳನ್ನು ಬೆಳವಣಿಗೆ ಹೊಂದುತ್ತಿರುವ ಭಾರತದಂತಹ ದೇಶಗಳಲ್ಲಿ ಸರಕಾರ ಹೊಂದಿರುವ ಸತ್ತೆಯ ಬಲದಲ್ಲೇ ಕಾಣಬೇಕು. ಸರಕಾರವೆಂದರೆ ಸಾಮಾನ್ಯವೇ? ಹಿಂದಿದ್ದ ರಾಜ–ಮಹಾರಾಜರ ಗದ್ದುಗೆಯನ್ನು ಈಗ ಸರಕಾರ ಆಕ್ರಮಿಸಿಕೊಂಡಿದೆ. ಒಂದು ದೇಶದ ಹಿತರಕ್ಷಣೆಯ ಕೆಲಸ ಅದರದ್ದು. ಈ ಹಿತರಕ್ಷಣೆ ಭಂಗ ತರುವ ಯಾವ ಪಿತೂರಿ ನಡೆದರೂ ಸರಕಾರ ತಕ್ಷಣ ಕ್ರಮಕೈಗೊಳ್ಳಬೇಕು. ಸರಕಾರದ ಉದರದಲ್ಲಿ ಒಂದು ದೊಡ್ಡ ಪ್ರಪಂಚವೇ ಅಡಗಿದೆ. ಸರಕಾರದ ಬಳಿ ದೊಡ್ಡ ಶಕ್ತಿ ಅಡಗಿದೆ. ಅದು ಪ್ರಶಸ್ತಿ ನೀಡಿದರೆ, ಅದೇ ದೊಡ್ಡ ಗೌರವವಾಗಿ ತೋರುತ್ತದೆ. ಈ ಬಗೆಯ ಧೋರಣೆ ಎಷ್ಟು ಸಮಂಜಸ? ಎಂಬುದರ ಬಗ್ಗೆಯೂ ನಾವು ವಿಚಾರ ಮಾಡಬೇಕಿದೆ.

ಪ್ರಶಸ್ತಿಗಳು ಗೌರವವನ್ನು ತರುತ್ತವೆ. ಒಂದಲ್ಲ ಒಂದು ಬಗೆಯಲ್ಲಿ ಅದನ್ನು ಪಡೆದವನೂ ಧನ್ಯತಾ ಭಾವವನ್ನು ಹೊಂದುತ್ತಾನೆ. ಹಲವರು ಈ ಬಗೆಯ ವಿಚಾರಗಳ ಗೋಜಲುಗಳಲ್ಲಿ ಸಿಲುಕ ಬಯಸುವುದಿಲ್ಲ. ಬಂದ ಪ್ರಶಸ್ತಿಗಳನ್ನು ನಿರಾಕರಿಸುವವರೂ ಇದ್ದಾರೆ. ಭಾರತದ ಪುರಾತನ ಚರಿತ್ರೆಯ ಕುರಿತಾದ ದೊಡ್ಡ ವಿದ್ವಾಂಸರಾಗಿದ್ದ ಪ್ರೊ. ರೊಮಿಲಾ ಥಾಪರ್‌ರವರು ತಮಗೆ ಬಂದಿದ್ದ 'ಪದ್ಮ' ಪ್ರಶಸ್ತಿಯನ್ನು ಯಾವುದೋ ಕಾರಣಗಳಿಗಾಗಿ ನಿರಾಕರಿಸಿದ ಉದಾಹರಣೆಯೂ ಇದೆ. ಹಿಂದೊಮ್ಮೆ ಕಡಲ ತೀರದ ಭಾರ್ಗವ ಡಾ. ಶಿವರಾಮ ಕಾರಂತರು ತಮಗೆ ಸರಕಾರ ನೀಡಿದ್ದ 'ಪದ್ಮ' ಪ್ರಶಸ್ತಿಯನ್ನು ಹಿಂದಿರುಗಿಸಿದ್ದರು. ಈ ಬಗೆಯಲ್ಲಿ ಪ್ರಶಸ್ತಿಗಳನ್ನು ಹಿಂದಿರುಗಿಸಿದವರ ಪಟ್ಟಿಯೂ ಸಾಕಷ್ಟು ದೊಡ್ಡದಿದೆ.

ಏನೇ ಇರಲಿ, ಪ್ರಶಸ್ತಿ ಪ್ರಶಸ್ತಿಯೇ, ಅದು ಬದುಕಿನ ಹಲವಾರು ಕಷ್ಟದಾಯಕ ಕ್ಷಣಗಳನ್ನು ಮರೆಯಾಗಿಸಿಬಿಡುತ್ತದೆ. ಪ್ರಶಸ್ತಿ ವಿಜೇತರೆಲ್ಲರಿಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

■ ಡಾ. ವೆಂಕಟಾಚಲ ಹೆಗಡೆ

## ಮುನ್ನೋಟ

ದೆಹಲಿಯಲ್ಲಿ ಮಕ್ಕಳಿಗೆ ಈಗ ಪರೀಕ್ಷೆಗಳು ಮುಗಿದು ಫಲಿಂತಾಶ ಬಂದು ಹೊಸ ತರಗತಿಗಳು ಏಪ್ರಿಲ್‌ನಿಂದ ಪ್ರಾರಂಭವಾಗಿವೆ. ಹೊಸ ಹುರುಪಿನಿಂದ ದುಗುಡದಿಂದ ಪ್ರಥಮ ದಿನ ಶಾಲೆಗೆ ಹೋಗುವ ತವಕ ಮಕ್ಕಳಿಗೆ. ಪೋಷಕರಿಗೂ ಕೂಡಾ ಮಕ್ಕಳ ಪಠ್ಯಪುಸ್ತಕ, ವಾಹನ ವ್ಯವಸ್ಥೆ, ಸಮವಸ್ತ್ರ, ಶಾಲೆಯ ಶುಲ್ಕ ತುಂಬುವುದು ಹೀಗೆ ಒಂದು ರೀತಿಯ ಜವಾಬ್ದಾರಿಗಳು. ಮಕ್ಕಳಿಗೆ ನೂತನ ಶೈಕ್ಷಣಿಕ ವರ್ಷ ಶುಭವಾಗಲೆಂದು ಆಶಿಸುತ್ತೇನೆ.

ನೂತನ ಶೈಕ್ಷಣಿಕ ವರ್ಷದಂತೆ ನೂತನ ಆರ್ಥಿಕ ವರ್ಷ ಕೂಡ ಏಪ್ರಿಲ್‌ನಿಂದಲೇ ಪ್ರಾರಂಭ. ನೂತನ ಆರ್ಥಿಕ ವರ್ಷ ಪ್ರಗತಿದಾಯಕವಾಗಿರಲೆಂಬುದು ನನ್ನ ಆಶಯ. ಸಂಘದ ಕಾರ್ಯಕ್ರಮಗಳಿಗೂ ಕೂಡಾ ಒಂದು ರೀತಿಯಲ್ಲಿ ಹಳೆಯ ವರ್ಷ ಕಳೆದು ಹೊಸ ವರ್ಷ ಪ್ರಾರಂಭವೆಂದರೆ ತಪ್ಪೇನಿಲ್ಲ. ಈ ನೂತನ ಆರ್ಥಿಕ ವರ್ಷದಲ್ಲಿ ಇನ್ನೂ ಹೆಚ್ಚಿನ ಅತ್ಯುತ್ತಮವಾದ ಕಾರ್ಯಕ್ರಮಗಳ ಆಯೋಜನೆಗಳಾಗಬೇಕು. ಅದರಲ್ಲೂ ನಮ್ಮ ಸ್ಥಳೀಯ ಕನ್ನಡಿಗರೇ ಹೆಚ್ಚಿನ ಕಾರ್ಯಕ್ರಮಗಳನ್ನು ನೀಡುವಂತಾಗಬೇಕು ಎಂಬುದು ನಮ್ಮ ಹಂಬಲ.

ಕಳೆದ ತಿಂಗಳು AIIMS ನ ಸಹಯೋಗದೊಂದಿಗೆ ಅಯೋಜಿಸಿದ ಶಿಬಿರದಲ್ಲಿ ಸುಮಾರು 54 ಜನ ರಕ್ತ ನೀಡಿ ಈ ಮಹಾನ್ ಕಾರ್ಯವನ್ನು ಯಶಸ್ವಿಯಾಗಿಸಿದ್ದಾರೆ. ಅವರೆಲ್ಲರಿಗೂ ಸಂಘದ ಕೃತಜ್ಞತೆಗಳು. ಪ್ರತಿವರ್ಷವೂ ಸಹ ಸಂಘದ ವಾರ್ಷಿಕೋತ್ಸವ ಸಂದರ್ಭದಲ್ಲಿ 'ರಕ್ತದಾನ ಮಾಡಿ ಜೀವ ಉಳಿಸಿ' – 'ರಕ್ತದಾನ ಶಿಬಿರ' ಕಾರ್ಯಕ್ರಮ ತಪ್ಪದೇ ನಡೆಯಬೇಕು.

ವಿಶ್ವಮಾನವ ಬಸವಣ್ಣನವರ ಜಯಂತಿ ಕಾರ್ಯಕ್ರಮವನ್ನು ಇದೇ ತಿಂಗಳು 29ರಂದು ಆಯೋಜಿಸಲಾಗಿದೆ. ದಯವಿಟ್ಟು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ.

■ ಸಿ.ಎಂ.ನಾಗರಾಜ

## ರಕ್ತದಾನ ಮಾಡಿದ ಸಹೃದಯರು

1. ಡಾ. ವೆಂಕಟಾಚಲ ಹೆಗಡೆ 2. ಸಿ.ಎಂ. ನಾಗರಾಜ 3. ರೇಣುಕಾ ನಿಡಗುಂದಿ 4. ಆಂಜನಿ ಗೌಡ 5. ಶಿಶುಪಾಲ್ ಪಾಟೀಲ್ 6. ಸಪ್ನಾ ಅತ್ತಾವರ್ 7. ಅನಿಲ್ ಅತ್ತಾವರ್ 8. ಕೆ. ಸತೀಶ್ 9. ರವಿಶಂಕರ್ 10. ನಾರಾಯಣ ಪೈ 11. ಸೋಮಯ್ಯ ಟಿ.ಬಿ. 12. ಗಂಗಾಧರ್ ಆರ್ 13. ಪದ್ಮ ಗಂಗಾಧರ್ 14. ಎಸ್. ರಾಘವೇಂದ್ರ 15. ಜ್ಯೋತಿ ಶೆಟ್ಟಿ 16. ಕೆ.ಎಸ್.ಜಿ. ಶೆಟ್ಟಿ 17. ನಂದಿತ ಉಪ್ಪುಲೂರಿ 18. ಪ್ರವೀಣ ಕೋಟೆ 19. ಎಸ್.ಎಸ್. ಸಿರ್ಸಿಕರ್ 20. ಕೆ.ವಿ. ಚಿದಂಬರ 21. ಪಿ. ದಿನೇಶ್ 22. ವಾಣಿ ಎಸ್. ನಾಗ್‌ನೂರ್ 23. ಹರಿಪ್ರಸಾದ್ 24. ಕೃಷ್ಣಮೂರ್ತಿ ಎ 25. ಸತ್ಯನಾರಾಯಣ ಸಿ 26. ನರಸಿಂಹ ಮೂರ್ತಿ ಎಸ್. 27. ಶಿವಾನಂದ ನಾಗನೂರ್ 28. ಚಂದ್ರಶೇಖರ ಎಸ್.ಜಿ. 29. ಎಂ. ಶಿವರಾಮ್ ರೈ 30. ಸಿದ್ದಲಿಂಗಪ್ಪ 31. ಉಮೇಶ್ ಬಾಬು 32. ಹಿಶಮ್ ಎ 33. ಮಂಜುನಾಥ್ ಶೇಟ್ 34. ಪ್ರದೀಪ್ ಎಂ.ಕೆ. 35. ಬಸವರಾಜ್ ಕೆ.ಬಿ. 36. ಮೈಥಿಲಿ ಅತ್ತಾವರ್ 37. ಪ್ರಸಾದ್ ಕೆ. ಶೆಟ್ಟಿ 38. ಪವನ್ ಎಂ. 39. ಸುದರ್ಶನ್ ಶೆಟ್ಟಿ 40. ಹನುಮೇಶ್ ಆಚಾರ್ಯ 41. ಅಮಿತ್ ಗೋಯಲ್ 42. ಸೂರಜ್ ನಂದ 43. ಪ್ರಕಾಶ್ ಎನ್. 44. ಭರತ್ ದೇವ್‌ಕೋಟೆ 45. ಮುರುಗನ್ 46. ಡಿ.ಆರ್. ಹಾವನೂರು 47. ಶಬೀರ್ ಅಹಮದ್ 48. ಎಸ್. ಮಂಜುನಾಥ್ 49. ಬಿ.ಎನ್. ಹರಿಪ್ರಸಾದ್ 50. ಎಂ. ಈಶ್ವರ್ 51. ನಜೀರ್ ಹುಸೇನ್ 52. ನಾರಾಯಣ ಎಸ್. 53. ತಾರಾದತ್ತ ಉಪ್ರೇತಿ 54. ಸುಧೀರ್ ಫಡ್ನೀಸ್

## ದೆಹಲಿ ಕರ್ನಾಟಕ ಸಂಘ

ಸಹಯೋಗ

## ಬಸವ ಇಂಟರ್ ನ್ಯಾಷನಲ್ ಸೆಂಟರ್

# ಬಸವ ಜಯಂತಿ ಆಚರಣೆ

ಏಪ್ರಿಲ್ 29, 2012 ರ ಭಾನುವಾರ

ಸಮಯ : ಸಂಜೆ 5.30ಕ್ಕೆ

ಸ್ಥಳ : ಸಂಘದ ಸಭಾಂಗಣ

### ಸಾಂಸ್ಕೃತಿಕ ಕಾರ್ಯಕ್ರಮಗಳು

### ತಮಗೆಲ್ಲರಿಗೂ ಆದರದ ಸ್ವಾಗತ

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ


## ಉಚಿತ ವೈದ್ಯಕೀಯ ತಪಾಸಣೆ

ಏಪ್ರಿಲ್ 29ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

**ದೆಹಲಿ ಕರ್ನಾಟಕ ಸಂಘದಲ್ಲಿ ಪ್ರತಿ ಶನಿವಾರ ಸಮಯ 3.30 ರಿಂದ 5.30ರವರೆಗೆ ಹಾಗೂ ಭಾನುವಾರ ಸಮಯ 12.00 ರಿಂದ 2.00 ರವರೆಗೆ ಕನ್ನಡ ಭಾಷಾ ಕಲಿಕಾ ತರಬೇತಿಗಳು ಉಚಿತವಾಗಿ ಜರುಗುತ್ತಿವೆ. ಕನ್ನಡ ಭಾಷೆ ಉಳಿಸಲು, ಬೆಳೆಸಲು ಭಾಷಾಭಿಮಾನದಿಂದ ದಯಮಾಡಿ ಮಕ್ಕಳನ್ನು ಹಾಗು ಕನ್ನಡ ಭಾಷೆ ಕಲಿಯಲು ಬಯಸುವ ಇತರರು ದಯವಿಟ್ಟು ಸಂಘವನ್ನು ಸಂಪರ್ಕಿಸಿ.**

**ಪ್ರಧಾನ ಕಾರ್ಯದರ್ಶಿ**

# ಅರಿದಡೆ ಶರಣ, ಮರೆದಡೆ ಮಾನವ



ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ
ದರ್ಪಣ ಬೇರೆ ಕಂಚಲ್ಲ,
ಭಾಂಡ ಒಂದೆ ಭಾಜನ ಒಂದೆ, ಬೆಳಗೆ
ಕನ್ನಡಿ ಎನಿಸಿತ್ತಯ್ಯಾ.
ಅರಿದಡೆ ಶರಣ, ಮರೆದಡೆ ಮಾನವ,
ಮರೆಯದೆ ಪೂಜಿಸು ಕೂಡಲಸಂಗನ.

–ಬಸವಣ್ಣನವರು

ಮನ್ ಎಂದರೆ 'ವಿಚಾರ ಮಾಡು' ಎಂದು ಅರ್ಥ. ವಿಚಾರ ಮಾಡುವ ಶಕ್ತಿಯುಳ್ಳವನು ಮಾನವನಾಗುತ್ತಾನೆ. ವಿಚಾರಗಳ ಉತ್ಪತ್ತಿಗೆ ಪ್ರಜ್ಞೆ ಮೂಲವಾಗಿರುತ್ತದೆ. ಪ್ರಜ್ಞೆಗೆ ವಸ್ತು ಮೂಲವಾಗಿರುತ್ತದೆ. ವಸ್ತು ಎಂದರೆ ಇಡೀ ವಿಶ್ವ. ಕಣ್ಣಿಗೆ ಕಾಣುವಂಥವುಗಳೆಲ್ಲ ವಸ್ತುಗಳೇ. ನಕ್ಷತ್ರ, ಸೂರ್ಯ, ಚಂದ್ರ, ಸಮುದ್ರ, ಅರಣ್ಯ, ಪಶು, ಪಕ್ಷಿ ಮತ್ತು ಮಾನವರು ಹೀಗೆ ಕಣ್ಣಿಗೆ ಕಾಣುವ ಎಲ್ಲವೂ ಮತ್ತು ಎಲ್ಲರೂ ನಿಜವಾದ ಅರ್ಥದಲ್ಲಿ ವಸ್ತುರೂಪದಲ್ಲೇ ಇದ್ದೇವೆ. ವಸ್ತುವಿನಿಂದ ಪ್ರಜ್ಞೆಯು ರೂಪ ತಾಳುತ್ತದೆ. ಆ ಪ್ರಜ್ಞೆಯು ವಿಶ್ವದ ಎಲ್ಲ ವಸ್ತುಗಳನ್ನು ಅವರವರ ಅನುಭವಕ್ಕೆ ತಕ್ಕಂತೆ ಅವರ ಮನದಲ್ಲಿ ಮೂಡಿಸುತ್ತದೆ. ಹೀಗೆ ಪ್ರಜ್ಞೆಯು ವಸ್ತುಗಳನ್ನು ಗ್ರಹಿಸುವ ಶಕ್ತಿಯಾಗಿದೆ. ಪ್ರಜ್ಞೆಯ ಅಸ್ತಿತ್ವಕ್ಕೆ ವಸ್ತು ಇರಲೇ ಬೇಕು. ವಸ್ತು ಇಲ್ಲದೆ ಮಾನವ ಕಲ್ಪಿಸಲಾರ. ನಿಜವಾದ ಅರ್ಥದಲ್ಲಿ ಕಲ್ಪನೆ ಎಂಬುದು ವಸ್ತು ಅಥವಾ ವಸ್ತುಗಳ ಸಹಾಯದಿಂದಲೇ ಮೂಡುವಂಥದ್ದು. ಸ್ಫಿಂಕ್ಸ್ ಕೆತ್ತಿದ ಶಿಲ್ಪಿ ಸಿಂಹವನ್ನು ಮತ್ತು ಹೆಣ್ಣನ್ನು ನೋಡಿದವನಾಗಿರುತ್ತಾನೆ. ಕರಿಯ ಬಣ್ಣ ಮತ್ತು ಹುಲಿಯ ಹಿನ್ನೆಲೆಯೊಂದಿಗೇನೆ ಕಲಾವಿದ ಕರಿಹುಲಿಯ ಚಿತ್ರವನ್ನು ಬಿಡಿಸಿರುತ್ತಾನೆ. ಹೆಣ್ಣು ಮತ್ತು ಮತ್ಸ್ಯದ ವಾಸ್ತವದ ಹಿನ್ನೆಲೆ ಇಲ್ಲದೆ ಮತ್ಸ್ಯಕನ್ಯೆ ಮೂಡಿ ಬರಲಾರಳು. ತೆಂಗಿನ ಮರವಿಲ್ಲದೆ ಕಲ್ಪವೃಕ್ಷವಿಲ್ಲ. ಗೋವು ಇಲ್ಲದೆ ಕಾಮಧೇನು ಇಲ್ಲ. ಆನೆ ಇಲ್ಲದೆ ಐರಾವತ ಇಲ್ಲ. ಹೀಗೆ ಮಾನವನ ಕಲ್ಪನೆಯ ಹಿಂದೆ ವಸ್ತುಗಳು ಅಡಕವಾಗಿವೆ.

"ಭಿತ್ತಿ ಇಲ್ಲದೆ ಬರೆಯಬಹುದೆ ಚಿತ್ತಾರವ?" ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಭಿತ್ತಿಯಂಥ ಭೌತಿಕ ವಸ್ತುಗಳ ಸಹಾಯವಿಲ್ಲದೆ ಚಿತ್ರಗಳನ್ನು ಬಿಡಿಸಲಿಕ್ಕಾಗದು. ಭಿತ್ತಿಯು ಭೌತಿಕವಾದದ ಪ್ರತೀಕವಾದರೆ, ಚಿತ್ತಾರವು ಅನುಭಾವದ ಪ್ರತೀಕವಾಗಿದೆ. ಭಿತ್ತಿ ಇಲ್ಲದೆ ಚಿತ್ತಾರವಿಲ್ಲ. ಹಾಗೆಯೆ ಅನುಭವವಿಲ್ಲದೆ ಅನುಭಾವವಿಲ್ಲ. ವಸ್ತುವಿನ ಜೊತೆಗಿನ ಅನುಭವದ ಮೂಲಕ ಬರುವ ಪ್ರಜ್ಞೆಯು ಭೌತಿಕವಾದಕ್ಕೆ ಪುಷ್ಟಿ ಕೊಡುತ್ತದೆ. ಅನುಭವದ ಮೂಲಕ ಅನುಭಾವದ ಸೃಷ್ಟಿಯಾದಾಗ ಅರಿವು ಮೂಡುತ್ತದೆ. ಹೀಗೆ ಪ್ರಜ್ಞೆ ಎಂಬುದು ವಸ್ತುವಿನ ಗ್ರಹಿಕೆಯ ಮೂಲಕ ಬಂದರೆ, ಅರಿವು ಎಂಬುದು ವಸ್ತುವಿನ ಮೂಲ ಗ್ರಹಿಕೆಯ ಮೂಲಕ ಬರುವುದು. ಈ ಸತ್ಯವನ್ನು ಅರಿತವನೇ ಶರಣ. ಮರೆತವನೇ ಮಾನವ. ಅಂದರೆ ಗ್ರಹಿಕೆಯು ಸಾಮಾನ್ಯ ಮಾನವನ ಗುಣವಾಗಿದೆ. ವಸ್ತುವಿನ ಮೂಲಕ ಸೃಷ್ಟಿಯಾಗುವ ಪ್ರಜ್ಞೆಯೊಂದಿಗೆ ಭೌತಿಕ ಜೀವನ ಸಾಗುವುದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬ ಮಾನವನು ಸಹಜವಾಗಿಯೆ ಇಂಥ ಪ್ರಜ್ಞೆಯಿಂದ ಬದುಕುತ್ತಾನೆ. ಆದರೆ ನೋಟದಿಂದ ಪ್ರಜ್ಞೆ ಪಡೆಯುವ ಶರಣ ಒಳನೋಟದಿಂದ ಅರಿವು ಪಡೆಯುತ್ತಾನೆ. ಹೀಗೆ ಒಳನೋಟವನ್ನು ಮರೆತವನು ಮಾನವನಾಗಿರುತ್ತಾನೆ. ಆದರೆ ಒಳನೋಟವನ್ನು ಅರಿತವನೇ ಶರಣನಾಗಿರುತ್ತಾನೆ ಎಂಬುದನ್ನು ಬಸವಣ್ಣನವರು ಮಾರ್ಮಿಕವಾಗಿ ಹೇಳಿದ್ದಾರೆ.

ವಸ್ತು ಮತ್ತು ಮೂಲವಸ್ತುವಾದ ಚೈತನ್ಯ ಬೇರೆ ಬೇರೆ ಅಲ್ಲ. ಮ್ಯಾಟರ್ ಮತ್ತು ಎನರ್ಜಿ ಬೇರೆ ಬೇರೆ ಅಲ್ಲ ಎಂಬುದು ಇದರ ಅರ್ಥ. ವಿಜ್ಞಾನದ ಎನರ್ಜಿ ತತ್ತ್ವಜ್ಞಾನದಲ್ಲಿ ಸ್ಪಿರಿಟ್ ಎನಸಿಕೊಳ್ಳುತ್ತದೆ. ಮ್ಯಾಟರ್ ಎಂಬುದು ವಸ್ತುವಾದರೆ ಮೂಲವಸ್ತು ಎಂಬುದೇ ಎನರ್ಜಿ ಅಥವಾ ಸ್ಪಿರಿಟ್. ಮೂಲವಸ್ತುವಾದ ಚೈತನ್ಯದಿಂದಲೇ ವಸ್ತುವಿನ ನಿರ್ಮಾಣವಾಗಿದೆ ಎಂಬದರ ಕುರಿತು ಬಸವಣ್ಣನವರು ತಿಳಿಸಿದ್ದಾರೆ. ಇದನ್ನು ಅರಿತವನೇ ಶರಣನಾಗುತ್ತಾನೆ. ಈ ಜ್ಞಾನವಿಲ್ಲದವನು ಬರಿ ಮಾನವನಾಗಿ ಭೌತಿಕ ವಸ್ತುಗಳ ಜೊತೆಗೆ ಜೀವನ ಸಾಗಿಸುತ್ತಾನೆ.

"ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ ದರ್ಪಣ ಬೇರೆ ಕಂಚಲ್ಲ, ಭಾಂಡ ಒಂದೆ ಭಾಜನ ಒಂದೆ, ಬೆಳಗೆ ಕನ್ನಡಿ ಎನಿಸಿತ್ತಯ್ಯಾ." ಎಂದು ಬಸವಣ್ಣನವರು ತಿಳಿಸಿದ್ದಾರೆ. ಉಣ್ಣುವ ಗಂಗಾಳವನ್ನು ಕಂಚಿನಿಂದ ಮಾಡುತ್ತಾರೆ. ಮುಖ ನೋಡಿಕೊಳ್ಳುವ ಕನ್ನಡಿಯನ್ನು ಕೂಡ ಕಂಚಿನಿಂದಲೇ ತಯಾರಿಸುತ್ತಾರೆ. ಹೀಗೆ ಉಣ್ಣುವ ಗಂಗಾಳ ಮತ್ತು ಮುಖ ನೋಡಿಕೊಳ್ಳುವ ಕನ್ನಡಿ ಬೇರೆ ಬೇರೆ ವಸ್ತುಗಳಾದರೆ. ಮೂಲ ವಸ್ತುವಾದ ಕಂಚು ಒಂದೇ ಆಗಿದೆ. ಅಡುಗೆ ಮಾಡುವ ಪಾತ್ರೆಯನ್ನು ಕಂಚಿನಿಂದಲೇ ತಯಾರಿಸುತ್ತಾರೆ. ಅದೇ ರೀತಿ ಊಟದ ಗಂಗಾಳವನ್ನು ಕೂಡ ಕಂಚಿನಿಂದಲೇ ತಯಾರಿಸುತ್ತಾರೆ. ಅದೇ ಕಂಚಿನ ತುಕಡಿಯನ್ನು ತಿಕ್ಕಿ ತಿಕ್ಕಿ ನುಣುಪುಗೊಳಿಸಿ ಕನ್ನಡಿ ತಯಾರಿಸುತ್ತಾರೆ. ಹೀಗೆ ಮೂಲವಸ್ತುವಾದ ಕಂಚು ವಿವಿಧ ರೀತಿಯ ರೂಪು ಪಡೆಯುವುದರ ಮೂಲಕ ಅಡುಗೆ ಪಾತ್ರೆ, ಊಟದ ಗಂಗಾಳ ಮತ್ತು ಮುಖ ನೋಡಿಕೊಳ್ಳುವ ಕನ್ನಡಿಯಾಗುತ್ತದೆ.

ಈ ರೀತಿ ಜಗತ್ತು ರೂಪುಗೊಳ್ಳುವ ಕ್ರಮವನ್ನು ಬಸವಣ್ಣನವರು ಅರುಹಿದ್ದಾರೆ. ಬಸವಣ್ಣನವರ ಸಿದ್ಧಾಂತ ಬಯಲು ಸಿದ್ಧಾಂತವಾಗಿದೆ. ಬಯಲಿನಿಂದ ಸೃಷ್ಟಿಯಾದುದು ಬಯಲಲ್ಲೇ ಲಯವಾಗುತ್ತದೆ. ಬಯಲು ಎಂಬುದೇ ಮೂಲವಸ್ತು. ಈ ಬಯಲನ್ನು ಶೂನ್ಯ ಅಥವಾ ಚೈತನ್ಯ ಎಂದೂ ಕರೆಯುತ್ತಾರೆ. ಇದುವೆ ಸ್ಪಿರಿಟ್ ಅಥವಾ ಎನರ್ಜಿ. ಈ ಮೂಲವಸ್ತುವಿನಿಂದಲೇ ನಕ್ಷತ್ರಗಳು, ಸೂರ್ಯ, ಚಂದ್ರ, ಪೃಥ್ವಿ ಮುಂತಾದ ಆಕಾಶಕಾಯಗಳ ನಿರ್ಮಾಣವಾಗಿದೆ. ಮಾನವರು, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಗಿಡಮರಬಳ್ಳಿಗಳು, ನದಿ ಮತ್ತು ಸಮುದ್ರಗಳು ಹೀಗೆ ಪೃಥ್ವಿಯಲ್ಲಿ ಕಾಣುವುದೆಲ್ಲವೂ ಪೃಥ್ವಿಯಿಂದಲೇ ಜನ್ಮ ತಾಳಿದ್ದಾಗಿರುತ್ತವೆ. ಆದರೆ ಪೃಥ್ವಿ ಸಮೇತ ಇಡೀ ವಿಶ್ವವು ಬಯಲೆಂಬ ಚೈತನ್ಯದಿಂದ ಸೃಷ್ಟಿಯಾಗಿದೆ. ಸೂರ್ಯ, ಚಂದ್ರ ತಾರೆಗಳ ಸಮೇತ ಕಾಣುವುದೆಲ್ಲವೂ ಒಂದಿಲ್ಲ ಒಂದು ದಿನ ಲಯವಾಗಿ ಮೂಲವಸ್ತುವಾದ ಚೈತನ್ಯದಲ್ಲಿ ಒಂದಾಗಲೇ ಬೇಕು. ಇದನ್ನು ಅರಿತವನೇ ಶರಣ. ಮರೆತವನೇ ಮಾನವ. ಆದ್ದರಿಂದಲೇ "ಮರೆಯದೆ ಪೂಜಿಸು ಕೂಡಲಸಂಗನ" ಎಂದು ಬಸವಣ್ಣನವರು ಹೇಳಿದ್ದಾರೆ. ಬಸವಣ್ಣನವರ ಪೂಜೆಯು ಮೂಲವಸ್ತುವನ್ನು ಅರಿತುಕೊಳ್ಳುವ ಕ್ರಮವಾಗಿದೆ.

"ಬಯಲ ರೂಪ ಮಾಡಬಲ್ಲಾತನೆ ಶರಣನು;
ಆ ರೂಪ ಬಯಲು ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ?
ಆ ರೂಪ ಬಯಲ ಮಾಡಲರಿಯದಿದ್ದಡೆ ಎಂತು ಲಿಂಗಾನುಭಾವಿ ಎಂಬೆ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ
ಕೂಡಲಸಂಗಮದೇವಾ."

ಎಂದು ಬಸವಣ್ಣನವರು ಹೇಳುವಲ್ಲಿ ಈ ಅರಿವಿನ ವಿರಾಟ ಸ್ವರೂಪವನ್ನು ತೋರಿಸಿಕೊಟ್ಟಿದ್ದಾರೆ. ಚೈತನ್ಯದಿಂದ ವಸ್ತುವಾಗಿರುವುದನ್ನು ಅರಿತವನೇ ಶರಣ. ಆ ವಸ್ತು ಲಯವಾಗಿ ಮತ್ತೆ ಚೈತನ್ಯವಾಗುತ್ತದೆ ಎಂಬುದನ್ನು ಅರಿತವನೇ ಲಿಂಗತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ ಲಿಂಗಾನುಭಾವಿ. ಚೈತನ್ಯವನ್ನು ವಸ್ತುರೂಪದಲ್ಲಿ ಕಂಡುಕೊಂಡು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವಾತನೇ ಶರಣ. ಶಿವ ಎಂಬುದೇ ಚೈತನ್ಯ. ಆ ಚೈತನ್ಯದಿಂದ ರೂಪ ತಳೆದ ಸಕಲ ಜೀವಾತ್ಮರು ಶಿವಸ್ವರೂಪಿಗಳೇ ಆಗಿದ್ದಾರೆ. ಆದ್ದರಿಂದ ಲೋಕದಲ್ಲಿ ಸರ್ವಸಮತ್ವವನ್ನು ಅರಿತವನು ಶರಣ ಎಂದು ಕರೆಯಿಸಿಕೊಳ್ಳುವನು. ಆತ ಹೀಗೆ ಬದುಕನ್ನು ಅರ್ಥೈಸಿಕೊಳ್ಳದಿದ್ದರೆ ಅವನಿಗೆ ಶರಣನೆಂದು ಕರೆಯಲಿಕ್ಕಾಗದು. ಈ ವಿಶ್ವ ಮತ್ತೆ ತನ್ನ ರೂಪವನ್ನು ಕಳೆದುಕೊಂಡು ಬಯಲಾಗುವುದು ಎಂಬ ಅಂತಿಮ ಸತ್ಯವನ್ನು ಅರಿತ ಶರಣನೇ ಲಿಂಗಾನುಭಾವಿಯಾಗುತ್ತಾನೆ. ಲಿಂಗತತ್ತ್ವವು ವಿಶ್ವದ ಆದಿ ಮತ್ತು ಅಂತ್ಯದ ಪರಿಜ್ಞಾನವನ್ನು ಕೊಡುವ ತತ್ತ್ವವಾಗಿದೆ. ಇವುಗಳ ಮಧ್ಯೆ ಇರುವ ಬದುಕನ್ನು ಲಿಂಗಾಂಗ ಸಾಮರಸ್ಯದೊಂದಿಗೆ ಅರ್ಥಪೂರ್ಣಗೊಳಿಸುವ ಕ್ರಮವನ್ನು ಲಿಂಗತತ್ತ್ವ ಸಾರುತ್ತದೆ. ಲಿಂಗವೇ ಚೈತನ್ಯ. ಅಂಗವೇ ನಮ್ಮ ದೇಹ ಎಂಬ ವಸ್ತು. ಇವುಗಳ ಮಧ್ಯದ ಅಂದರೆ ಶಿವ ಮತ್ತು ಜೀವರ ಮಧ್ಯದ ಸಾಮರಸ್ಯವೇ ಲಿಂಗಾಂಗ ಸಾಮರಸ್ಯ. ಹೀಗೆ ಲಿಂಗಾಂಗ ಸಾಮರಸ್ಯ ಹೊಂದಿದವರು ಪ್ರಸಾದಕಾಯರಾಗುತ್ತಾರೆ. ಇಂಥ ಲಿಂಗಾಂಗ ಸಾಮರಸ್ಯವನ್ನು ಹೊಂದಿದವರೇ ಲಿಂಗಾನುಭಾವಿಗಳು. ಎಲ್ಲವೂ ಲಯವಾಗುವ ಅಂತಿಮ ಸತ್ಯವನ್ನು ಅರಿಯಲು ಲಿಂಗಾಂಗಸಾಮರಸ್ಯ ಅವಶ್ಯವಾಗಿದೆ. ರೂಪ ಲಯವಾಗಿ ಬಯಲಾಗುವ ಅಂತಿಮ ಸತ್ಯವನ್ನು ಅರಿಯದವರು ಲಿಂಗಾನುಭಾವಿಗಳಾಗಲು ಸಾಧ್ಯವಿಲ್ಲ. ಇಂಥ ಬಯಲು ಮತ್ತು ರೂಪ ಒಂದಾಗಿರುವುದನ್ನು ಅರಿತುಕೊಂಡಾಗ ಶಿವ ಮತ್ತು ಜೀವರಲ್ಲಿ ಅಭೇದ್ಯ ಉಂಟಾಗುವುದು. ಈ ಸತ್ಯವನ್ನು ಅರಿತುಕೊಂಡವರು ಶರಣರಾಗುತ್ತಾರೆ; ಮರೆತವರು ಮಾನವರಾಗಿ ಸುಮ್ಮನೆ ಬದುಕಿ ಸತ್ತುಹೋಗುತ್ತಾರೆ.

■ ರಂಜಾನ್ ದರ್ಗಾ
ನಿರ್ದೇಶಕ, ವಚನ ಅಧ್ಯಯನ ಕೇಂದ್ರ ಬೀದರ್

# ರಾಘವೇಂದ್ರ ಉಪಾಧ್ಯಾಯ ಅವರ ಹಿಂದೂಸ್ತಾನಿ ಗಾಯನ




ಗೋಕರ್ಣ ಮಂಡಲದ ಸಹಯೋಗದೊಂದಿಗೆ ಸಂಘವು ಮಾರ್ಚ 18 ರಂದು ಸಂಘದ ಸಭಾಂಗಣದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಕಾರ್ಯಕ್ರಮದ ಆರಂಭದಲ್ಲಿ ಗೋಕರ್ಣ ಮಂಡಲದ ಹಿರಿಯ ಸದಸ್ಯರಾದ ಡಾ. ಬಿ.ವಿ ಅಡ್ಕೋಳಿಯವರು ಕಲಾವಿದರನ್ನು ಹಾಗೂ ಕಲಾಸಕ್ತರನ್ನು ಸ್ವಾಗತಿಸುತ್ತಾ ಗೋಕರ್ಣ ಮಂಡಲ ನಡೆದು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕರ್ನಾಟಕ ಸಂಘ ಹಾಗೂ ಗೋಕರ್ಣ ಮಂಡಲದ ಸಂಬಂಧಗಳನ್ನು ನೆನಪಿಸಿಕೊಂಡರು. ಶಾಸ್ತ್ರೀಯ ಸಂಗೀತದಂಥ ಕಾರ್ಯಕ್ರಮವನ್ನು ಸಂಘದ ಸಹಯೋಗದೊಂದಿಗೆ ನಡೆಸುವುದು ನಮಗೆಲ್ಲ ಒಂದು ಹೆಮ್ಮೆ, ಇಂಥ ಕಾರ್ಯಕ್ರಮಗಳು ಇನ್ನು ಮುಂದೆಯೂ ನಡೆಯಲಿ ಎಂದು ಆಶಿಸಿದರು. ತದ ನಂತರ ವೇದಿಕೆಯಲ್ಲಿ ಉಪಸ್ಥಿತರಿದ್ದ ಕಲಾವಿದರ ಪರಿಚಯವನ್ನು ಸಂತೋಷ ಕುಮಾರ್ ಉಪಾಧ್ಯಾಯರು ಮಾಡಿಕೊಟ್ಟರು. ಸುಮಾರು ಒಂದೂವರೆ ಘಂಟೆಗಳ ಕಾಲ ಶ್ರೋತೃಗಳನ್ನು ತಮ್ಮ ಗಾನ ಗಂಗೆಯಲ್ಲಿ ತೇಲಾಡಿಸಿದ ಕರ್ನಾಟಕದ ಯುವ ಉದಯೋನ್ಮುಖ ಗಾಯಕರಾದ ರಾಘವೇಂದ್ರ ಉಪಾಧ್ಯಾಯರು ತಮ್ಮ ಗಾಯನವನ್ನು ಆರಂಭಿಸಿದ್ದು ರಾಗ್ ಮಧುವಂತಿಯಿಂದ ವಿಲಂಬಿತ್ ಏಕ್ ತಾಲದಲ್ಲಿ ಗಂಭೀರವಾಗಿ ಆಲಾಪಿಸಿದ ರಾಘವೇಂದ್ರ ಉಪಾಧ್ಯಾಯರು "ಸೈಯಾಂ ಹಮ ಜಾನೇರೇ ತೋರೇ ಮನ್ ಕೀ ಬಾತ್" ಎಂಬ ಚೀಜ್ ಅನ್ನು ಅದ್ಭುತ ಲಯಕಾರಿಯೊಂದಿಗೆ ಪ್ರಸ್ತುತ ಪಡಿಸಿದರು ನಂತರ ಧೃತ್ ತೀನ್ ತಾಲದಲ್ಲಿ "ಮಂದರವಾ ಮೋರೇ ಮಂದರವಾ" ಎಂಬ ಚೀಜ್‌ನ್ನು ತಮ್ಮ ಸರಾಗವಾದ ಶೈಲಿಯಿಂದ ಹಾಡಿ ಪ್ರೇಕ್ಷಕರ ಮನಸೂರೆಗೊಂಡರು. ತದನಂತರ ಪುರಂದರ ದಾಸ ರಚಿತ ಪದ ಹಾಗೂ ಅಕ್ಕ ಮಹಾದೇವಿಯ ವಚನ ಮತ್ತು ದ ರಾ ಬೇಂದ್ರೆಯವರ ಭಾವಗೀತೆಗಳನ್ನು ಸುಂದರವಾದ ರಾಗ ಸಂಯೋಜನೆಗಳ ಮೂಲಕ ಮನಮುಟ್ಟುವಂತೆ ಪ್ರಸ್ತುತ ಪಡಿಸಿದ ಈ ಉದಯೋನ್ಮುಖ ಕಲಾವಿದ ಭವಿಷ್ಯದಲ್ಲಿ ತಾನೊಬ್ಬ ಪರಿಪೂರ್ಣ ಸಂಗೀತ ಗಾರನಾಗುವುದನ್ನು ನಿಚ್ಚಳಪಡಿಸಿದರು. ಸಾಯಂಕಾಲದ ರಾಗವಾದ ಮಧುವಂತಿಯಿಂದ ವಾತಾವರಣವನ್ನು ಗಂಧರ್ವಲೋಕವಾಗಿ ಮಾರ್ಪಡಿಸಿದ ಶ್ರೀ ರಾಘವೇಂದ್ರ ಉಪಾಧ್ಯಾಯರಿಗೆ ಕಾರ್ಯಕ್ರಮದ ಕೊನೆಯಲ್ಲಿ ಗೋಕರ್ಣ ಮಂಡಲದ ಅಧ್ಯಕ್ಷರಾದ ಶ್ರೀ ರಾಮಚಂದ್ರ ಹೆಗಡೆಯವರು ಪುಷ್ಪಗುಚ್ಛವನ್ನು ಇತ್ತು ಗೌರವಿಸಿದರೆ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಸಂಘದ ಸ್ಮರಣಿಕೆ ನೀಡಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಸಾಥ್ ನೀಡಿದ ಸಹ ಕಲಾವಿದರಾದ ಶ್ರೀ ತಾನ್ ಸೇನ್ ಶ್ರೀವಾಸ್ತವ(ತಬಲಾ) ಹಾಗೂ ಶ್ರೀ ದಾಮೋದರ್ ಲಾಲ್ ಘೋಷ್(ಹಾರ್ಮೋನಿಯಂ) ಇವರುಗಳಿಗೆ ಹೂ ಗುಚ್ಛ ನೀಡಿ ಗೌರವಿಸಲಾಯಿತು. ಕೊನೆಯಲ್ಲಿ ಮಾತನಾಡಿದ ಡಾ. ವೆಂಕಟಾಚಲ ಹೆಗಡೆಯವರು ತಮ್ಮ ಊರಾದ ಹಳಗೋಳದಲ್ಲಿ ಹುಟ್ಟಿ ಬೆಳೆದು ಈಗ ಉಡುಪಿಯಲ್ಲಿ ಸಂಗೀತದ ಸಾಧನೆ ಮಾಡುತ್ತಿರುವ ರಾಘವೇಂದ್ರರಿಗೆ ಉತ್ತಮ ಭವಿಷ್ಯ ಇದೆ, ಅವರು ಈಗ ನಮ್ಮೆಲ್ಲರ ಸಂಘದಲ್ಲಿ ಈ ಒಂದು ಅಮೋಘವಾದ ಕಾರ್ಯಕ್ರಮವನ್ನು ನೀಡಿರುವುದು ತಮಗೆ ತೃಪ್ತಿ ನೀಡಿದೆ ಎಂದು ಹೇಳಿದರು, ಈ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಗೋಕರ್ಣ ಮಂಡಲಕ್ಕೆ ಅಭಿನಂದಿಸಿದರು.

■ ಬಿ.ವಿ. ಅಡ್ಕೋಳಿ

## ಅಂತರರಾಷ್ಟ್ರೀಯ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಸಮ್ಮೇಳನದಲ್ಲಿ ಪ್ರೊ. ಡಾ. ಬಿ.ಟಿ. ಚಿದಾನಂದ ಮೂರ್ತಿ ಅವರಿಗೆ ಜೀವಮಾನ ಸಾಧನೆ ಪುರಸ್ಕಾರ



ಪ್ರಕೃತಿ ಚಿಕಿತ್ಸೆ, ಯೋಗ, ಸಂಶೋಧನೆ, ಶಿಕ್ಷಣ ಮತ್ತು ಚಿಕಿತ್ಸಾ ಕ್ಷೇತ್ರದಲ್ಲಿ 37 ವರ್ಷ ರಾಷ್ಟ್ರೀಯ ಮಟ್ಟದಲ್ಲಿ ಮಾಡಿದ ಗಣನೀಯ ಸೇವೆಗಾಗಿ ಪ್ರೊ. ಡಾ. ಬಿ.ಟಿ. ಚಿದಾನಂದ ಮೂರ್ತಿ ಅವರಿಗೆ ಫೆಬ್ರವರಿ 12ರಂದು ಬೆಂಗಳೂರಿನಲ್ಲಿ ನಡೆದ ಅಂತರ ರಾಷ್ಟ್ರೀಯ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಸಮ್ಮೇಳನದಲ್ಲಿ ಜೀವಮಾನ ಸಾಧನೆ ಪುರಸ್ಕಾರ ನೀಡಿ ಗೌರವಿಸಲಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಕೆ. ರಾಮದಾಸ್ ಅವರು ಈ ಪುರಸ್ಕಾರ ಪ್ರದಾನ ಮಾಡಿದರು. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ AYUSH ವಿಭಾಗದ ನಿರ್ದೇಶಕರಾಗಿ ದೇಶದಾದ್ಯಂತ ಸೇವೆ ಸಲ್ಲಿಸಿರುವ ಡಾ. ಮೂರ್ತಿ ಅವರು ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಏಳಿಗೆಗಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

# ವಿಭಿನ್ನ ವಿಷಯಗಳ ಮೂರು ನಾಟಕಗಳ ರಸದೌತಣ

ಯಜ್ಞಯಾಗಾದಿಗಳು ಮಾನವ ಕಲ್ಯಾಣಾರ್ಥ ಎಂದು ಆದಿ ಕಾಲದಿಂದಲೂ ನಡೆದು ಬಂದ ನಂಬಿಕೆ. ಆದರೆ ಈ ನಂಬಿಕೆಯು ಮರೆಯಲ್ಲಿ ಇದನ್ನು ಆಗಗೊಡುವ ಪ್ರಭೃತಿಗಳ ಅಹಂ–ತುಷ್ಟಿ, ಅಧಿಕಾರ ದಾಹ, ಅಧಿಕಾರಕ್ಕಾಗಿ ಪಟ್ಟಭದ್ರರ ತಂತ್ರ, ಕುತಂತ್ರಗಳಿಗೆ ಅಮಾಯಕ ಜನಮಾನಸದ ಬಲಿ, ಯಜ್ಞಯಾಗಾದಿಗಳಿಗಾಗಿ ನಿರಂತರ ನಡೆಯುತ್ತಲೇ ಇದೆ. ಇಂಥ ಒಂದು ವಿಚಾರದ ನೆಲಗಟ್ಟಿನಲ್ಲಿ ಮತ್ತೊಮ್ಮೆ ಮಾನವ ಸಮುದಾಯ ಚಿಂತಿಸಬೇಕಾದದ್ದು ಇಂದಿನ ಅನಿವಾರ್ಯತೆ ಎಂದು ದೆಹಲಿ ಕನ್ನಡಿಗರ ಮನದಲ್ಲಿ ಮೂಡಿರಲು ಸಾಕು. ಇದಕ್ಕೆ ಕಾರಣ ಮಾರ್ಚ್ 10ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಮಂಡ್ಯ ರಮೇಶ್ ಅವರ 'ನಟನ' ತಂಡ ಪ್ರಸ್ತುತಪಡಿಸಿದ ಗಿರೀಶ ಕಾರ್ನಾಡರ ನಾಟಕ 'ಅಗ್ನಿ ಮತ್ತು ಮಳೆ'ಯ ವೀಕ್ಷಣೆಯ ನಂತರ. ಎಲ್ಲ ಪ್ರಾಣಿಗಳ ಮಧ್ಯೆ ಮಾನವ ಪ್ರಾಣಿ ಶ್ರೇಷ್ಠ ಎಂದು ಪರಿಗಣಿಸಲ್ಪಟ್ಟಿದ್ದು ಆತನ ಜ್ಞಾನ, ವಿಜ್ಞಾನ ವಿಚಾರಗಳ ತಳಹದಿಯ ಮೇಲೆ. ಜ್ಞಾನಾರ್ಜನೆಯು ಹೆಚ್ಚಾದಂತೆ ಅದರ ಸದ್ವಿನಿಯೋಗಕ್ಕಿಂತ ಸ್ವಾರ್ಥ, ಲಾಲಸೆ, ಅಧಿಕಾರದಾಹ ಮುಂತಾದ ತಾಮಸ ಗುಣಗಳತ್ತ ವಾಲುತ್ತಿರುವುದು ದುರಂತ. ಆದರೆ ಇದು ಅನಾದಿ ಕಾಲದಿಂದ ನಡೆದು ಬಂದದ್ದು. ಪ್ರಸ್ತುತ ನಾಟಕದಲ್ಲಿ ರೈಭ್ಯರ ಅಹಂ, ಯುವಕ್ರೀತರ ಅಹಂ ಹಾಗೂ ದ್ವೇಷ, ಪರಾವಸುವಿನ ಸ್ವಾರ್ಥದ ಪರಿಣಾಮ ಮುಗ್ಧ ಮಾನವೀಯ ಮೌಲ್ಯಗಳ ಸಂಕೇತಗಳಾಗಿರುವ ಅರವಸು ಹಾಗೂ ನಿತ್ತಿಲೆಯರ ಮೇಲೆ ಪಟ್ಟಭದ್ರ ದಮನಕಾರಿ ಹಿತಾಸಕ್ತಿಗಳ ಪ್ರಹಾರ ನಿರಂತರ. ಇಂಥ ದುರ್ಭರ ಘಟನೆಗಳಿಗೆ ಮೂಕ ಸಾಕ್ಷಿ ಕುರುಡಜ್ಜ. ಈತ 'ಕಾಲ' (ಸಮಯ) ಕ್ಕೆ ಒಂದು ಪ್ರತೀಕ. ಅನಾದಿ ಕಾಲದಿಂದ ಇಂದಿನವರೆಗೆ ಮಾನವನ ಈ ತೆರನಾದ ತಾಮಸ ಗುಣಗಳಾದ ಅಹಂ, ಸ್ವಾರ್ಥಲಾಲಸೆಗಳಿಂದ ಮಾನವ ಸಮುದಾಯ ಪಡೆದದ್ದಕ್ಕಿಂತ ಕಳಕೊಂಡದ್ದೇ ಹೆಚ್ಚು. ಇಂಥ ಸಂದರ್ಭಗಳ ಪರಾಕಾಷ್ಠೆ ಪಟ್ಟಭದ್ರರ ಮದೋನ್ಮತ್ತ 'ಅಗ್ನಿ' (ದಳ್ಳುರಿ) ತಾನೂ ಸುಡುತ್ತಾ ಸುತ್ತಮುತ್ತಲ ಅಮಾಯಕರನ್ನು ಆಹುತಿ ತೆಗೆದುಕೊಳ್ಳುತ್ತ ವಿನಾಶಕ್ಕೆ ದಾರಿ. . . . . ಆದರೆ, ಮತ್ತೆ ನಿತ್ತಿಲೆ ಅರವಸುವಿನಂತಹ ಸೂಜ್ಞ ಜನಸಮುದಾಯದ ಆಶೋತ್ತರಗಳ 'ಮಳೆ' ಎಂಥೆಂಥಾ ದಳ್ಳುರಿಗಳನ್ನೇ ಶಾಂತಗೊಳಿಸಿ ಬದುಕಿಗೆ ಹೊಸ ನೆಲಗಟ್ಟನ್ನು ಸಿದ್ಧ ಮಾಡುತ್ತಲೇ ಇರುತ್ತದೆ. 'ಸಮಯ ಎಲ್ಲವನ್ನು ಸರಿ ಮಾಡುತ್ತದೆ' ಇಡೀ ನಾಟಕ ದೆಹಲಿ ಕನ್ನಡಿಗರ ಮನದಲ್ಲಿ ಒಂದು ಅಚ್ಚಳಿಯದ ಜಿಜ್ಞಾಸೆ ಹುಟ್ಟು ಹಾಕಿದೆ. 'ಅಗ್ನಿ ಮತ್ತು ಮಳೆ' ಇದು ಒಂದು ಗಟ್ಟಿ ರಂಗ ಪ್ರಯೋಗ.



ಅಗ್ನಿ ಮತ್ತು ಮಳೆ

ಮಾರ್ಚ್ 11ರ ಬೆಳಿಗ್ಗೆ ಪದ್ಮಶ್ರೀ ಹಬೀಬ್ ತನ್ವೀರರ 3 ದಶಕಗಳ ಹಿಂದಿನ ನಾಟಕ 'ಚೋರ ಚರಣದಾಸ'ದ ಮಂಚನ.

ಇಂದಿನ ದಿನಗಳಲ್ಲಿ ಹೆಜ್ಜೆ ಹೆಜ್ಜೆಗೂ ಭ್ರಷ್ಟ, ಲಂಪಟ, ಮೋಸಗಾರರ ಪಡೆಯೇ ಎದುರಾಗುತ್ತದೆ. ಇಂಥ ದಂಡು ತಮ್ಮ ಕಾರ್ಯ ಸಮರ್ಥನೆಗಾಗಿ ಮಠ, ಮಾನ್ಯರ ಆಶ್ರಯದ ದುರುಪಯೋಗ ಪಡೆದು ಜನಮಾನಸದ ಸುಲಿಗೆ ನಿರಂತರ ಕಾಯಕವನ್ನಾಗಿಸಿಕೊಳ್ಳುವ ಸ್ಥಿತಿ. ಆದರೆ ಕಳ್ಳನೊಬ್ಬ ತನ್ನ ಸತ್ಯವಾಕ್ಯಕೆ ತಪ್ಪಿ ನಡೆಯೆನೆಂದು ಗುರುವಿಗೆ ವಚನ ಕೊಟ್ಟು, ಅದರಂತೆ ನಡೆಯುವ ದಾರಿಯಲ್ಲಿ ಅನುಭವಿಸುವ ತೊಂದರೆ, ಆತನ ಸತ್ಯಸಂದತೆಯೇ ಆತನ ಜೀವಕ್ಕೆ ಎರವಾಗುವ ಸ್ಥಿತಿ ಬಂದರೂ ಹೆದರದೆ ಸತ್ಯವಾಕ್ಯಕೆ ಕಟ್ಟುಬಿದ್ದು, ಸತ್ಯ ಸಂಧತೆಯ ತ್ಯಾಗಮಾಡದೆ ಪ್ರಾಣ ತೆತ್ತುವ ಮನ ಕಲಕುವ ನಾಟಕ ವಸ್ತು. ಇದೊಂದು ವರ್ತಮಾನದ ಮಾನವ ಲಾಲಸೆಗಳಿಗೆ ಹಿಡಿದ ಕೈಗನ್ನಡಿ. ವಿಡಂಬನಾತ್ಮಕವಾಗಿ ವರ್ತಮಾನ ಕಾಲಘಟ್ಟದ ಸತ್ಯಸ್ಥಿತಿ, ಢೋಂಗಿತನಗಳನ್ನೂ ಹೊರಹಾಕುವ ದಿಟ್ಟ ಪ್ರಯತ್ನ–ಈ ನಾಟಕದಲ್ಲಿ ಹಾಸುಹೊಕ್ಕಾಗಿದೆ. ಇದೊಂದು ಯಶಸ್ವಿ ಪ್ರಯೋಗ ಎಂದೇ ಹೇಳಬೇಕು.

'ನಟನ ಮೈಸೂರು' ತಂಡ ಮಾರ್ಚ್ 11ರ ಸಂಜೆ ಪ್ರದರ್ಶಿಸಿದ 3ನೇ ನಾಟಕ ವೈದೇಹಿ ಅವರ 'ಸತ್ರೂ ಅಂದ್ರೆ ಸತ್ರಾ' ಒಂದು ವಿಡಂಬನಾತ್ಮಕ ನಾಟಕ. ಜನರಲ್ಲಿ ನಗೆಯ ಅಲೆ ಎಬ್ಬಿಸುತ್ತ ಪ್ರಜಾಪ್ರತಿನಿಧಿತ್ವದ ದೊರೆಗಳ ಎಡಬಿಡಂಗಿತನದ ದರ್ಶನ ಮಾಡಿಸುತ್ತ, ಆಲೋಚನೆಗೆ ಎಡೆಮಾಡಿ ಕೊಟ್ಟ ನಾಟಕ. ಪ್ರಸ್ತುತ ರಾಜ್ಯ, ರಾಷ್ಟ್ರ ಹಾಗೂ ವಿಶ್ವಮಟ್ಟದ ಆಳುವ ವರ್ಗದ ಅಧಿಕಾರಕ್ಕೆ ಹಪಹಪಿಸುವ ನೈಜ ಚಿತ್ರಣಕ್ಕೆ ಒಂದು ಕೈಗನ್ನಡಿಯಾಗಿ ಪ್ರಸ್ತುತಗೊಂಡ ನಾಟಕ. ಮೂಲತಃ ಮಕ್ಕಳ ನಾಟಕವಾದರೂ ಹಿರಿಯ ಕಲಾವಿದರು ಇದನ್ನು ಸರ್ವರಿಗಾಗಿ ಅಭಿನಯಿಸಿದ್ದು ಸ್ತುತ್ಯಾರ್ಹ.

ಒಟ್ಟಾರೆ 'ನಟನ ಮೈಸೂರು' ತಂಡ ಹೆಸರಿಗೆ ತಕ್ಕಂತೆ ಎಲ್ಲ ಕಲಾವಿದರ ನಟನಾ ಸಾಮರ್ಥ್ಯ, ಕನ್ನಡ ರಂಗಭೂಮಿಗೆ ಈ ತಂಡದ ಸಮರ್ಪಣಾ ಭಾವ, ಶಿಸ್ತು, ಒಂದು ಮಾದರಿಯಾಗಿ ಪ್ರಸ್ತುತ. ನಟ, ನಿರ್ದೇಶಕ, ಸುಮಾರು 40–45 ಜನರ ಈ ತಂಡದ ರೂವಾರಿ ಶ್ರೀ ಮಂಡ್ಯ ರಮೇಶರ ಪ್ರಯತ್ನ ಶ್ಲಾಘನೀಯ. ಇಂಥ ವಿಭಿನ್ನ ಮೂರು ನಾಟಕಗಳ ರಸದೌತಣ ದೆಹಲಿ ಕನ್ನಡಿಗರಿಗೆ ಉಣಬಡಿಸಿದ ಶ್ರೀ ಮಂಡ್ಯ ರಮೇಶ ತಮಗೆ, ತಮ್ಮ ಈ ಪ್ರಯತ್ನಕ್ಕೆ ದೆಹಲಿ ಕನ್ನಡಿಗರ ಅಭಿನಂದನೆ.

❑ ಶಿವಾನಂದ ಇಂಗಳೇಶ್ವರ



ಚೋರ ಚರಣದಾಸ



ಸತ್ರು ಅಂದ್ರೆ ಸತ್ರಾ

# ವಾರ್ಷಿಕ ಆಟೋಟ ಸ್ಪರ್ಧೆ ಹಾಗೂ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣೆ




ಮಾರ್ಚ್ 11, 2012 ಸಂಘದ ಸಭಾಂಗಣದಲ್ಲಿ ವಾರ್ಷಿಕ ಆಟೋಟ ಸ್ಪರ್ಧೆ ಹಾಗೂ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಯಾಗಿ ಹಿರಿಯ ವಿಶಿಷ್ಠ ಕನ್ನಡಿಗ ಹಾಗೂ ಭಾರತ ಸರ್ಕಾರದ ನಿವೃತ್ತ ಅಧಿಕಾರಿ ಎನ್.ಜೆ. ಕಾಮತ್ ಅವರು ಆಗಮಿಸಿದ್ದರು. 'ನಟನಾ' ತಂಡದ ನಿರ್ದೇಶಕ, ನಟ ಮಂಡ್ಯ ರಮೇಶ್ ಅವರೂ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರನ್ನು ಸ್ವಾಗತಿಸಿದರು. ಹಿರಿಯ ಕನ್ನಡಿಗ ಎನ್.ಜೆ. ಕಾಮತರು ಬಹುಮಾನ ವಿತರಣಾ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತ ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ಪಾಠಗಳಷ್ಟೇ ಆಟೋಟಗಳಲ್ಲಿಯೂ ಹೆಚ್ಚಿನ ಅವಕಾಶಗಳು ಇವೆ. ಪ್ರತಿ ಮಕ್ಕಳಲ್ಲಿಯೂ ಒಂದಿಲ್ಲಾ ಒಂದು ವಿಶೇಷ ಪ್ರತಿಭೆಯಿರುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು, ಆಸಕ್ತಿಯನ್ನು ಗುರುತಿಸಿ ಸರಿಯಾದ ಮಾರ್ಗದರ್ಶನ ನೀಡಬೇಕು ಎಂಬುದಾಗಿ ಕಿವಿಮಾತನ್ನು ಹೇಳಿದ ಎನ್.ಜೆ. ಕಾಮತರು ತಮ್ಮ ಬಾಲ್ಯ ಕಾಲದ ಘಟನೆಗಳನ್ನು ಮೆಲುಕು ಹಾಕಿದರು. ಇದೇ ಸಂದರ್ಭದಲ್ಲಿ ಇನ್ನೊಬ್ಬ ಅತಿಥಿಯಾಗಿ ಮಂಡ್ಯ ರಮೇಶ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ತರ ಕಾರ್ಯವನ್ನು ಸಾಧಿಸುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯವೈಖರಿಯನ್ನು ಶ್ಲಾಘಿಸುತ್ತ, ಪ್ರತಿಯೊಬ್ಬ ದೆಹಲಿ ಕನ್ನಡಿಗರು ತಮ್ಮ ಮಕ್ಕಳೊಂದಿಗೆ ಕನ್ನಡವನ್ನೆ ಮಾತನಾಡಿ, ಕನ್ನಡ ಕಲಿಸಿರಿ. ಹಿರಿಯರು ಕಟ್ಟಿ ನಿಲ್ಲಿಸಿದ ಇಂತಹ ಭವ್ಯ ಕಟ್ಟಡದಲ್ಲಿ ಮುಂದೊಂದು ದಿನ ಕನ್ನಡವನ್ನು ಮಾತನಾಡುವ ಪೀಳಿಗೆಯೇ ಇಲ್ಲದಂತಾಗಬಾರದು. ಮಕ್ಕಳಿಗೆ ಕನ್ನಡ ಕಲಿಸಿ, ಕನ್ನಡದಲ್ಲೇ ಮಾತನಾಡಿ, ಕನ್ನಡ ಪದ್ಯ ಹೇಳಿಕೊಡಿ, ಕೂರಿಸಿ ಕತೆ ಹೇಳಿ, ಆಗ ಮಕ್ಕಳು ತಾವೇ ಕಲಿಯುತ್ತವೆ ಎಂಬ ಮುತ್ತಿನಂಥ ಮಾತುಗಳನ್ನು ಪೋಷಕರಿಗೆ ಒತ್ತಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಮಾತನಾಡಿ ಸಂಘ ನಡೆಸಿಕೊಂಡು ಬರುತ್ತಿರುವ ಎಲ್ಲಾ ಆಟೋಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಗೆದ್ದಿರುವ ಎಲ್ಲ ಕನ್ನಡ ಮನಸುಗಳಿಗೆ ಹಾರ್ದಿಕವಾಗಿ ಅಭಿನಂದಿಸಿದರು. ಮಂಡ್ಯ ರಮೇಶ ಅವರ ಕಿವಿಮಾತಿಗೆ ಪೂರಕವಾಗಿ ಸಂಘದಲ್ಲಿ ನಡೆಸುತ್ತಿರುವ ಕನ್ನಡ ಕಲಿಕೆ ಕಾರ್ಯಕ್ರಮದ ಕುರಿತು ವಿವರಣೆ ನೀಡಿದರು. ಕನ್ನಡಪರ ಚಟುವಟಿಕೆ ಮತ್ತು ಕನ್ನಡ ಕಲಿಕೆಯ ಬಗ್ಗೆ ಕನ್ನಡಿಗರು ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಮಕ್ಕಳನ್ನು ಕಳಿಸಿಕೊಡಬೇಕು. ಕಾಲ ಕಾಲಕ್ಕೆ ಸಲಹೆಗಳನ್ನು ನೀಡಿ ತಮ್ಮ ಮಕ್ಕಳು ಕನ್ನಡ ಕಲಿಯುವಂತೆ ಪ್ರೋತ್ಸಾಹಿಸಬೇಕು ಎಂದರು. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದೆಹಲಿ ಕರ್ನಾಟಕ ಸಂಘ ನೀಡುವ 'ವಿಶಿಷ್ಠ ಕನ್ನಡಿಗ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಎನ್.ಜೆ. ಕಾಮತರು ಅನುಪಸ್ಥಿತರಿದ್ದುದರಿಂದ ಇಂದು ಆಟೋಟ ಸ್ಪರ್ಧೆ ಹಾಗೂ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಬಹುಮಾನ ವಿತರಣಾ ಸಮಾರಂಭದ ಶುಭದಿನದಂದು ಅವರಿಗೆ 'ವಿಶಿಷ್ಠ ಕನ್ನಡಿಗ ಪ್ರಶಸ್ತಿ', ಶಾಲು ಮತ್ತು ಹೂಗುಚ್ಛ ನೀಡಿ ಗೌರವಿಸಲಾಯಿತು.

ಎನ್.ಜೆ. ಕಾಮತ್ ಹಾಗೂ ಮಂಡ್ಯ ರಮೇಶ್ ಅವರು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನ ನೀಡಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಬೆಳಗಿನ ರಕ್ತದಾನ ಶಿಬಿರದಲ್ಲಿ ರಕ್ತದಾನ ನೀಡಿದ ಕನ್ನಡಿಗರಿಗೂ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಆರ್. ಭರತಾದ್ರಿ ಅವರು ತಮ್ಮ ದಿವಂಗತ ತಾಯಿ ನಾಗಲಾಂಬಿಕ ಮತ್ತು ತಂದೆ ರಜತಾದ್ರಿ ಅವರ ಸ್ಮರಣಾರ್ಥ ಕಬ್ಬಡ್ಡಿ ಪಂದ್ಯದಲ್ಲಿ ವಿಜೇತರಾದ ತಂಡಕ್ಕೆ ಪ್ರಾಯೋಜಿಸಿದ ಪಾರಿತೋಷಕವನ್ನು ಉಷಾ ಭರತಾದ್ರಿ ಅವರು ನೀಡಿ ಅಭಿನಂದಿಸಿದರು. ಕ್ರೀಡಾ ಸಮಿತಿಯ ಸಂಚಾಲಕ ಹಾಗೂ ಸಹಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ಅವರು ಆಟೋಟ ಸ್ಪರ್ಧೆಗಳನ್ನು ಹಾಗೂ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಗಳನ್ನು ನಿಯಮಾವಳಿಗನುಸಾರವಾಗಿ, ಯಶಸ್ವಿಯಾಗಿ ನಡೆಸಿಕೊಡುವಲ್ಲಿ ತಮ್ಮ ಸಂಪೂರ್ಣ ಅನುಭವಿ ಸಹಕಾರ ಮತ್ತು ಮಾರ್ಗದರ್ಶನ ನೀಡಿದ ಶಿವರಾಮ್ ರೈ ಮತ್ತಿತರ ಸ್ನೇಹಿತರಿಗೆ ಅಭಿನಂದಿಸಿದ್ದಲ್ಲದೇ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

**ರೇಣುಕಾ ನಿಡಗುಂದಿ**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಆಯ್ಕೆಯಾದ ನಿಮ್ಮ ತಂಡ


ಎಸ್. ಕೃಷ್ಣ ಭಟ್


ಆಂಜನಿ ಗೌಡ


ಸಿ.ಆರ್. ಶ್ರೀನಿವಾಸ


ಡಾ. ಅಹಲ್ಯಾಚಿಂತಾಮಣಿ


ಬಸವರಾಜ ಎಸ್. ಮೇಟಿ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ 2012–14ನೇ ಕಾರ್ಯಕಾರಿ ಸಮಿತಿ ಚುನಾವಣೆಯು ಮಾರ್ಚ್ 25, 2012ರಂದು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ನೆರವೇರಿತು. ಕರ್ನಾಟಕ ಭವನದ ಲೆಕ್ಕಪತ್ರಾಧಿಕರಿಗಳಾದ ಡಾ. ಶಿವಪುತ್ರ ಬಾಬುರಾವ್ ಅವರು ಚುನಾವಣಾಧಿಕಾರಿಯಾಗಿ ಮತ್ತು ಸಹಾಯಕರಾಗಿ ಶಿವಾನಂದ ಇಂಗಳೇಶ್ವರ್ ಅವರು ಚುನಾವಣಾ ಪ್ರಕ್ರಿಯೆಯನ್ನು ಸಮರ್ಥವಾಗಿ, ಶಾಂತಿಯುತವಾಗಿ ನಡೆಸಿಕೊಟ್ಟರು.

ನಂದನ ನಾಮ ಸಂವತ್ಸರದ ಬಂಪರ್ ಕೊಡುಗೆ ಎಂಬಂತೆ ಅಪಾರ ಅನುಭವವುಳ್ಳ ಸರವು ಕೃಷ್ಣ ಭಟ್ ಅವರ ತಂಡವು 100 ಮತಗಳ ಅಂತರದ ಪ್ರಚಂಡ ಬಹುಮತದೊಂದಿಗೆ ವಿಜಯ ಸಾಧಿಸಿತು. ತಂಡದ ಒಟ್ಟು 14 ಮಂದಿ ಈ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ. ಸದಾ ನಗುಮೊಗದ, ಚತುರ, ಸಂಘಟಕ, ಅನುಭವಿ, ಉತ್ತಮ ವಾಗ್ಮಿಯಾಗಿರುವ ಅಧ್ಯಕ್ಷ ಕೃಷ್ಣ ಭಟ್ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಪ್ರಸ್ತುತ ಸಾಂಸ್ಕೃತಿಕ ಸಮುಚ್ಚಯದ ಯಶಸ್ಸಿಗಾಗಿ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಸದ್ಯ ಅಕಾಡೆಮಿ ಆಫ್ ತೆಂಕುತಿಟ್ಟು ಯಕ್ಷಗಾನದ ನಿರ್ದೇಶಕರಾಗಿರುವ ಕೃಷ್ಣ ಭಟ್ ಅವರು ತಂಡದ ರೂವಾರಿಯಾಗಿ ದಕ್ಷ, ಸಮರ್ಥ ಆಡಳಿತ ನಡೆಸುವ ಭರವಸೆ ನೀಡಿದ್ದಾರೆ.

ಸಂವೇದನಾಶೀಲ, ಮಿದುಭಾಷಿ, ದಕ್ಷ ಕೆಲಸಗಾರರಾಗಿರುವ ಶ್ರೀ ಆಂಜನೀ ಗೌಡ ಅವರು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಕಾರ್ಯಾಲಯದಲ್ಲಿ ಕೆಲಸ ಮಾಡಿದ ವಿಶೇಷ ಅನುಭವವುಳ್ಳವರಾಗಿದ್ದಾರೆ. ದೆಹಲಿ ಮತ್ತು ಕರ್ನಾಟಕ ಸರ್ಕಾರಗಳ ಜೊತೆ ಸೌಹಾರ್ದ ಸಂಬಂಧ ಬೆಳೆಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ. ಇದೀಗ ಎರಡನೇ ಬಾರಿ ದೆಹಲಿ ಶಿಕ್ಷಣ ಸಂಸ್ಥೆಗೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಪಟ್ಟುಹಿಡಿದು ಕೆಲಸ ಮಾಡುವ ಮೃದುಭಾಷಿ, ಹಣಕಾಸು ವಿಷಯದಲ್ಲಿ ಪರಿಣಿತ, ದೆಹಲಿ ಕರ್ನಾಟಕ ಸಂಘ ಮತ್ತು ಶಿಕ್ಷಣ ಸಂಸ್ಥೆಯೊಂದಿಗೆ ಎರಡು ದಶಕಗಳಿಂದಲೂ ನಿಕಟವರ್ತಿಯಾಗಿರುವ ಅನುಭವಿ ಬಸವರಾಜು ಎಸ್.ಮೇಟಿ ಅವರು ಈಗಾಗಲೇ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಾ ಸ್ಕೂಲ್ ಆಫ್ ಕಂಪ್ಯೂಟರ್ ಎಜ್ಯುಕೇಶನ್ ಸಂಸ್ಥೆಯನ್ನು 'ಎ' ಶ್ರೇಣಿಗೆ ತರುವಲ್ಲಿ ನಿರಂತರ ಪಾತ್ರ ವಹಿಸಿ ಯಶಸ್ವಿಯಾಗಿದ್ದಾರೆ. ಇದೀಗ ಉಪಾಧ್ಯಕ್ಷರಾಗಿ ಚುನಾಯಿತರಾಗಿ ಶಾಲೆಯನ್ನು ಪ್ರಗತಿಪಥದಲ್ಲಿ ಕೊಂಡೊಯ್ಯಲು ಮುಂದಾಗಿದ್ದಾರೆ.

ದೆಹಲಿ ವಿಶಿಷ್ಟ ಕನ್ನಡಿಗ, ನಿವೃತ್ತ ಪ್ರೊಫೆಸರ್, ಶಿಕ್ಷಣಕ್ಕಾಗಿಯೇ ಸಮರ್ಪಿತ, ಬರಹಗಾರರು ಕನ್ನಡಪರ ಚಟುವಟಿಕೆಗಳಿಗೆ ಸದಾ ಸ್ಪಂದಿಸುವ ಡಾ. ಅಹಲ್ಯಾಚಿಂತಾಮಣಿ ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಾರಂಭಿಕ ದಿನಗಳಿಂದಲೂ ತಮ್ಮನ್ನು ತಾವು ತೊಡಗಿಸಿಕೊಂಡವರು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿರುವ ಡಾ. ಅಹಲ್ಯಾ ಚಿಂತಾಮಣಿಯವರು ಇದೀಗ ಸತತ ಎರಡನೇ ಬಾರಿ ಉಪಾಧ್ಯಕ್ಷೆಯಾಗಿ ಚುನಾಯಿತಗೊಂಡು ತಮ್ಮ ದಣಿವರಿಯದ ಸೇವೆ ಸಲ್ಲಿಸಲು ಉತ್ಸುಕರಾಗಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯಲ್ಲಿ ಉದ್ಯೋಗಸ್ಥ. ಉತ್ತಮ ಆಡಳಿತಗಾರ, ಶಾಲೆಯ ಶಿಕ್ಷಕ ರಕ್ಷಕ ಸಂಘದ ಕಾರ್ಯದರ್ಶಿಯಾಗಿ ಒಳ ಹೊರಗನ್ನು ಅರ್ಥೈಸಿಕೊಂಡಿರುವ, ಪೋಷಕರಾಗಿ ಶಾಲೆಯ ಬಗೆಗೆ ಅಪಾರ ಕಾಳಜಿ, ಅಭಿಮಾನವುಳ್ಳ ಸಿ.ಆರ್. ಶ್ರೀನಿವಾಸ ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.

ಸದಸ್ಯರುಗಳಾಗಿ ಈಗಾಗಲೇ ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಿಕ್ಷಣ ಸಂಸ್ಥೆಗೆ ತಮ್ಮ ಅನುಭವದ ಸೇವೆ ಸಲ್ಲಿಸಿರುವ ಎನ್. ಆರ್. ಶ್ರೀನಾಥ್, ಜಿ.ಎಂ. ಭಾರತಿ, ಟಿ.ಎಂ. ಮೈಲಾರಪ್ಪ, ಕೆ. ರಾಧಾಕೃಷ್ಣ ಹಾಗೂ ಸಿ.ಎಂ. ನಾಗರಾಜ ಪುನರಾಯ್ಕೆಗೊಂಡಿದ್ದಾರೆ. ಇವರೊಡನೆ ಮೊದಲ ಬಾರಿಗೆ ಕನ್ನಡ ಶಾಲೆಗೆ ತಮ್ಮ ಸೇವೆ ಸಲ್ಲಿಸಲು ಆಶಾಕಾರಿಯಪ್ಪ ಮಚಿಮಂಡ, ವಿ.ಎನ್. ರಘುಪತಿ, ವಿ.ಆರ್. ಗುಡ್ಡೇಗೌಡ, ಕಾಶೀನಾಥ್ ಬಿರಾದಾರ್ ಹಾಗೂ ತಾರಾ ರಮೇಶ್ ಸದಸ್ಯರಾಗಿ ಸೇರ್ಪಡೆಯಾಗಿದ್ದಾರೆ.

"ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು" ಎಂಬಂತೆ ಅಪಾರ ಅನುಭವವುಳ್ಳ ಹಿರಿಯರ ಜೊತೆಗೆ ಶಾಲೆಯ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಲು ಉತ್ಸುಕರಾದ ಹೊಸಬರ ತಂಡಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ರಾಷ್ಟ್ರದ ರಾಜಧಾನಿಯಲ್ಲಿರುವ ಏಕೈಕ ಕನ್ನಡ ಶಿಕ್ಷಣ ಸಂಸ್ಥೆಯ ಉಜ್ವಲ ಭವಿಷ್ಯಕ್ಕಾಗಿ, ಸರ್ವತೋಮುಖ ಬೆಳವಣಿಗೆಗಾಗಿ ಈ ತಂಡ ಉತ್ತಮ ಕೊಡುಗೆ ನೀಡಲಿ ಎಂದು ಹಾರೈಸುತ್ತೇವೆ.


ಎನ್.ಆರ್. ಶ್ರೀನಾಥ್


ಜಿ.ಎಂ. ಭಾರತಿ


ಟಿ.ಎಂ. ಮೈಲಾರಪ್ಪ


ಆಶಾಕಾರಿಯಪ್ಪ ಮಚಿಮಂಡ


ಕೆ. ರಾಧಾಕೃಷ್ಣ


ವಿ.ಎನ್. ರಘುಪತಿ


ತಾರಾ ರಮೇಶ್


ಸಿ.ಎಂ. ನಾಗರಾಜ


ವಿ.ಆರ್. ಗುಡ್ಡೇಗೌಡ


ಕಾಶೀನಾಥ್ ಬಿರಾದಾರ್

# ಮಹಿಳೆಯರ ಆತ್ಮ ವಿಶ್ವಾಸ ಬಲಪಡಿಸಿದ ವಿಶ್ವಮಹಿಳಾ ದಿನಾಚರಣೆ



"ಆತ್ಮ ವಿಶ್ವಾಸದೊಡನೆ ಸತತ ಪ್ರಯತ್ನದಿಂದಾಗಿ ಗುರಿ ಸಾಧನೆ ಎಂದಿಗೂ ಅಸಾಧ್ಯವಾದುದಲ್ಲ. ಆತ್ಮಬಲ, ಸ್ವಯಂಪ್ರೇರಣೆ ಹಾಗೂ ಸಾಧಿಸುವ ಛಲ ಸಾಧನೆಯ ಮೆಟ್ಟಿಲುಗಳು. ಪ್ರತಿಯೊಬ್ಬ ಮಹಿಳೆಯೂ ತನ್ನೊಳಗಿರುವ ನಿಗೂಢ ಶಕ್ತಿಯನ್ನು ಗುರುತಿಸಿಕೊಂಡು ತನ್ನ ಅಸ್ತಿತ್ವವನ್ನು ಜಗತ್ತಿಗೆ ನಿರೂಪಿಸಬೇಕು" ಎಂಬುದಾಗಿ ಖ್ಯಾತ ಮನಃಶಾಸ್ತ್ರ ಸಮಾಲೋಚಕಿ ಶ್ರೀಮತಿ ಡಾ. ವಿನಯಪ್ರಭ ಬಳಿಗಾರ್ ಅವರು ಕರೆ ನೀಡಿದರು. ಮಾರ್ಚ್ 24ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಲಾಗಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಭಾಗಹಿಸಿದ್ದ ವಿನಯಪ್ರಭ ಅವರು ತಮ್ಮ ವಿಚಾರಧಾರೆಯನ್ನು ಹಂಚಿಕೊಂಡರು.

ಮೂಲತಃ ಬೆಂಗಳೂರಿನವರಾದ ವಿನಯಪ್ರಭ ಅವರು ದೆಹಲಿ ವಿಶ್ವವಿದ್ಯಾನಿಲಯದಿಂದ "A Study of the Reconstruction of Women's Attitude towards the Girl Child" ಎಂಬ ಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ಇಂದಿನ ವೇಗದ ಬದುಕಿನಲ್ಲಿ ಪ್ರತಿಯೊಬ್ಬರೂ ಎದುರಿಸುತ್ತಿರುವ ಹಲವಾರು ಮಾನಸಿಕ ಒತ್ತಡಗಳಿಗೆ ಚಿಕಿತ್ಸೆ ನೀಡುತ್ತಿರುವ ಮನಃಶಾಸ್ತ್ರಜ್ಞೆ ವಿನಯಪ್ರಭ ಅವರು ಮಹಿಳೆಯರಿಗೆ ಸಂಬಂಧಪಟ್ಟ ಹಲವು ವಿಚಾರಗಳನ್ನು ವಿಶ್ಲೇಷಿಸಿದರು. "ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ಪ್ರತಿಭೆ ಇದ್ದೇ ಇರುತ್ತದೆ. ಸ್ವಯಂ ಪ್ರೇರಣೆಯಿಂದ ಇದನ್ನು ಗುರುತಿಸಿಕೊಂಡು ಸೂಕ್ತ ಅವಕಾಶವನ್ನು ನಾವೇ ಕಲ್ಪಿಸಿಕೊಳ್ಳಬೇಕು. ಕೇವಲ ಇತರರಿಗಾಗಿಯೇ ಬದುಕದೇ, ತನ್ನ ಆತ್ಮ ತೃಪ್ತಿಗಾಗಿ ಜೀವನ ಮಾಡುವುದು ಅತ್ಯವಶ್ಯ. ನಮ್ಮನ್ನು ನಾವು ಕೋಳಿಗಳೆಂದು ಭಾವಿಸಿದರೆ ಕೋಳಿಯಂತೆ ಬದುಕುತ್ತೇವೆ, ಹದ್ದುಗಳೆಂದು ಭಾವಿಸಿದರೆ ಆಕಾಶದೆತ್ತರಕ್ಕೆ ಹಾರಬಹುದು. "ಯದ್ಭಾವಂ ತದ್ ಭವತಿ" ಅಂತೆಯೇ ನಾವು ಭಾವಿಸಿದಂತೆ ನಮ್ಮ ಬದುಕನ್ನು ರೂಪಿಸಿಕೊಳ್ಳಬಹುದು" ಎಂದು ಹೇಳುತ್ತಾ ಮಹಿಳೆಯರಿಗೆ ಆತ್ಮಬಲ ಬೆಳೆಸಿಕೊಳ್ಳುವಂತೆ ಕರೆ ನೀಡಿದರು.

ಹೆಣ್ಣು ಮಗುವಿನ ಭ್ರೂಣ ಹತ್ಯೆಯ ಪಿಡುಗು ಸ್ವಯಂ ಹೆಣ್ಣಿನಿಂದಲೇ ಹೆಚ್ಚುತ್ತಿರುವ ಅಪಾಯವನ್ನು ತಡೆಗಟ್ಟುವ ತುರ್ತು ಅಗತ್ಯತೆಯನ್ನು ತಿಳಿಸುತ್ತಾ ಇಂದಿನ ಮಹಿಳೆ ಸಮಾನತೆಯ ಹೆಸರಿನಲ್ಲಿ ಸಾಮಾಜಿಕ, ಕೌಟುಂಬಿಕ ಮೌಲ್ಯಗಳಿಂದ ದೂರವಾಗುತ್ತಿರುವ ಪರಿಸ್ಥಿತಿಯಿಂದ ಮುಕ್ತವಾಗಬೇಕೆಂಬ ಸದಾಶಯದ ನುಡಿಗಳಿಂದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಸ್ವಾಗತಿಸಿದರು. ಮಹಿಳಾ ಉಪಸಮಿತಿಯ ಅಧ್ಯಕ್ಷೆ ಸರೋಜ ಮಾಧವ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಕಳೆದ ವರ್ಷ ಪ್ರಾರಂಭಗೊಂಡ ಮಹಿಳಾ ಸಮಿತಿ ಕೈಗೊಂಡ ಯಶಸ್ವಿ ಕಾರ್ಯಕ್ರಮಗಳ ವಿವರಗಳನ್ನು ನೀಡುತ್ತಾ ಮುಂದೆ ಆಯೋಜಿಸಲಿರುವ ಹತ್ತು ಹಲವಾರು ಕಾರ್ಯಕ್ರಮಗಳಿಗೆ ಎಲ್ಲರ ಸಹಕಾರ ಕೋರಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮತ್ತೋರ್ವ ಅತಿಥಿ ಕರ್ನಾಟಕ ಭವನದ ವಿಶೇಷ ಕರ್ತವ್ಯಾಧಿಕಾರಿ ಡಾ. ಚಂದ್ರಮಾ ಎಸ್. ಕಣಗಲಿ ಅವರು ಹಿಂದುಳಿದ ವರ್ಗದ ಮಹಿಳೆಯರಿಗಾಗಿ ಹಲವಾರು ಯಶಸ್ವಿ ಶಿಬಿರಗಳನ್ನು ನಡೆಸಿಕೊಟ್ಟಿದ್ದಾರೆ. "ಪ್ರತಿಯೊಬ್ಬ ಮಹಿಳೆಯಲ್ಲೂ ಸುಪ್ತ ಪ್ರತಿಭೆ ಇದೆ, ಸ್ವ ಸಾಮರ್ಥ್ಯದಿಂದ ಸವಾಲುಗಳನ್ನು ಎದುರಿಸಿ ಸಾಧಿಸಬೇಕು. ಮಹಿಳಾ ದಿನಾಚರಣೆಯೆಂದಾಗ ನಾವು ಬರೀ ಅಕ್ಷರಸ್ಥ, ಸಶಕ್ತ, ಸಬಲ ಸ್ತ್ರೀಯನ್ನೇ ಗಮನದಲ್ಲಿಟ್ಟುಕೊಳ್ಳುತ್ತೇವೆ. ಆದರೆ ಭಾರತದಂತಹ ವಿಶಾಲ ದೇಶದಲ್ಲಿ ಅನಕ್ಷರಸ್ಥ, ಹಿಂದುಳಿದ, ಗ್ರಾಮೀಣ, ಬುಡಕಟ್ಟು, ಆದಿವಾಸಿ ಮಹಿಳೆಯರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ" ಎಂಬ ಅಂಶವನ್ನು ಒತ್ತಿಹೇಳುತ್ತಾ ತೌಲನಿಕವಾದ ಅಂಕಿ ಅಂಶಗಳ ಒಂದು ಭಿನ್ನ ಚಿತ್ರಣವನ್ನೇ ತೆರೆದಿಟ್ಟರು. ಶಿಕ್ಷಣ ಅಭಿಯಾನದ ಮೂಲಕ ಮಾತ್ರ ಅಸಮಾನತೆಯನ್ನು ತೊಲಗಿಸಲು ಸಾಧ್ಯ ಎಂಬುದಾಗಿ ಹೇಳಿದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡುತ್ತ ಕಳೆದ ಎರಡು ದಶಕಗಳಿಂದ ವಿಶ್ವದಾದ್ಯಂತ ಜಾಗತೀಕರಣ ಕುರಿತಂತೆ ಗಂಭೀರ ಚರ್ಚೆ ನಡೆಯುತ್ತಿದ್ದು ನಾನಾ ರೀತಿಯಲ್ಲಿ ಇದನ್ನು ವ್ಯಾಖ್ಯಾನಿಸಲಾಗುತ್ತಿದೆ. ಜಾಗತೀಕರಣ ಕುರಿತಂತೆ ಈ ಸಂಕ್ಷಿಪ್ತ ಹಿನ್ನೆಲೆಯಲ್ಲಿ ವರ್ತಮಾನದ ಮಹಿಳೆ, ಆಕೆಯ ಸ್ಥಿತಿ ಗತಿ, ಸಂವೇದನೆ ಕುರಿತು ಹೇಳುವುದಾದರೆ ಆಕೆಯ ಪಾತ್ರ ಬದಲಾಗಿಲ್ಲ, ದೃಶ್ಯಗಳಷ್ಟೇ ಬದಲಾಗಿವೆ ಎನ್ನಬಹುದು ಎಂದ ಅವರು ಭಾರತವನ್ನಷ್ಟೇ ಗಣನೆಗೆ ತರದೇ ದಕ್ಷಿಣ ಆಫ್ರಿಕಾ, ದ. ಅಮೇರಿಕ ಮತ್ತು ಸೋಮಾಲಿಯಾದಂಥ ದೇಶಗಳ ಮಹಿಳೆಯರ ಸ್ಥಿತಿಗತಿಗಳ ಚಿಂತನೆ ಕುರಿತಂತೆ ಬೆಳಕು ಚೆಲ್ಲಿದರು. ಕಾರ್ಯಕ್ರಮದ ಕೊನೆಗೆ ಸಹ ಕಾರ್ಯದರ್ಶಿ ರೇಣುಕಾ ನಿಡಗುಂದಿ ವಂದನಾರ್ಪಣೆ ಸಲ್ಲಿಸಿದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಸದಸ್ಯೆ ರಾಧಿಕಾ ರಾವ್ ಅವರು "ಕೃಷ್ಣ ನೀ ಬೇಗನೇ ಬಾರೋ" ಭರತನಾಟ್ಯ ಪ್ರದರ್ಶನ. ರಾಧಾ ಕೌಜಲಗಿ ಮತ್ತು ಆಶಾ ಶ್ಯಾಂಸುಂದರ್ ಅವರು ಹಾಸ್ಯ ಭರಿತ 'ಉಪ್ಪಿಟ್ಟು" ಕಿರು ಪ್ರಹಸನ ಹಾಗೂ ರಂಗಮಣಿ ರಾವ್, ಜಯಾ ಆಚಾರ್ಯ, ಮಾಲತಿರಾಜ್, ಸ್ವರ್ಣಲತ ಮೃತ್ಯುಂಜಯ, ಸರೋಜ ಕುಮಾರಿ ಮತ್ತು ಡೀನಾ ಜಾಯ್ಸ್ "ಮಾವು ನಾವು, ಬೇವು ನಾವು ಹಾಗೂ ನೆಲ ಹಸುರಾಗಲಿ, ಜಲ ತಿಳಿಯಾಗಲಿ" ಭಾವಗೀತೆಗಳನ್ನು ಹಾಗೂ ಸುಗುಣ ನಾಗೇಶ್, ರಾಧಿಕಾ ರಾವ್, ಸುಷ್ಮ ಬಿಢೆ ಮತ್ತು ರಾಜೇಶ್ವರಿ ಕಲ್ಲೂರ್ ಅವರು ಸುಮಧುರ "ಜಲಲ ಜಲಲ ಜಲಧಾರೆ" ಗೀತೆಗೆ ನೃತ್ಯ ರೂಪಕವನ್ನು ಪ್ರಸ್ತುತ ಪಡಿಸಿದರು. ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆ ಕು. ವಂದನಾ ರೈ "ನಾದಮು ವೇದಮು" ನೃತ್ಯ ಪ್ರದರ್ಶನ, ವೀಣಾ ಜಗದೀಶ್ "ಈ ಪ್ರೀತಿ ಈ ಸ್ನೇಹ ಸಂಬಂಧ ಹೀಗಿರಲಿ ಎಂದೆಂದೂ ಈ ಅನುಬಂಧ" ಎಂಬ ಗೀತೆ, ಕಲ್ಪನಾ ದೇಶಪಾಂಡೆ, ಮೋಹಿನಿ ರೈ, ಡಾ. ರೂಪಶ್ರೀ ಈಟಿ ಮತ್ತು ಮೀನಾ ಶ್ರೀಧರ್ ಅವರು ಹಾಸ್ಯಮಯ "ಫಲಾಹಾರ" ಕಿರು ಪ್ರಹಸನ ಹಾಗೂ ಸವಿತ ಇನಾಂದಾರ್, ಮೋಹಿನಿ ರೈ, ಡಾ. ರೂಪಶ್ರೀ ಈಟಿ, ಮೀನಾ ಶ್ರೀಧರ್, ಜಯಶ್ರೀ ಬಸವರಾಜ್, ವಂದನಾ ಶೆಟ್ಟಿ, ಪ್ರೇರಣಾ ವೆಂಕಟೇಶ್ ಮತ್ತು ರಾಜೇಶ್ವರಿ ಪ್ರಕಾಶ್ "ಮಾಯದಂಥ ಮಳೆ ಬಂತಣ್ಣ" ಜನಪದ ಗೀತೆಯನ್ನು ಪ್ರಸ್ತುತ ಪಡಿಸಿದರು. "ಬಾಳೆಯ ತೋಟದ ಮಂಗಗಳೆಲ್ಲ" ಎಂಬ ಪದ್ಯವನ್ನು ವಿಭಿನ್ನ ರಾಗಗಳಲ್ಲಿ ಹಾಡಿ ಮನ ರಂಜಿಸಿದವರು ವಿದ್ಯಾ ಕೋಳ್ಯೂರು, ಭಾವಗೀತೆ–ಜನಪದ ಗೀತೆಗಳ ಮಿಶ್ರಣವನ್ನು ನೀಡಿದವರು ಪೂಜಾ ಪ್ರದೀಪ್. ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯೆಯರಾದ ರೂಪ ವೆಂಕಟೇಶ್, ಪೂರ್ಣಿಮ, ಮೀನಾ ವಸಂತ್ ಮತ್ತು ಶೋಭಾ ನಾಗರಾಜ್ ಅವರು "ಸುಗ್ಗಿ ಕಾಲ ಹಿಗ್ಗಿ ಬಂತು" ಜಾನಪದ ನೃತ್ಯ ಪ್ರದರ್ಶನ ನೀಡಿದರು. ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ಸದಸ್ಯೆಯರಾದ ಆಶಾ ಮಹದೇವ್, ನಳಿನ ಬಸವರಾಜ್, ಮಮತಾ ಶಿವರಾಮ್, ಮಂಜುಳ ನಾಗರಾಜ್, ಲಕ್ಷ್ಮೀ ಶ್ರೀನಿವಾಸ್, ಪಾರ್ವತಿ ಗಿರೀಶ್, ನಳಿನ ಲವಕುಮಾರ್ ಮತ್ತು ಜ್ಯೋತಿ ದೇವೇಂದ್ರಪ್ಪ ಅವರು "ಎಲ್ಲೋ ಜಿನಿಗಿರುವ ನೀರು, ಎಲ್ಲೋ ಝರಿಯಾಗಿ ಹರಿದು" ಗೀತೆಗೆ ವರ್ಣರಂಜಿತ ನೃತ್ಯ ಪ್ರದರ್ಶನ ನೀಡಿದರು ಹಾಗೂ ಆಶಾ ಮಹದೇವ್, ಮಮತಾ ಶಿವರಾಮ್, ಮಂಜುಳ ನಾಗರಾಜ್, ಲಕ್ಷ್ಮೀ ಶ್ರೀನಿವಾಸ್, ಪಾರ್ವತಿ ಗಿರೀಶ್, ಜ್ಯೋತಿ ದೇವೇಂದ್ರಪ್ಪ ಮತ್ತು ಕವಿತ ಸುರೇಶ್ ಅವರು "ಉದಯಿಸುತಿಹನು ದಿನ ಅಭಿನವ" ಭಾವಗೀತೆಯನ್ನು ಪ್ರಸ್ತುತ ಪಡಿಸಿದರು. ಜಮುನ ಸಿ. ಮಠದ ಅವರು 'ತವರೂರ ಮನೆ ನೋಡ ಬಂದೆ' ಜನಪದ ಗೀತೆ ಹಾಗೂ 'ನೆನಪಿದೆಯ ಗೆಳತಿ' ಭಾವಗೀತೆಯನ್ನು ಹಾಡಿದರು. ಮಮತಾ ಶಿವರಾಮ್ ಹಾಗೂ ಮಂಜುಳ ನಾಗರಾಜ್ ಅವರು "ನೀಲ ಮೇಘ ಶ್ಯಾಮ ನಿತ್ಯಾನಂದ ಧಾಮ" ಗೀತೆಯನ್ನು ಹಾಡಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ ಹಾಗೂ ಮಹಿಳಾ ಉಪಸಮಿತಿಯ ಸಂಚಾಲಕಿ ಹೇಮಲತ ಗುಡ್ಡೇಗೌಡ ಅವರು ಸಾಂಸ್ಕೃತಿಕ ಕಾರ್ಯಕ್ರಮದ ನಿರ್ವಹಣೆ ಮಾಡಿದರು.

❑ ಉಷಾ ಭರತಾದ್ರಿ


ಜಮುನಾ ಸಿ. ಮಠದ


ರಂಗಮಣಿ ರಾವ್, ಜಯಾ ಆಚಾರ್ಯ, ಮಾಲತಿರಾಜ್, ಸ್ವರ್ಣಲತ ಮೃತ್ಯುಂಜಯ, ಸರೋಜ ಕುಮಾರಿ ಮತ್ತು ಡೀನಾ ಜಾಯ್ಸ್


ಕಲ್ಪನಾ ದೇಶಪಾಂಡೆ, ಮೋಹಿನಿ ರೈ, ಡಾ.

# ಮಹಿಳಾ ದಿನಾಚರಣೆಯ ವೈವಿಧ್ಯಮ


ಶೋಭಾ ನಾಗರಾಜ, ರೂಪ ವೆಂಕಟೇಶ್, ಪೂರ್ಣಿಮ ಮತ್ತು ಮೀನಾ ವಸಂತ್


ವಿದ್ಯಾ ಕೋಳ್ಯೂರು


ರಾಧಿಕಾ ರಾವ್


ಆಶಾ ಮಹದೇವ್, ಮಮತಾ ಶಿವರಾಂ, ಮಂಜುಳಾ ನಾಗರಾಜ್, ಲಕ್ಷ್ಮೀ ಶ್ರೀನಿವಾಸ್, ಪಾರ್ವತಿ ಗಿರೀಶ್, ನಳಿನ ಬಸವರಾಜ್, ನಳಿನ ಲವಕುಮಾರ್ ಮತ್ತು ಜ್ಯೋತಿ ದೇವೇಂದ್ರಪ್ಪ


ಸವಿತ ಇನಾಂದಾರ್, ಮೋಹಿನಿ ರೈ, ಡಾ.
ಬಸವರಾಜ್, ವಂದನಾ ಶೆಟ್ಟಿ, ಪ್ರೇರಣಾ



ರೂಪಶ್ರೀ ಈಟಿ ಮತ್ತು ಮೀನಾ ಶ್ರೀಧರ್



ಆಶಾ ಮಹದೇವ್, ಮಮತಾ ಶಿವರಾಂ, ಮಂಜುಳಾ ನಾಗರಾಜ್, ಲಕ್ಷ್ಮಿ ಶ್ರೀನಿವಾಸ್,
ಪಾರ್ವತಿ ಗಿರೀಶ್, ಜ್ಯೋತಿ ದೇವೇಂದ್ರಪ್ಪ ಮತ್ತು ಕವಿತಾ ಸುರೇಶ್



ಪೂಜಾ ಪ್ರದೀಪ್

# ಯ ಸಾಂಸ್ಕೃತಿಕ ಕಾರ್ಯಕ್ರಮಗಳು



ವೀಣಾ ಜಗದೀಶ್




ರಾಧಾ ಕೌಜಲಗಿ ಮತ್ತು ಆಶಾ ಶ್ಯಾಂಸುಂದರ್



ರೂಪಶ್ರೀ ಈಟಿ, ಮೀನಾ ಶ್ರೀಧರ್, ಜಯಶ್ರೀ
ವೆಂಕಟೇಶ್ ಮತ್ತು ರಾಜೇಶ್ವರಿ ಪ್ರಕಾಶ್





ರಾಜೇಶ್ವರಿ ಕಲ್ಲೂರ್, ಸುಷ್ಮ ಭಿಡೆ, ಸುಗುಣ ನಾಗೇಶ್ ಮತ್ತು ರಾಧಿಕಾ ರಾವ್




ವಂದನಾ ರೈ

# ರಾಷ್ಟ್ರದ ಕ್ರಾಂತಿಕಾರಿ ಹೋರಾಟಗಾರರಿಗೆ ಗಲ್ಲು ಶಿಕ್ಷೆ–ಒಂದು ನೆನಪು


ಭಗತ್‌ಸಿಂಗ್


ರಾಜಗುರು


ಸುಖದೇವ

ಭಾರತದ ರಾಷ್ಟ್ರೀಯ ಚಳವಳಿಗೆ ಹಲವಾರು ಮುಖಗಳು ಮತ್ತು ದಿಕ್ಕುಗಳಿದ್ದವು. ದೇಶದ ಸ್ವಾತಂತ್ರ್ಯಕ್ಕಾಗಿ ವಿವಿಧ ಸಿದ್ಧಾಂತಗಳುಳ್ಳ ರಾಷ್ಟ್ರೀಯವಾದಿಗಳು ಮತ್ತು ಸಂಸ್ಥೆಗಳು ಕಾರ್ಯ ನಿರ್ವಹಿಸಿರುವವು. ಸ್ವಾತಂತ್ರ್ಯ ಸಂಗ್ರಾಮ ರಾಷ್ಟ್ರೀಯ ಕಾಂಗ್ರೆಸಿನಿಂದ ನಡೆಯಿತೆಂದು ಬಹುತೇಕ ಇತಿಹಾಸಕಾರರು ಬರೆದಿರುವರು. ಅಂಥವರಲ್ಲಿ ಪ್ರಸ್ತುತ ಲೇಖಕರೂ ಒಬ್ಬರು. ಆದರೆ ದೇಶದ ಸ್ವಾತಂತ್ರ್ಯಕ್ಕಾಗಿ ಮಂದಗಾಮಿಗಳು ಹಾಗೂ ಉಗ್ರಗಾಮಿಗಳೆಂಬ ಎರಡು ಗುಂಪುಗಳು ತಮ್ಮದೇ ಆದ ಮಾರ್ಗದಲ್ಲಿ ಹೋರಾಟ ಮಾಡಿರುವರು. ಹಾಗೆಯೇ ಉಗ್ರಗಾಮಿಗಳಲ್ಲೂ ಎರಡು ಗುಂಪುಗಳಿದ್ದು ಒಂದು ಗುಂಪು ನಿಶಸ್ತ್ರವಾಗಿ ಬ್ರಿಟಿಷರ ವಸಾಹತುಶಾಹಿ ಆಡಳಿತದ ವಿರುದ್ಧ ಹೋರಾಟ ಮಾಡುತ್ತಿದ್ದರೆ, ಮತ್ತೊಂದು ಗುಂಪು ಶಸ್ತ್ರಧಾರಿಗಳಾಗಿ ಕ್ರಾಂತಿಕಾರಿ ಹೋರಾಟ ಮಾಡುತ್ತಿದ್ದರು. ಬಾಲಗಂಗಾಧರ ತಿಲಕ, ರಾಶ ಬಿಹಾರಿ ಘೋಷ್, ಸುಭಾಶ್‌ಚಂದ್ರ ಭೋಸ್, ಲಾಲಾ ಲಜಪತರಾಯ್, ಚನ್ನಬಸಪ್ಪ ಅಂಬಲಿ ಮುಂತಾದವರನ್ನು ಹೆಸರಿಸಬಹುದು. ಭಗತ್ ಸಿಂಗ್, ಚಂದ್ರಶೇಖರ್ ಅಜಾದ, ಶಿವರಾಮ ರಾಜಗುರು, ಸುಖದೇವ ಥಾಪರ, ಬಟುಕೇಶ್ವರ ದತ್ತ, ಅಶಫಕುಲ್ಲ ಖಾನ್, ಥಾಕೂರ ರೋಶನ್ ಸಿಂಗ್, ಶಿವ ವರ್ಮ, ಧನಶೆಟ್ಟಿ ಮಲ್ಲಪ್ಪ ಮುಂತಾದವರು ಎರಡನೇ ವರ್ಗದ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವರಂಥ ಕ್ರಾಂತಿಕಾರಿ ರಾಷ್ಟ್ರೀಯ ಹೋರಾಟಗಾರರಿಗೆ ಬ್ರಿಟಿಷರ ಸರಕಾರ ಅವರ ಕ್ರಾಂತಿಕಾರಿ ಕಾರ್ಯಕ್ಕಾಗಿ ಮಾರ್ಚ್ 23, 1931 ರಂದು ಗಲ್ಲಿಗೇರಿಸಿತು. ಮಾರ್ಚ್ 23, 2012 ಕ್ಕೆ ಅಂತಹ ರಾಷ್ಟ್ರೀಯವಾದಿ ಕ್ರಾಂತಿಕಾರಿಗಳಿಗೆ ಗಲ್ಲಿಗೇರಿಸಿದ 81 ನೇ ವರ್ಷವನ್ನು ಆಚರಿಸಲಾಯಿತು.

ಭಾರತದ ರಾಷ್ಟ್ರೀಯವಾದಿಗಳೆಲ್ಲ ಮಹಾತ್ಮ ಗಾಂಧಿ, ಜವಾಹರಲಾಲ ನೆಹರು, ಸರದಾರ ವಲ್ಲಭಬಾಯಿ ಪಟೇಲ, ಸುಭಾಶ್‌ಚಂದ್ರ ಭೋಸರ ಮಾರ್ಗದರ್ಶನದಂತೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರಲ್ಲ. ಹಲವು ಗುಂಪುಗಳಿಗೆ ತಮ್ಮದೇ ಸಿದ್ಧಾಂತಗಳಿದ್ದವು. ಆದರೆ ಗುರಿ ಮಾತ್ರ ಭಾರತಾಂಬೆಯನ್ನು ಬ್ರಿಟಿಷರ ವಸಾಹತುಶಾಹಿಯ ಸಂಕೋಲೆಗಳಿಂದ ಬಂಧನ ವಿಮೋಚನೆಗೊಳಿಸುವುದಾಗಿತ್ತು. 1920ರ ದಶಕದಿಂದ ಬ್ರಿಟಿಷರ ವಿರುದ್ಧ ಕ್ರಾಂತಿಕಾರಿ ಚಟುವಟಿಕೆಗಳು ನಡೆಯಲು ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಹಾತ್ಮ ಗಾಂಧಿಯವರ ಅಹಿಂಸಾತ್ಮಕ ನೀತಿಗಳೇ ಕೆಲಮಟ್ಟಿಗೆ ಕಾರಣವಾಗಿದ್ದವು. ಅಸಹಕಾರ ಚಳವಳಿ ದೇಶದಾದ್ಯಂತ ಹರಡಿ ಅಹಿಂಸಾತ್ಮಕವಾಗಿ ನಡೆದಿರುವಾಗ ಫೆಬ್ರವರಿ 5, 1922 ರಂದು ಸಂಯುಕ್ತ ಪ್ರಾಂತದ ಗೋರಕಪುರ ಹತ್ತಿರದ ಚೌರಿ ಚೌರಾ ಎಂಬಲ್ಲಿ ಮೆರವಣಿಗೆಯಿಂದ ಹೋಗುತ್ತಿದ್ದ ಅಸಂತೃಪ್ತ ರೈತರು ಒಂದು ಪೋಲಿಸ್ ಠಾಣೆಗೆ ನುಗ್ಗಿ ಅದಕ್ಕೆ ಬೆಂಕಿ ಹಚ್ಚಿದರು. ಇದರಿಂದ 21 ಪೋಲಿಸರು ಮತ್ತು ಓರ್ವ ಸಬ್ ಇನ್ಸ್‌ಪೆಕ್ಟರ್ ಅಗ್ನಿಗಾಹುತಿಯಾದರು. ಅನಾಹುತದ ಕಾರಣ ತಿಳಿದುಕೊಳ್ಳುವ ಬದಲು ಗಾಂಧಿ ಕಾಂಗ್ರೆಸ್ಸಿನ ಅನುಮತಿ ಇಲ್ಲದೆ ಹಠಾತ್ ಅಸಹಕಾರ ಚಳವಳಿ ನಿಲ್ಲಿಸಿದರು. ಸರಕಾರ ಹಿಂಸೆಗೆ ಗಾಂಧಿಯವರನ್ನು ಹೊಣೆಗಾರರನ್ನಾಗಿ ಮಾಡಿ ಅವರನ್ನು ಬಂಧಿಸಿ ಆರು ವರ್ಷ ಶಿಕ್ಷೆ ವಿಧಿಸಿ ಜೈಲಿಗೆ ಕಳುಹಿಸಿತು. ಅಸಹಕಾರ ಚಳವಳಿ ಬಗ್ಗೆ ಪ್ರಮುಖ ನಾಯಕರಲ್ಲಿ ಸಂಶಯವುಂಟಾಗಿ ಈ ಕುರಿತು ವಿಚಾರ ಮಾಡಲು ಒಂದು ಸಮಿತಿಯನ್ನು ನೇಮಿಸಲಾಯಿತು. ಆದರೆ ಸಮಿತಿಯವರಲ್ಲಿ ಭಿನ್ನಮತವುಂಟಾಯಿತು. ಕೆಲವರು ಕೌನ್ಸಿಲ್ ಪ್ರವೇಶವನ್ನು ಅನುಮೋದಿಸಿದರು ಮತ್ತು ಕೆಲವರು ಅಸಹಕಾರ ಚಳವಳಿಯನ್ನು ಅನುಮೋದಿಸಿದರು. 1922ರ ಗಯಾ ಕಾಂಗ್ರೆಸ್ ಅಧಿವೇಶನದ ನಂತರ ಸಿ. ಆರ್. ದಾಸ್ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ಕಾಂಗ್ರೆಸ್ ಇಬ್ಭಾಗವಾಗಿ ಪರಿವರ್ತನವಾದಿಗಳು ಮತ್ತು ಅಪರಿವರ್ತನವಾದಿಗಳೆಂದು ಎರಡು ಗುಂಪುಗಳಾದವು. ಕರ್ನಾಟಕದ ಶ್ರೀನಿವಾಸರಾವ ಕೌಜಲಗಿಯವರು ಸ್ವರಾಜ್ಯ ಪಕ್ಷದ ಪ್ರಮುಖ ನಾಯಕರಾಗಿದ್ದರು.

1924ರಲ್ಲಿ ರಾಮ ಪ್ರಸಾದ ಬಿಸಮಿಲ್ಲ ಅವರ ನಾಯಕತ್ವದಲ್ಲಿ ಹಿಂದುಸ್ತಾನ್ ರಿಪಬ್ಲಿಕ್ ಅಸೋಸಿಯೇಶನ್‌ನ ಸಂಘಟನೆಯಾಯಿತು. ಈ ಸಂಘಟನೆಯ ಪ್ರಮುಖರೆಂದರೆ ಸಚಿಂದ್ರನಾಥ ಸನ್ಯಾಲ, ರಾಮ್ ಪ್ರಸಾದ್ ಬಿಸಮಿಲ್ಲ, ಅಶಫಕುಲ್ಲ ಖಾನ್, ಪ್ರೇಮ್‌ಕೃಷ್ಣ ಖನ್ನಾ, ಮುಕುಂದ್ ಲಾಲ್, ವಿಷ್ಣು ಶರಣ್ ದುಬ್ಲೀಷ್, ಸುರೇಶ್‌ಚಂದ್ ಭಟ್ಟಾಚಾರ್ಯ, ರಾಮಕೃಷ್ಣ ಖತ್ರಿ, ಮನ್ಮಥನಾಥ್ ಗುಪ್ತಾ, ರಾಜ್‌ಕುಮಾರ್ ಸಿಂಹಾ, ಥಾಕೂರ ರೋಶನ್ ಸಿಂಗ್, ರಾಜೇಂದ್ರನಾಥ್ ಲಾಹಿರಿ, ಗೋವಿಂದ ಚರಣ್ ಕರ, ರಾಮ್‌ದುಲರೆ ತ್ರಿವೇದಿ, ರಾಮನಾಥ ಪಾಂಡೆ, ಭೂಪೇಂದ್ರನಾಥ್ ಸನ್ಯಾಲ, ಪ್ರಾಣವೇಶ್ ಕುಮಾರ್ ಚಟರ್ಜಿ ಮತ್ತು ಯೋಗೇಶ್ ಚಂದ್ರ ಚಟರ್ಜಿ. ಈ ಸಂಘಟನೆ ಜನವರಿ 1925ರಲ್ಲಿ "ದಿ ರೆವೋಲೂಶನರಿ" ಎಂಬ 4 ಪುಟಗಳ ಪತ್ರವನ್ನು ಪ್ರಕಟಿಸಿತು. ಅದರಲ್ಲಿ ಸಂಘಟನೆಯ ಗುರಿ, ಉದ್ದೇಶ ಮತ್ತು ಕ್ರಾಂತಿಕಾರಿ ಚಟುವಟಿಕೆ ಮಾಡುವ ಕುರಿತು ತಿಳಿಸಲಾಗಿತ್ತು.

ಹಿಂದುಸ್ತಾನ್ ರಿಪಬ್ಲಿಕ್ ಅಸೋಸಿಯೇಶನ್‌ನಲ್ಲಿ ಭಗತಸಿಂಗ್, ಚಂದ್ರಶೇಖರ ಅಜಾದ್ ಮತ್ತು ಸುಖದೇವ ಅವರು ಸೇರಿದರು. ಇದರಿಂದ ಸಂಘಟನೆಗೆ ಭಾರಿ ಬಲ ಬಂದಿತು. ಈ ಸಂಘಟನೆಯ ನಾಯಕರುಗಳು ಭಾರತೀಯರಲ್ಲಿ ದೇಶ ಪ್ರೇಮಿಗಳೆನಿಸಿಕೊಂಡರೆ, ಬ್ರಿಟಿಷರು ಅವರನ್ನು 'ಟೆರರಿಸ್ಟ್' ಎಂದು ಸಂಬೋಧಿಸಿದರು. ಈ ಸಂಘಟನೆಯ ಪ್ರಥಮ ಕ್ರಾಂತಿಕಾರಿ ಘಟನೆ ಎಂದರೆ ಕಕೋರಿ ಬಳಿ ರೈಲು ತಡೆದದ್ದು. ಆಗಸ್ಟ್ 24, 1925 ರಂದು ರೈಲು ಗಾಡಿಯಲ್ಲಿ ಸಾಗಿಸುತ್ತಿದ ಹಣ ಕದಿಯುವ ಉದ್ದೇಶದಿಂದ ಕಕೋರಿ ಬಳಿ ಸರಪಳಿ ಎಳೆದು ಪ್ಯಾಸಂಜರ್ ಗಾಡಿಯನ್ನು ನಿಲ್ಲಿಸಿದರು. ಗಾರ್ಡಿನ ಡಬ್ಬಿಯಲ್ಲಿದ್ದ ಭಾರವಾದ ಉಕ್ಕಿನ ಪೆಟ್ಟಿಗೆ ಹೊರಕ್ಕೆ ತಳ್ಳಿದರು. ಒಬ್ಬ ಗೂರ್ಕ ಪ್ರಯಾಣಿಕ ರೈಫಲ್ ತೆಗೆದು ಹಾರಿಸಲು ಪ್ರಯತ್ನಿಸಿದಾಗ ಕ್ರಾಂತಿಕಾರರು ಅವನನ್ನು ಗುಂಡಿಟ್ಟು ಕೊಂದರು. ಮತ್ತೊಬ್ಬ ಹೊರಕ್ಕೆ ಇಣುಕಿ ನೋಡಲು ಪ್ರಯತ್ನಿಸಿದಾಗ ಅವನನ್ನು ಗುಂಡೇಟಿನಿಂದ ಗಾಯಗೊಳಿಸಲಾಯಿತು. ರಾಮ ಪ್ರಸಾದ ಬಿಸಮಿಲ್ಲ, ಅಶ್ಫಾಕ್‌ಉಲ್ಲ ಖಾನ್, ರಾಜೇಂದ್ರನಾಥ ಲಾಹಿರಿ, ಚಂದ್ರಶೇಖರ ಅಜಾದ್ ಸೇರಿದಂತೆ 25 ಅಪಾದಿತರ ಮೇಲೆ ಮೊಕದ್ದಮೆ ಹೂಡಲಾಯಿತು. ಅಲ್ಲದೆ ಡಿಸೆಂಬರ್ 25, 1924 ರಂದು ನಡೆದ ಬಂಗಾಲ ಡಕಾಯಿತಿ, ಮಾರ್ಚ್ 9, 1925 ರಂದು ಸಂಭವಿಸಿದ ಬಿಚಪುರಿ ಡಕಾಯಿತಿ, ಮೇ 24, 1925 ರಂದು ನಡೆದ ದ್ವಾರಕಪುರ ಡಕಾಯಿತಿಗಳನ್ನು ಇವರ ಮೇಲೆ ಹೇರಲಾಯಿತು. ಪರಿಣಾಮವಾಗಿ ರಾಜೇಂದ್ರಸಿಂಗ್ ಲಾಹಿರಿ, ಅಶ್ಫಾಕ್‌ಉಲ್ಲ, ರಾಮಪ್ರಸಾದ ಬಿಸಮಿಲ್ಲ ಅವರಿಗೆ ಶಿಕ್ಷೆಯಾಗಿ 1927 ಡಿಸೆಂಬರ್‌ನಲ್ಲಿ ಗಲ್ಲಿಗೇರಿಸಲಾಯಿತು.

ಭಗತಸಿಂಗ್ ಮತ್ತು ಸುಖದೇವ ಅವರು ಕ್ರಾಂತಿಕಾರಿ ಸಂಘಟನಾ ಕಾರ್ಯ ಲಾಹೋರಿನಲ್ಲಿ ನಡೆಸಿದ್ದರು. ಅದರಂತೆ ಚಂದ್ರಶೇಖರ ಅಜಾದ್ ಮತ್ತು ಕುಂನಲಾಲ ಗುಪ್ತ ಅವರ ಸಂಘಟನೆ ಕಾನ್ಪುರನಲ್ಲಿ ಮತ್ತು ಫನಿಂದ್ರನಾಥ ಘೋಷ್ ಅವರ ಸಂಘಟನೆ ಬಂಗಾಲದಲ್ಲಿ ಕಾರ್ಯಪ್ರವೃತ್ತರಾದಾಗ ಮೂರು ಸಂಘಟನೆಗಳ ಸಂಘಟಿತ ಸಭೆ ನಡೆಸಲು ಯೋಚಿಸಲಾಯಿತು. ಅದರಂತೆ 1928ರ ಸೆಪ್ಟಂಬರ್ ತಿಂಗಳಲ್ಲಿ ದೆಹಲಿ ಫಿರೋಜಶಾ ಕೋಟ್ಲಾ ಮೈದಾನದಲ್ಲಿ ಸಭೆ ನಡೆಯಿತು. ಅಲ್ಲಿ ಮೂರು ಗುಂಪುಗಳು ಒಂದಾಗಿ ಹೊಸ ಸಂಘಟನೆ 'ದಿ ಹಿಂದುಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್' ಜನ್ಮತಾಳಿತು. ಚಂದ್ರಶೇಖರ ಅಜಾದರನ್ನು ಸಂಘಟನೆಯ ಸರ್ವಶ್ರೇಷ್ಠ ನಾಯಕರನ್ನಾಗಿ ಮಾಡಲಾಯಿತು. ಸಂಘಟನೆಯ ಪ್ರಣಾಳಿಕೆ 'Philosophy of the Bomb' ನ್ನು ಭಗವತ ಚರಣ ವೊರಾ ಅವರು ಬರೆದರು.

1927 ರಲ್ಲಿ ಬ್ರಿಟಿಷರ ಸರಕಾರ ಭಾರತದ ಆಡಳಿತ ನಡೆಸಬಹುದಾದ ಭಾರತೀಯರ ಸಾಮರ್ಥ್ಯ ಅಳೆಯಲು ಒಂದು ಆಯೋಗವನ್ನು ಕಳುಹಿಸಲು ಶಿಫಾರಸ್ಸು ಮಾಡಿತು. ಆದರಂತೆ ಸರ್‌ಜಾನ್ ಸೈಮನ್ ಅವರ ಅಧ್ಯಕ್ಷತೆಯಲ್ಲಿ ಏಳು ಪಾರ್ಲಿಮೆಂಟ್ ಸದಸ್ಯರನ್ನೊಳಗೊಂಡ ಆಯೋಗ ನಿರ್ಮಿಸಿರುವುದನ್ನು ಬ್ರಿಟಿಷ್ ಪಾರ್ಲಿಮೆಂಟನಲ್ಲಿ ಭಾರತದ ರಾಜ್ಯ ಕಾರ್ಯದರ್ಶಿ ಬರ್ಕನ್ ಹೆಡ್ ಘೋಷಿಸಿದರು. ಆಯೋಗದಲ್ಲಿ ಒಬ್ಬ ಸದಸ್ಯನೂ ಭಾರತೀಯನಿರಲಿಲ್ಲ–ಎಲ್ಲರೂ ಬಿಳಿಯರೇ. ವೈಸರಾಯ ಲಾರ್ಡ್ ಇರ್ವಿನ್ ಭಾರತದ ರಾಜಕೀಯ ಪ್ರಮುಖರ ಸಭೆ ಕರೆದು ಸೈಮನ್ ಆಯೋಗ ರಚನೆ ಬಗ್ಗೆ ಚರ್ಚಿಸುವ ಯೋಜನೆ ಮಾಡಿದರು. ಆ ಸಮಯದಲ್ಲಿ ಮಹಾತ್ಮ ಗಾಂಧಿ ಕರ್ನಾಟಕ ಪ್ರವಾಸದಲ್ಲಿದ್ದರು. ರಾಜಕೀಯ ಸಭೆಯಲ್ಲಿ ಭಾಗವಹಿಸಲು ಗಾಂಧೀಜಿಗೆ ಟೆಲಿಗ್ರಾಂ ಸಂದೇಶ

ಕಳುಹಿಸಲಾಯಿತು. ಗಾಂಧೀಜಿ ದೆಹಲಿಗೆ ಬಂದು ಸಭೆ ಕರೆದ ವಿಷಯದ ಕುರಿತು ವೈಸರಾಯರಿಗೆ ಕೇಳಿದಾಗ ಸೈಮನ್ ಆಯೋಗ ನೇಮಿಸಿರುವ ವಿಷಯ ತಿಳಿದರು. ಆಗ ಗಾಂಧೀಜಿ ಪತ್ರಿಕೆಯೇ "Only an anna stamp would have been sufficient to carry this information to me" ಎಂದರು. ಸೈಮನ್ ಆಯೋಗವನ್ನು ಭಾರತದಾದ್ಯಂತ ಬಹಿಷ್ಕರಿಸಲಾಯಿತು. ಸೈಮನ್ ಆಯೋಗ ಫೆಬ್ರವರಿ 3, 1928ರಂದು ಮುಂಬಯಿಗೆ ಬಂದು ಅಕ್ಟೋಬರ್ 30 ರಂದು ಲಾಹೋರಿಗೆ ಭೇಟಿ ನೀಡಿತು. ಲಾಲಾ ಲಜಪತರಾಯರ ನಾಯಕತ್ವದಲ್ಲಿ ಆಯೋಗದ ವಿರುದ್ಧ ಭಾರೀ ಪ್ರದರ್ಶನ ಮಾಡಲಾಯಿತು. ಆಗ ಲಜಪತರಾಯರ ಮೇಲೆ ಲಾಠಿ ಪ್ರಹಾರ ಮಾಡಲಾಯಿತು. ಲಾಲಾಜಿಗೆ ಲಾಠಿಯಿಂದ ಸಾರ್ಜೆಂಟ್ ಸ್ಕಾಟ್ ನೇರವಾಗಿ ಎದೆಗೆ ಗುರಿ ಇಟ್ಟು ಹೊಡೆದದ್ದನ್ನು ಹಲವಾರು ಜನರು ನೋಡಿದರು. ಅದರ ಸುದ್ದಿ ದೇಶದಾದ್ಯಂತ ಹರಡಿತು. ಸ್ಕಾಟ್‌ನ ಲಾಠಿ ಹೊಡೆತದಿಂದ ಗಾಯಗೊಂಡ ಲಜಪತ್‌ರಾಯರು ನವಂಬರ್ 17, 1928ರಂದು ತೀರಿಕೊಂಡರು. ಲಜಪತರಾಯರಿಗೆ ಹೊಡೆದ ಸ್ಕಾಟ್‌ನನ್ನು ಕೊಲೆ ಮಾಡಲು ಭಗತಸಿಂಗ್, ಸುಖದೇವ, ರಾಜಗುರು ಮತ್ತು ಚಂದ್ರಶೇಖರ ಅಜಾದರು ತೀರ್ಮಾನಿಸಿ ಸಂಚುಹಾಕಿದರು. ಕೊಲೆಯ ಯೋಜನೆ ಪ್ರಕಾರ ಜೈಗೋಪಾಲ್, ಭಗತ್‌ಸಿಂಗ್ ಮತ್ತು ರಾಜ್‌ಗುರು ಅವರಿಗೆ ಸ್ಕಾಟ್ ಕಚೇರಿಯಿಂದ ಹೊರಬರುವ ಸಂಕೇತ ನೀಡಬೇಕೆಂದಾಯಿತು. ಡಿಸೆಂಬರ್ 17, 1928 ರಂದು ಪೋಲಿಸ್ ಡೆಪ್ಯುಟಿ ಸೂಪರಿಂಟೆಂಡೆಂಟ್ ಜೆ. ಪಿ. ಸ್ಯಾಂಡರ್ಸ್ ಪೋಲಿಸ್ ಕಚೇರಿಯಿಂದ ಹೊರ ಬಂದಾಗ ಅವನೇ ಸಾರ್ಜಂಟ ಸ್ಕಾಟ್ ಎಂದು ತಿಳಿದು ಅವನನ್ನು ಗುಂಡಿಟ್ಟು ಕೊಂದರು. ಆಗ ಚಂದ್ರಶೇಖರ ಅಜಾದನನ್ನು ಹಿಡಿಯಲು ಪ್ರಯತ್ನಿಸಿದ ಪೋಲಿಸ ಪೇದೆ ಚನ್ನನಸಿಂಗ್‌ನನ್ನು ಕೊಲ್ಲಲಾಯಿತು. ಮರುದಿನ ಲಾಹೋರ್ ನಗರದ ಗೋಡೆಗಳ ಮೇಲೆ "J P Saunders is dead ; Lala Lajpat Rai is avenged…. In this man has died an agent of the British authority in India…..Sorry for the bloodshed of the human being, but the sacrifice of individuals at the altar of revolution …… is inevitable" ಎಂದು ಭಿತ್ತಿ ಪತ್ರಗಳನ್ನು ಅಂಟಿಸಲಾಯಿತು. ಲಾಹೋರ್‌ನಲ್ಲಿರುವ ಭಗತಸಿಂಗ್ ಮನೆಯನ್ನು ಪೋಲಿಸರು ಏಪ್ರಿಲ್ 15, 1929 ರಂದು ಶೋಧಿಸಿದಾಗ 11 ಸಿಡಿಮದ್ದುಗಳು, 2 ಪಿಸ್ತೂಲ್ ಮತ್ತು 24 ಕಾಡತುಸುಗಳು ದೊರೆತವು. ಇದರಿಂದಾಗಿ ಭಗತಸಿಂಗ್, ಸುಖದೇವ, ರಾಜಗುರು ಮತ್ತು ಚಂದ್ರಶೇಖರ ಅಜಾದರನ್ನು ಬಂಧಿಸಲಾಯಿತು. ಷಹರಾನಪೂನಲ್ಲಿ ನಡೆದ ಶೋಧ ಕಾರ್ಯದಲ್ಲಿ 5 ಬಾಂಬುಗಳು, 5 ತುಪಾಕಿಗಳು ದೊರೆತವು.

ರಾಷ್ಟ್ರೀಯ ಕ್ರಾಂತಿಕಾರಿಗಳ ಮುಂದಿನ ಮಹತ್ವದ ಕ್ರಾಂತಿಕಾರಿ ಕಾರ್ಯವೆಂದರೆ ದೆಹಲಿ ಕೇಂದ್ರ ಶಾಸನ ಸಭೆಯ ಮೇಲೆ ಬಾಂಬ್ ದಾಳಿ. ಈ ದಾಳಿಯ ಪ್ರಮುಖ ಕಾರಣವೆಂದರೆ ಬ್ರಿಟಿಷ್ ಸರಕಾರ ಕೇಂದ್ರ ಶಾಸನ ಸಭೆಯಲ್ಲಿ ಸಾರ್ವಜನಿಕ ಸುರಕ್ಷಾ ಮಸೂದೆ ಮತ್ತು ವ್ಯಾಪಾರ ವಿವಾದಗಳ ಮಸೂದೆಯನ್ನು ಮಂಡಿಸುವ ತಯಾರಿಯಲ್ಲಿದ್ದಿತ್ತು. ಅದನ್ನು ವಿರೋಧಿಸುವುದಕ್ಕಾಗಿ ರಾಷ್ಟ್ರೀಯ ಕ್ರಾಂತಿಕಾರಿಗಳು ನಿರ್ಧರಿಸಿದರು. ಅದನ್ನು ಸಭೆ, ಮೆರವಣಿಗೆ ಮಾಡುವ ಮೂಲಕ ವಿರೋಧಿಸಬಹುದಿತ್ತು. ಆದರೆ ಅವರ ಸಿದ್ಧಾಂತಗಳು ಕ್ರಾಂತಿಕಾರಿ ಚಟುವಟಿಕೆಗಳಿಂದ ಕೂಡಿದ್ದರಿಂದ ಸಭೆ ನಡೆಯುವಾಗ ಬಾಂಬ್ ದಾಳಿ ಮಾಡುವ ಯೋಜನೆ ತಯಾರಿಸಿದರು. ಸಮಕಾಲೀನ ದಾಖಲೆಗಳು ನಮೂದಿಸುವಂತೆ ಭಗತಸಿಂಗ್, ಸುಖದೇವ, ರಾಜಗುರು ಮತ್ತು ಚಂದ್ರಶೇಖರ ಅಜಾದರು ದೆಹಲಿ ಕೇಂದ್ರ ಶಾಸನ ಸಭೆಯ ಮೇಲೆ ಬಾಂಬ್ ದಾಳಿ ಮಾಡಿದ ಉದ್ದೇಶ ಬ್ರಿಟಿಷ್ ಸರಕಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಆ ಕಡೆ ಬರುವಂತೆ ಮಾಡವುದಾಗಿತ್ತು. ಅದೇ ಉದ್ದೇಶದಿಂದ ಏಪ್ರಿಲ್ 8, 1929 ರಂದು ಬಾಂಬ್ ದಾಳಿ ಮಾಡಲು ಪೂರ್ವ ತಯಾರಿ ಮಾಡಿಕೊಂಡರು. ಸಭೆಯ ಕಾರ್ಯಕಲಾಪಗಳು ವಿ. ಜೆ. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ನಡೆದಿರುವಾಗ ಸಭಾಸದಸ್ಯರು ಕೂಡುವ ಖಾಲಿ ಸ್ಥಳದ ಮೇಲೆ ಗುರಿ ಇಟ್ಟು ಭಗತ್‌ಸಿಂಗ್ ಮತ್ತು ಬಟುಕೇಶ್ವರ ದತ್ತ ಅವರು ಎರಡು ಬಾಂಬ್‌ಗಳನ್ನು ಸಿಡಿಸಿ, ಎರಡು ಸುತ್ತು ಗುಂಡು ಹಾರಿಸಿದರು. ಆದರೆ ಅಲ್ಲಿಂದ ಪಾರಾಗುವ ಕಾರ್ಯ ಮಾಡದೆ ಬಂಧನಕೊಳ್ಳಗಾದರು. ಪೋಲಿಸರು ಅವರನ್ನು ಬಂಧಿಸಿ ಕರೆದೊಯ್ಯುವಾಗ "Long Live the Revolution" ಮತ್ತು "Down with Imperialism" ಎಂದು ಎತ್ತರದ ಧ್ವನಿಯಲ್ಲಿ ಕೂಗುತ್ತಿದ್ದರು. ಅಷ್ಟೇ ಅಲ್ಲ "To Make the Deaf Hear" ಎಂಬ ಬಿತ್ತಿಪತ್ರವನ್ನು ಕೇಂದ್ರ ಶಾಸನ ಸಭೆಯಲ್ಲಿ ತೂರಾಡಿದರು. ಶಾಸನ ಸಭೆಯಲ್ಲಿ ಬಹು ಸಂಖ್ಯೆಯಲ್ಲಿ ಭಾರತೀಯ ಸಭಾಸದಸ್ಯರು ಹಾಜರಿದ್ದರು. ಆದರೆ ಬಾಂಬ್ ದಾಳಿಯಿಂದ ಯಾವ ಪ್ರಾಣ ಹಾನಿಯೂ ಆಗಲಿಲ್ಲ.

ದೆಹಲಿ ಬಾಂಬ್ ಘಟನೆ ವಿಚಾರಣೆ ನಡೆದು ಜೂನ್ 12, 1929 ರಂದು ತೀರ್ಪು ಹೊರಬಿದ್ದು ಭಗತಸಿಂಗ್ ಮತ್ತು ಬಟುಕೇಶ್ವರ ದತ್ತ ಅವರಿಗೆ ಗಡಿಪಾರು ಶಿಕ್ಷೆ ವಿಧಿಸಲಾಯಿತು. ಅವರು ಜೈಲಿನಲ್ಲಿದ್ದಾಗ ಇಬ್ಬರಿಗೂ ಚಿತ್ರಹಿಂಸೆ ನೀಡಲಾಯಿತು. ಅಲ್ಲದೇ ಮೂಲ ಸೌಲಭ್ಯ ನೀಡಲಿಲ್ಲ. ಇದರಿಂದದಾಗಿ ಭಗತಸಿಂಗ್ ಮತ್ತು ಬಟುಕೇಶ್ವರ ದತ್ತ ಅವರು ತಮ್ಮನ್ನು ರಾಜಕೀಯ ಕೈದಿಗಳೆಂದು ಪರಿಗಣಿಸಿ ಬ್ರಿಟಿಷ್ ಶಿಕ್ಷಿತರಿಗೆ ನೀಡುತ್ತಿರುವ ಉತ್ತಮ ಆಹಾರ, ಬಟ್ಟೆ, ಶೌಚಾಲಯ ಮತ್ತು ಇತರ ಆರೋಗ್ಯಕರ ಸೌಲಭ್ಯಗಳನ್ನು ತಮಗೂ ದೊರಕಿಸಬೇಕೆಂಬ ಬೇಡಿಕೆಯೊಂದಿಗೆ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಇಬ್ಬರ ಮೇಲೆ ಕೊಲೆ, ರಾಜದ್ರೋಹದಂತಹ ಗುರುತರ ಆಪಾದನೆಯ ಮೊಕದ್ದಮೆಗಳ ವಿಚಾರಣೆ ನ್ಯಾಯಾಲಯಗಳಲ್ಲಿ ನಡೆದಿದ್ದವು. ಜೈಲು ಅಧಿಕಾರಿಗಳು ಅವರಿಗೆ ಬಲಾತ್ಕಾರದಿಂದ ನಳಿಕೆಯ ಮೂಲಕ ಆಹಾರ ಹಾಕಲು ಪ್ರಯತ್ನಿಸಿದರು ಮತ್ತು ಅವರಿಬ್ಬರೂ ಅದನ್ನು ಪ್ರತಿಭಟಿಸಿದ್ದರಿಂದ ಇಬ್ಬರ ದೇಹಾರೋಗ್ಯ ಕೆಟ್ಟಿತು. ಆದರೂ ಭಗತಸಿಂಗ್ ಅವರ ಕೈಕಾಲಿಗೆ ಬೇಡಿ ಹಾಕಿ ಮಿಯನ್‌ವಾಲಿ ಜೈಲಿನಿಂದ ಮೊಕದ್ದಮೆಯ ವಿಚಾರಣೆಗಾಗಿ ಲಾಹೋರಿಗೆ ಕರೆದುಕೊಂಡು ಹೋಗಲಾಯಿತು. ಅದರಂತೆ ಬಿಟುಕೇಶ್ವರ ದತ್ತ ಅವರನ್ನು 'ಸ್ಟ್ರೆಚರ್' ಮೇಲೆ ಮಲಗಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ಭಗತಸಿಂಗ್ ಕುರಿತು ಮಹಮ್ಮದ ಅಲಿ ಜಿನ್ನಾ ಕೇಂದ್ರ ಅಸೆಂಬ್ಲಿಯಲ್ಲಿ ಮಾಡಿದ ಭಾಷಣ : "The man who goes on hunger strike has a soul. He is moved by that soul, and he believes in the justice of his cause. . . however much you deplore them and however much you say they are misguided, it is the system, this damnable system of governance, which is resented by the people"

ಈ ಮಧ್ಯೆ ಜವಾಹರಲಾಲ ನೆಹರು ಅವರು ಮಿಯನ್‌ವಾಲಿ ಜೈಲಿಗೆ ಭೇಟಿ ನೀಡಿ ಅಲ್ಲಿರುವ ಕೈದಿಗಳೊಂದಿಗೆ ಮಾತನಾಡಿದರು. ಜೈಲಿನಲ್ಲಿರುವ ಕೈದಿಗಳ ದೇಶಭಕ್ತಿ, ಅವರಿಗಾದ ಚಿತ್ರಹಿಂಸೆ ಕುರಿತಂತೆ ಹೇಳಿದ ಮಾತು ಹೀಗಿದೆ : "I was very much pained to see the distress of the heroes. They have staked their lives in this struggle. They want that political prisoners should be treated as political prisoners. I am quite hopeful that their sacrifice would be crowned with success".

ಭಗತ್‌ಸಿಂಗ್ ಉಪವಾಸ ಸತ್ಯಾಗ್ರಹ ನಿಲ್ಲಿಸುವಂತೆ ಮಾಡಲು ಉನ್ನತಮಟ್ಟದಲ್ಲಿ ಪ್ರಯತ್ನಗಳಾದವು. ಈ ಕುರಿತು ಕಾಂಗ್ರೆಸ್ ಸಂಸ್ಥೆ ಗೊತ್ತುವಳಿಯನ್ನು ಪಾಸು ಮಾಡಿತು. ಇದರಿಂದಾಗಿ 116 ದಿನಗಳ ಉಪವಾಸ ಸತ್ಯಾಗ್ರಹವನ್ನು ಭಗತ್‌ಸಿಂಗ್ ಅಕ್ಟೋಬರ್ 5, 1929ರಂದು ನಿಲ್ಲಿಸಿದನು. ಭಗತ್‌ಸಿಂಗ್, ಸುಖದೇವ ಮತ್ತು ರಾಜಗುರು ಅವರ ವಿರುದ್ಧ ಇಲ್ಲಸಲ್ಲದ ಹಲವಾರು ಮೊಕದ್ದಮೆಗಳನ್ನು ಹಾಕಿ, ಅವುಗಳ ವಿಚಾರಣೆ ಬೇರೆ ಬೇರೆ ನ್ಯಾಯಾಲಯಗಳಲ್ಲಿ ನಡೆದಿದ್ದಿತು. ಜೆ.ಪಿ. ಸ್ಯಾಂಡರ್ಸ್ ಕೊಲೆ ಪ್ರಕರಣದ 300 ಪುಟಗಳ ತೀರ್ಪು ಅಕ್ಟೋಬರ್ 7, 1930ರಂದು ಹೊರಬಿದ್ದು ಮೂವರಿಗೂ ಗಲ್ಲಿಗೇರಿಸುವಂತೆ ಆದೇಶವಾಯಿತು. ಉಳಿದ 12 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ದೇಶದಾದ್ಯಂತ ಅವರಿಗೆ ಕ್ಷಮಾದಾನ ಮಾಡುವಂತೆ ಸರಕಾರದ ಮೇಲೆ ಒತ್ತಡ ಹೇರಲಾಯಿತು. ಕಾಂಗ್ರೆಸ್ ಅಧ್ಯಕ್ಷ ಮದನ ಮೋಹನ ಮಾಲವೀಯ ಈ ಕುರಿತು ವೈಸರಾಯ ಲಾರ್ಡ್ ಇರ್ವಿನ್ ಅವರಿಗೆ ಫೆಬ್ರವರಿ 14, 1931ರಂದು ಮೇಲ್ಮನವಿ ಸಲ್ಲಿಸಿದರು. ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವಂತೆ ಕೈದಿಗಳೂ ಸಹ ಮಹಾತ್ಮ ಗಾಂಧಿಗೆ ಮನವಿ ಸಲ್ಲಿಸಿದರು. ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅಂತಿಮವಾಗಿ ವಿಭಜನೆ ಪೂರ್ವದ ಸಮಗ್ರ ಭಾರತದ ವೀರ ಹೋರಾಟಗಾರರಾದ ಭಗತ್‌ಸಿಂಗ್, ಸುಖದೇವ ಮತ್ತು ರಾಜಗುರು ಅವರನ್ನು ಮಾರ್ಚ್ 23, 1931ರಂದು ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಸರಕಾರದ ಈ ಕೃತ್ಯವನ್ನು ನಾಡಿನಾದ್ಯಂತ ಖಂಡಿಸಲಾಯಿತು. ಹಾಗೆಯೇ ಸೊಲ್ಲಾಪುರ ಹಿಂಸಾಚಾರಕ್ಕಾಗಿ ಧನಶೆಟ್ಟಿ ಮಲ್ಲಪ್ಪ, ಜಗನ್ನಾಥ ಸಿಂಧೆ, ಶ್ರೀ ಕೃಷ್ಣ ಶರದ್ ಮತ್ತು ಅಬ್ದುಲ್ ರಸೂಲ್ ಕೂರ್ಬಾನ್ ಹುಸೇನ್ ಅವರಿಗೆ ಮರಣ ದಂಡನೆಯಾಗಿ ಜುಲೈ 12, 1931ರಂದು ಯರವಾಡ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

(ವಿವಿಧ ಮೂಲಗಳಿಂದ)

❑ **ಡಾ.ಜಿ.ಎ. ಬಿರಾದಾರ**

# ವಿಶ್ವದ ಶ್ರೇಷ್ಠ ಕ್ರಿಕೆಟಿಗ ರಾಹುಲ್ ದ್ರಾವಿಡ್ ಕ್ರಿಕೆಟ್‌ಗೆ ಶುಭ ವಿದಾಯ



ವಿಶ್ವದ ಶ್ರೇಷ್ಠ ಕ್ರಿಕೆಟಿಗರಲ್ಲಿ ಒಬ್ಬರಾದ ಕರ್ನಾಟಕದ ಹೆಮ್ಮೆಯ ರಾಹುಲ್ ದ್ರಾವಿಡ್ ಮಾರ್ಚ್ 9ರಂದು ಅಂತರ ರಾಷ್ಟ್ರೀಯ ಹಾಗೂ ದೇಶೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಕಲಾತ್ಮಕತೆ, ಆಟದ ತಂತ್ರ, ಕೌಶಲ, ಶಿಸ್ತು, ಅರ್ಪಣೆ, ಏಕಾಗ್ರತೆ, ಗುರಿಯ ಬಗ್ಗೆ ದಿಕ್ಕು ತಪ್ಪದ ಸಂಕಲ್ಪ ಮತ್ತು ತನ್ನ ಆಟವನ್ನು ಪರಿಷ್ಕರಿಸಿಕೊಳ್ಳುತ್ತ ಹೊಸ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸಿದ ದ್ರಾವಿಡ್ ಕ್ರಿಕೆಟ್ ಇತಿಹಾಸದಲ್ಲಿ ಎಂದೆಂದಿಗೂ ಚಿರಸ್ಮರಣೀಯ. ಇಡೀ ಬದುಕನ್ನು ಕ್ರಿಕೆಟ್‌ಗೆ ಮುಡುಪಾಗಿಟ್ಟಿದ್ದ 'ವಾಲ್' ಎಂದೇ ಖ್ಯಾತರಾಗಿದ್ದ ರಾಹುಲ್ ದ್ರಾವಿಡ್ ಇದೀಗ ನಿವೃತ್ತರಾಗಿರುವುದು ಕ್ರಿಕೆಟ್ ಪ್ರೇಮಿಗಳಿಗೆ ಭರಿಸಲಾಗದ ನೋವಿನ ಸಂಗತಿ. ಆದರೆ ಪ್ರತಿಯೊಂದಕ್ಕೂ ಒಂದು ಅಂತ್ಯ ಇರಲೇ ಬೇಕು. ಯಶಸ್ಸಿನ ತುಟ್ಟ ತುದಿಯಲ್ಲಿರುವಾಗಲೇ ನಿವೃತ್ತರಾಗುವ ಧೃಡ ನಿರ್ಧಾರ ಮಾಡಿದ ದ್ರಾವಿಡ್ ಅವರ ಮನೋ ಸಂಕಲ್ಪ ನಿಜಕ್ಕೂ ಶ್ಲಾಘನೀಯ. ದ್ರಾವಿಡ್ ಒಬ್ಬ ಪರಿಪೂರ್ಣ ಕ್ರಿಕೆಟರ್ ಆಗಿದ್ದರು. ಬದ್ಧತೆ, ಏಕಾಗ್ರತೆ, ಧೃಡ ಸಂಕಲ್ಪ ಇವರ ಕ್ರಿಕೆಟ್ ಬದುಕಿನ ಮೂರು ಪ್ರಮುಖ ಅಂಶಗಳಾಗಿದ್ದವು. ಸುಮಾರು 16ವರ್ಷಗಳ ತಮ್ಮ ಕ್ರಿಕೆಟ್ ಪಯಣದಲ್ಲಿ ಯಶಸ್ಸಿನ ಶೃಂಗವನ್ನೇರಿ ಮುನ್ನಡೆದಿದ್ದ ವೀರ ಕ್ರಿಕೆಟ್ ಸೇನಾನಿ ದ್ರಾವಿಡ್ ಇದೀಗ ವಿಶ್ರಾಂತರಾಗಿದ್ದಾರೆ. ಸೋಲು–ಗೆಲುವುಗಳನ್ನು ಸಮಚಿತ್ತದಿಂದ ಸ್ವೀಕರಿಸುತ್ತಿದ್ದ ದ್ರಾವಿಡ್ ಮಹಾನ್ ಸಾಧಕರಾಗಿದ್ದಾರೆ. ಮೈದಾನದಲ್ಲಾಗಲಿ, ಹೊರಗಾಗಲೀ ಎಂದೂ ಸಭ್ಯತೆಯ ಸಾಕಾರ ಮೂರ್ತಿಯಾಗಿದ್ದ ದ್ರಾವಿಡ್ ಅವರು ಇಂದಿನ ಯುವ ಪೀಳಿಗೆಯ ಆಟಗಾರರಿಗೆ ಮಾದರಿಯಾಗಿದ್ದಾರೆ ಹಾಗೂ ಕ್ರಿಕೆಟ್ ಜಗತ್ತಿನಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದಾರೆ. ದ್ರಾವಿಡ್ ಅವರ ಆಟದಲ್ಲಾಗಲಿ, ವ್ಯಕ್ತಿತ್ವದಲ್ಲಾಗಲಿ ಅಹಂ ಎಂಬುದೇ ಇಲ್ಲ.

**ಕ್ರಿಕೆಟ್ ಜೀವನ**

164 ಟೆಸ್ಟ್ ಮ್ಯಾಚ್‌ಗಳು, 286 ಇನ್ನಿಂಗ್ಸ್, 13,288 ರನ್‌ಗಳು, ಅತಿಹೆಚ್ಚು 270, 36 ಶತಕಗಳು, 63 ಅರ್ಧ ಶತಕಗಳು.

344 ಏಕದಿನ ಪಂದ್ಯಗಳು, 318 ಇನ್ನಿಂಗ್ಸ್, 10,889 ರನ್‌ಗಳು, ಅತಿಹೆಚ್ಚು 153

298 ಪ್ರಥಮ ದರ್ಜೆ ಪಂದ್ಯಗಳು, 497 ಇನ್ನಿಂಗ್ಸ್, 23794 ರನ್‌ಗಳು, ಅತಿಹೆಚ್ಚು 270, 21 ಶತಕಗಳು, 112 ಅರ್ಧ ಶತಕಗಳು, 210 ಕ್ಯಾಚ್‌ಗಳ ವಿಶ್ವದಾಖಲೆ. . .

ಅಸಂಖ್ಯಾತ ದಾಖಲೆಗಳನ್ನು ಸೃಷ್ಟಿಸಿದ ರಾಹುಲ್ ಕನ್ನಡಿಗರ ಹಿರಿಮೆ ಗರಿಮೆಗಳನ್ನು ವಿಶ್ವಕ್ಕೆ ಸಾರಿದ ಮಹಾನ್ ಆಟಗಾರ ಎಂಬುದು ಅಭಿಮಾನದ ಮತ್ತು ಹೆಮ್ಮೆಯ ಸಂಗತಿ.

"ಕ್ರಿಕೆಟ್‌ನಲ್ಲಿ ಯಾರೂ ಕೊನೆ ತನಕ ಉಳಿಯಲಾರರು. ಕೊನೆಯ ದಿನವೆಂಬುದು ಇದ್ದೇ ಇರುತ್ತದೆ. ಈ ದಿನ ನನಗೆ ಇಂದು ಬಂದಿದೆ. ನಾಳೆ ಇನ್ನೊಬ್ಬರಿಗೆ ಬರುತ್ತದೆ. ಎಲ್ಲ ಯಶಸ್ಸಿನ ನಡುವೆಯೂ ಅಂಗಣದಿಂದ ನಿರ್ಗಮಿಸಬೇಕಾದ ಅನಿವಾರ್ಯತೆ ಇದ್ದೇ ಇರುತ್ತದೆ". ಎಂಬ ದ್ರಾವಿಡರ ನಿವೃತ್ತಿಯ ಮಾತುಗಳು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ ಹಾಗೂ ಬದುಕಿನ ಇಡೀ ಸಂದೇಶವನ್ನು ಸಾರುತ್ತದೆ.

ಕರ್ನಾಟಕದ ಮಹತ್ವವನ್ನು ಉನ್ನತ ಶಿಖರಕ್ಕೇರಿಸಿದ ರಾಹುಲ್ ದ್ರಾವಿಡ್ ಅವರಿಗೆ ಅಭಿಮಾನಪೂರಿತ ಅಭಿನಂದನೆಗಳು. ಅವರ ವಿಶ್ರಾಂತ ಜೀವನ ಸುಖಮಯವಾಗಿರಲಿ, ಅವರ ಬದುಕು ಅವರು ಬಯಸಿದಂತಾಗಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಶುಭ ಹಾರೈಸುತ್ತೇವೆ.

# ದ್ರಾವಿಡ್‌ಗೆ ಎಸೆದ ಆರು ಚೆಂಡುಗಳು !

ಕ್ರಿಕೆಟ್ ಗೀಳು ನನ್ನನ್ನು ಶೈಕ್ಷಣಿಕ ಆಯ್ಕೆಯಲ್ಲಿ ಎಡವಿ ಬೀಳುವಂತೆ ಮಾಡಿತ್ತು. ಭಾಷೆ ಮತ್ತು ಸಾಮಾಜಿಕ ಅಧ್ಯಯನಗಳಲ್ಲಿ ಹೆಚ್ಚು ಅಂಕವಿದ್ದರೂ ವಾಣಿಜ್ಯ ವಿಷಯವನ್ನು ನೆಚ್ಚಿಕೊಂಡೆ.

ಕಲಾ ವಿಷಯವನ್ನು ಓದು, ಎಂಬ ಅಣ್ಣನ ಸಲಹೆಗೆ ಕಿವಿ ಕೊಡಲಿಲ್ಲ. ವಾಣಿಜ್ಯ ವಿಷಯ ಓದಿ ಬ್ಯಾಂಕ್ ಸೇರಿಕೊಂಡರೆ ಕ್ರಿಕೆಟ್ ರಂಗದಲ್ಲಿ ಹೆಚ್ಚಿನ ಸಾಧನೆ ಮಾಡಬಹುದು ಎಂಬ ಭ್ರಮೆ ಆವರಿಸಿಕೊಂಡಿತ್ತು. ರಾಜ್ಯ ಮತ್ತು ದೇಶವನ್ನು ಕ್ರಿಕೆಟ್ ನಲ್ಲಿ ಪ್ರತಿನಿಧಿಸುವ ಕನಸು ತುಂಬಿಕೊಂಡಿತ್ತು.

ಮುಲ್ಕಿಯ ವಿಜಯ ಕಾಲೇಜ್ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ಮತ್ತು ಆರಂಭ ಆಟಗಾರನಾಗಿ ಆಡಿದೆ. ಮಂಗಳೂರು ವಿಶ್ವವಿದ್ಯಾಲಯ ಪ್ರತೀ ವರುಷ ಬಿ.ಸಿ.ಆಳ್ವ ಟ್ರೋಫಿ ಪಂದ್ಯ ಆಯೋಜಿಸುತ್ತಿತ್ತು.

ಬಿ.ಸಿ.ಆಳ್ವ ಎಂದೇ ಹೆಸರಾಗಿದ್ದ ದ.ಕ.ಜಿಲ್ಲೆಯ ಪುತ್ತೂರಿನ ಬೆಳ್ಳಿಪಾಡಿ ಚಂದ್ರಹಾಸ ಆಳ್ವ 1951–52ರಲ್ಲಿ ಭಾರತದ ಪರ ಎರಡು ಅನಧಿಕೃತ ಟೆಸ್ಟ್ ಪಂದ್ಯ ಆಡಿದ್ದರು. ಅಕಾಲದಲ್ಲಿ ಕ್ಯಾನ್ಸರ್‌ಗೆ ಬಲಿಯಾಗಿದ್ದರು. 1991–92 ರಲ್ಲಿ ನಾನು ಬಿ.ಸಿ.ಆಳ್ವ ಟ್ರೋಫಿ ಮೊದಲ ಪಂದ್ಯದಲ್ಲಿ ಎಂ.ಐ.ಟಿ ಮಣಿಪಾಲ ಎದುರು ಆರಂಭ ಆಟಗಾರನಾಗಿ ತೆರಳಿ ಶೂನ್ಯ ಸಂಪಾದನೆ ಮಾಡಿದೆ. ಎರಡನೆ ಪಂದ್ಯ ಉಡುಪಿಯ ಪೂರ್ಣಪ್ರಜ್ಞ ಕಾಲೇಜ್ ಎದುರು ಎರಡು ರನ್ ಹೊಡೆದು ಕಾಟ್ ಬಿಹೈಂಡ್ ಆದೆ. ಅಲ್ಲಿಗೆ ನನ್ನ ಕ್ರಿಕೆಟ್ ಕನಸು ಚೂರಾಗಿತ್ತು.

ವಾಣಿಜ್ಯ ಪದವಿ ಗಳಿಸಿ ಬೆಂಗಳೂರು ಸೇರಿದೆ. ಖಾಸಗಿ ಕಂಪೆನಿಯಲ್ಲಿ ಆಗ ಲೆಕ್ಕ ಪತ್ರ ನೋಡಿಕೊಳ್ಳುವ ಕೆಲಸ. ಕ್ರಿಕೆಟ್ ಹುಚ್ಚು ಇನ್ನೂ ಬಿಟ್ಟಿರಲಿಲ್ಲ. ಅದು 1993–94 ರಣಜಿ ಸೀಸನ್. ಬೆಂಗಳೂರಿನಲ್ಲಿ ಕರ್ನಾಟಕ ಮತ್ತು ಮುಂಬೈ ತಂಡಗಳ ನಡುವೆ ನಿರ್ಣಾಯಕ ಪಂದ್ಯ. ಮುಂಬೈ ತಂಡದಲ್ಲಿ ಅನುಭವಿ ಆಟಗಾರರು ಗೈರು ಹಾಜರಾಗಿದ್ದರು.

ಹೊಸ ಆಟಗಾರರನ್ನು ಹಾಕಿಕೊಂಡು ತಂಡವನ್ನು ನಡೆಸುವ ಜವಾಬ್ದಾರಿಯನ್ನು ರವಿ ಶಾಸ್ತ್ರಿಗೆ ನೀಡಿದ್ದರು. ನನ್ನ ದೂರದ ಸಂಬಂಧಿಯೂ ಆಗಿದ್ದ ರವಿಶಾಸ್ತ್ರಿಯನ್ನು ಹತ್ತಿರದಿಂದ ಒಮ್ಮೆ ನೋಡುವ ಹಂಬಲ ಬಲವಾಗಿತ್ತು. 1992ರ ವಿಶ್ವಕಪ್ ನಲ್ಲಿ ಕಾಲು ನೋವಿನ ನಡುವೆ ಆಡಿ ನೀರಸ ಪ್ರದರ್ಶನ ನೀಡಿದ್ದ ಶಾಸ್ತ್ರಿ ಟೀಕೆಗೆ ಗುರಿಯಾಗಿದ್ದರು. ಅದಕ್ಕೂ ಸ್ವಲ್ಪ ಹಿಂದೆ ಆಸ್ಟ್ರೇಲಿಯಾ ಎದುರು ದ್ವಿಶತಕ ಹೊಡೆದಿದ್ದ ರವಿ ಶಾಸ್ತ್ರಿಯ ಅಂತಾರಾಷ್ಟ್ರೀಯ ಬದುಕು ಕೊನೆಗೊಂಡಿತ್ತು.

30ರ ಹರೆಯದ ಶಾಸ್ತ್ರೀ ಅಷ್ಟರಲ್ಲಿ 80 ಟೆಸ್ಟ್ ಆಡಿದ್ದರು!. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆ ದಿನ ಕರ್ನಾಟಕ ಎದುರು ಮುಂಬೈ ಗೆಲ್ಲಬೇಕಾದರೆ 406 ರನ್ ಗುರಿ ತಲುಪಬೇಕು. ಮುಂಬೈಯ ಆರು ಆಟಗಾರರನ್ನು 174 ರನ್ನಿಗೆ ಪೆವಿಲಿಯನ್ ಗೆ ಅಟ್ಟಿದ ಕರ್ನಾಟಕದ ಆಟಗಾರರು ಮೇಲುಗೈ ಸಾಧಿಸಿದ್ದರು.ಈ ಒತ್ತಡದ ಸನ್ನಿವೇಶದಲ್ಲಿ ನೆಲಕಚ್ಚಿ ಆಡಿದ ನಾಯಕ ರವಿ ಶಾಸ್ತ್ರಿ 151 ರನ್ ಹೊಡೆದು ಮುಂಬೈಯನ್ನು ಫೈನಲ್ ಗೆ ತಲುಪಿಸಿದರು. ಒಂಭತ್ತು ವರುಷದ ಬಳಿಕ ಮುಂಬೈಗೆ ಮತ್ತೆ ರಣಜಿ ಕಿರೀಟ ತೊಡಿಸಿದರು.

ಸಂಜೆ ಪಂದ್ಯ ಮುಗಿದ ಬಳಿಕ ಪ್ರೇಕ್ಷಕರೆಲ್ಲ ಹೊರನಡೆಯುತ್ತಿದ್ದರು. ನಾನು ಮೆಲ್ಲನೆ ಮೈದಾನಕ್ಕೆ ಇಳಿದೆ. ಕರ್ನಾಟಕದ ಕೆಲವು ಆಟಗಾರರು ನಿಧಾನಕ್ಕೆ ಮೈದಾನದ ಇನ್ನೊಂದು ಮಗ್ಗುಲಿಗೆ ತಾಲೀಮಿಗೆ ತೆರಳುತಿದ್ದರು. ಅವರಲ್ಲಿ ಒಬ್ಬರಿಗೆ ನಾನು ವಿಶ್ ಮಾಡಿದೆ. ಅವರು ನಕ್ಕರು. ಮಾತಿಗೆ ತೊಡಗಿಕೊಂಡರು. ಅವರ ಹೆಸರು ಸುಜಿತ್ ಸೋಮಸುಂದರ್. ಆತ ವಾಚಾಳಿಯಂತೆ ಕಂಡಿತು. ಡೇವಿಡ್ ಜಾನ್ಸನ್ ಎಂಬ ವೇಗದ ಬೌಲರ್ ಜೊತೆಯಾದರು.

ನಾನು ಸ್ಪಿನ್ ಬೌಲಿಂಗ್ ಮಾಡುತ್ತಿದ್ದೆ. ಅಷ್ಟರಲ್ಲಿ ನೀಳಕಾಯದ ತರುಣ ಆಟಗಾರ ನಮ್ಮ ಬಳಿಗೆ ನಡೆದು ಬರುತ್ತಿದ್ದರು. ಅವರೇ ರಾಹುಲ್ ದ್ರಾವಿಡ್. ದ್ರಾವಿಡ್ ನನ್ನ ಬಳಿ ಚೆಂಡು ಇರುವುದನ್ನು ಗಮನಿಸಿ ತನ್ನತ್ತ ಬೌಲಿಂಗ್ ನಡೆಸುವಂತೆ ಸನ್ನೆ ಮಾಡಿದರು. ಅವರಿಗೆ ಅದೇ ಶೈಲಿಯಲ್ಲಿ ಎಸೆದೆ. ಐದನೇ ಚೆಂಡು ಬ್ಯಾಟಿಗೆ ಸಿಗದಾಗ ದ್ರಾವಿಡ್ ಬ್ಯಾಟ್ ಎತ್ತಿ ಇನ್ನೊಂದು ಕೈಯಲ್ಲಿ ತಟ್ಟಿ ಅಭಿನಂದನೆ ಹೇಳಿದರು. ಹೀಗೆ ಸುಮಾರು ಆರು ಚೆಂಡು ಎಸೆದೆ. ಅಷ್ಟರಲ್ಲಿ ಕೋಚ್ ಇರಬೇಕು. ಆಟಗಾರರನ್ನು ಇನ್ನೊಂದು ತಾಲೀಮಿಗೆ ತೊಡಗಿಸಿಕೊಳ್ಳಲು ತನ್ನ ಬಳಿಗೆ ಕರೆದರು. ಈಗ ನನ್ನ ಕೆಲಸ ಚೆಂಡು ಹೆಕ್ಕಿ ಕೊಡಲು ಸೀಮಿತಗೊಂಡಿತು.

ಮೊನ್ನೆ ದ್ರಾವಿಡ್ ಅಂತಾರಾಷ್ಟ್ರೀಯ ಕ್ರಿಕೆಟ್ ಗೆ ವಿದಾಯ ಹೇಳಿದಾಗ ಈ ಹಳೆಯ ನೆನಪುಗಳು ತೇಲಿ ಬಂತು. ಅದು ಹುಡುಗಾಟದ ದಿನಗಳು.

ಆ ದಿನಗಳಲ್ಲಿ ಕರ್ನಾಟಕ ಪ್ರತಿಭಾನ್ವಿತ ಆಟಗಾರರನ್ನು ಹೊಂದಿತ್ತು. ಟೆಸ್ಟ್ ಇತಿಹಾಸದಲ್ಲಿ ದಾಖಲೆ ಬರೆದ ರಾಹುಲ್ ದ್ರಾವಿಡ್ ಗೆ ಆರಂಭದಲ್ಲಿ ಅವಕಾಶ ಸಿಕ್ಕಿದ್ದು ಏಕ ದಿನ ಪಂದ್ಯದಲ್ಲಿ. ಮೊದಲ ದಿನ ನಿರಾಶೆ ಕಾದಿತ್ತು. ನಂತರ 1996ರಲ್ಲಿ ಇಂಗ್ಲೆಂಡ್ ವಿರುದ್ಧದ ತನ್ನ ಮೊದಲ ಟೆಸ್ಟ್ ನಲ್ಲಿ 95 ರನ್ ಗಳಿಸಿದ ದ್ರಾವಿಡ್ ಮತ್ತೆಂದೂ ಹಿಂತಿರುಗಿ ನೋಡಲಿಲ್ಲ. ಸುಜಿತ್ ಸೋಮಸುಂದರ್ ಹಾಗೂ ಡೇವಿಡ್ ಜಾನ್ಸನ್ ಕೂಡ ಒಂದೆರಡು ಪಂದ್ಯಗಳನ್ನು ಭಾರತಕ್ಕಾಗಿ ಆಡಿದ್ದರು.

ನನಗೆ ನೆನಪಿರುವಂತೆ ಒಂದು ಕ್ರಿಕೆಟ್ ಸರಣಿಯಲ್ಲಿ ಕರ್ನಾಟಕದ ಏಳು ಮಂದಿ ಆಟಗಾರರು ಭಾರತ ತಂಡದಲ್ಲಿ ಆಡಿದ್ದರು!. ದಿಲೀಪ್ ವೆಂಗ್ಸರ್ಕರ್ ಮತ್ತು ಮೊಹಮದ್ ಅಜರುದ್ದಿನ್ ನಂತರ ಭಾರತದ ಕ್ರಿಕೆಟ್ ನ ಬ್ಯಾಟಿಂಗ್ ವಿಭಾಗಕ್ಕೆ ಆಸರೆಯಾದವರು ದ್ರಾವಿಡ್.

ಈ ಬಗೆಯ ಸ್ಥಿರ ಚಿತ್ತದ ಆಟಗಾರರು ಭಾರತಕ್ಕೆ ಇಂದು ಅವಶ್ಯ ಬೇಕು.

ವಾಣಿಜ್ಯ ಪದವಿ ಪಡೆದು ನಾನು ರನ್ ಔಟ್ ಆಗಿದ್ದೆ. ನಂತರ ಸಾಹಿತ್ಯದಲ್ಲಿ ಎಂ.ಎ ಮತ್ತು ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ನನ್ನ ದಾರಿ ಕಂಡುಕೊಂಡೆ. ಕ್ರಿಕೆಟ್ ನಲ್ಲಿ ಒಮ್ಮೆ 'ಶೂನ್ಯ'ಕ್ಕೆ ಔಟ್ ಆದರೆ, ಮುಂದಿನ ಪಂದ್ಯದಲ್ಲಿ ಶತಕ ಹೊಡೆಯುವ ಅವಕಾಶವಿದೆ. ಕ್ರಿಕೆಟ್ ನನಗೆ ಇದನ್ನೇ ಕಲಿಸಿದೆ.

**■ ವೈ.ಅವನೀಂದ್ರನಾಥ್ ರಾವ್**

# ಮಾಸದ ಪುಟ್ಟ ಹೆಜ್ಜೆಗಳ ನೂರರ ನೆನಪು



ಇಪ್ಪತ್ತನೆಯ ಶತಮಾನದ ಆದಿ ಭಾಗ. ಹೊಸ ಕನ್ನಡ ನವೋದಯ ಸಾಹಿತ್ಯದ ಪರ್ವಕಾಲ. ಸ್ವಾತಂತ್ರ್ಯ ಚಳವಳಿಯ ಕಾವು, ಸಮಾಜ ಸುಧಾರಣೆಯ ಹುರುಪು, ಆಧುನಿಕ ವಿಚಾರಗಳ ಸೆಳೆತ – ಎಲ್ಲವನ್ನೂ ತನ್ನಲ್ಲಿ ಹುದುಗಿಸಿಕೊಂಡು ಸಾಹಿತ್ಯ ಕೃಷಿಗೆ ತೊಡಗಿದ ಎಳೆಯ ಜೀವವೊಂದು ಬೆಳೆದ ಫಸಲು ಸ್ವಲ್ಪವೇ ಆದರೂ, ಸತ್ವದಲ್ಲಿ ಗಟ್ಟಿಯಾಗಿತ್ತು.

ಈ ಕೃಷಿಕಳು ಮತ್ತಾರು ಅಲ್ಲ. ಅವರೇ ಕೊಡಗಿನ ಗೌರಮ್ಮ. ಅವರ ಸಾಹಿತ್ಯದ ಚಿಗುರು ವೃಕ್ಷವಾಗುವ ಮೊದಲೇ, ಅದು ಕಂಬನಿಯ ಕಡಲ ಪಾಲಾಗಿತ್ತು. ಅಂದು ಅವರು ಮೂಡಿಸಿದ ಹೆಜ್ಜೆ ಗುರುತುಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾಸದಂತಹವು. ಈ ಬರಹಗಾರ್ತಿ ಹುಟ್ಟಿ ಇದೇ ಮಾರ್ಚ್ 5ಕ್ಕೆ ನೂರು ವರ್ಷಗಳಾಗುತ್ತವೆ.

ಸ್ವಾತಂತ್ರ್ಯ ಚಳವಳಿಯ ಕಾವು ಗಂಡು ಹೆಣ್ಣೆನ್ನದೆ, ಆ ಕಾಲದ ಎಲ್ಲಾ ಸಂವೇದನಾಶೀಲ ಮನಸ್ಸುಗಳನ್ನು ತನ್ನ ಕಡೆಗೆ ಸೆಳೆದುಕೊಂಡಿತ್ತು. ಹೀಗಿರುವಾಗ ವಿದ್ಯಾವಂತೆ, ಸಂವೇದನಾಶೀಲೆ, ಸಹೃದಯಿ ಗೌರಮ್ಮನವರು ಈ ಸೆಳೆತದಿಂದ ಹೊರಗುಳಿಯುವುದು ಹೇಗೆ ಸಾಧ್ಯ? ಗಾಂಧಿ ಭಕ್ತೆಯಾಗಿದ್ದ ಈಕೆ ಖಾದಿ ಬಟ್ಟೆ ತೊಡುತ್ತಿದ್ದರು.

ಅವರಿದ್ದ ಮಡಿಕೇರಿಗೆ ಗಾಂಧಿ ಬರುವರೆಂದು ತಿಳಿದು ಅವರನ್ನು ತನ್ನ ಮನೆಗೆ ಕರೆಸಿಕೊಳ್ಳಬೇಕೆಂದೇ ಉಪವಾಸ ಕುಳಿತ ಛಲವಂತೆ ಈಕೆ. ವಿಷಯ ತಿಳಿದು ಆಕೆಯ ಪ್ರೀತಿಗೆ ಓಗೊಟ್ಟ ಗಾಂಧಿ ಗೌರಮ್ಮನವರ ಮನೆಗೆ ತೆರಳಿದರು. ಕಿತ್ತಲೆ ಹಣ್ಣು ಕೊಟ್ಟು ಉಪವಾಸ ಮುರಿದರು.

ಗಾಂಧಿಯವರ ಆಗಮನದಿಂದ ಆನಂದತುಂದಿಲಳಾದ ಗೌರಮ್ಮ ಮಂಗಳ ಸೂತ್ರವೊಂದನ್ನುಳಿದು ತನ್ನಲ್ಲಿದ್ದ ಒಡವೆಗಳನ್ನೆಲ್ಲಾ ಗಾಂಧಿಗೆ ಧಾರೆಯೆರೆದು ಕೊಟ್ಟರಂತೆ. ಅವರ ಬಳಿಯೇ ನಿಂತಿದ್ದ ಗೌರಮ್ಮನವರ ಪತಿಯನ್ನು ಗಾಂಧಿ, 'ಈಕೆ ಒಡವೆ ಕೊಡಬೇಕೆನ್ನುವುದು ಸ್ವಬುದ್ಧಿಯೋ ಹ್ಯಾಗೆ?' ಎಂದು ಕೇಳಿದರಂತೆ. ಆ ತರುಣ ಪತಿ, 'ಆಕೆಯ ಸ್ವಬುದ್ಧಿಯಿಂದಲೇ. ಆದರೆ ಅದಕ್ಕೆ ನನ್ನ ಒಪ್ಪಿಗೆಯೂ ಇದೆ' ಎಂದರಂತೆ.

ಈಗ ಕೊಟ್ಟ ಒಡವೆಗಳನ್ನು ಮತ್ತೆ ಮುಂದೆ ಮಾಡಿಸಿಕೊಳ್ಳುವುದಿಲ್ಲವೆಂದು ಆಕೆ ಗಾಂಧೀಜಿಗೆ ಹೇಳಿದರಂತೆ. ಈ ಪ್ರಸಂಗವನ್ನು ಗಾಂಧಿ ತಮ್ಮ ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ. ಆಗ ಗೌರಮ್ಮನವರಿಗೆ 21 ವರ್ಷ ವಯಸ್ಸು. ಅವರ ಬರವಣಿಗೆಯ ಹಿಂದಿನ ಪ್ರೇರಣೆ, ಆಸಕ್ತಿ ಮತ್ತು ಒಳನೋಟಗಳಿಗೆ ಈ ಪ್ರಸಂಗ ಒಂದು ಕ್ಷಕಿರಣ ಬೀರುತ್ತದೆ.

ಬ್ರಿಟಿಷರ ಆಳ್ವಿಕೆಯ ಕಾರಣದಿಂದಾಗಿ ಕೆಲವು ವಿಷಯಗಳಲ್ಲಿ ಆಧುನಿಕತೆಯ ಸ್ಪರ್ಶವು ಇತರ ಭಾಗಗಳಿಗಿಂತ ಹೆಚ್ಚಾಗಿ ಕೊಡಗಿನ ನೆಲದಲ್ಲಿ ಆಶ್ಚರ್ಯಕರವಾಗಿ ಕಾಣಿಸಿತು. 1912ರ ಮಾರ್ಚ್ 5ರಂದು ಜನಿಸಿದ ಗೌರಮ್ಮ ಮಡಿಕೇರಿಯಲ್ಲಿ ಕಾನ್ವೆಂಟ್‌ನಲ್ಲಿ ಎಸ್.ಎಸ್.ಎಲ್.ಸಿ.ಯವರೆಗೆ ಓದಿದ್ದರು. ಆಧುನಿಕ ಮನೋಭಾವದ ಗೌರಮ್ಮನವರು ಈಜುತ್ತಿದ್ದರು ಮತ್ತು ಟೆನ್ನಿಸ್ ಆಡುತ್ತಿದ್ದರು. ಅವರಿಗೆ ಆ ಕಾಲದ ಹಲವಾರು ಹಿರಿಯ ಕಿರಿಯ ಸಾಹಿತಿಗಳೊಂದಿಗೆ ಒಡನಾಟವಿತ್ತು. ಹಿಂದಿ, ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆಯುತ್ತಿದ್ದ ಪದ್ಮಾವತಿ ರಸ್ತೋಗಿ, ಸಾಮಾಜಿಕ ಕಾರ್ಯಕರ್ತೆ ಹಾಗೂ ಲೇಖಕಿ ಆರ್. ಕಲ್ಯಾಣಮ್ಮ, ಮಾಸ್ತಿ, ಬೇಂದ್ರೆ, ಶಿವರಾಮಕಾರಂತರ ಪರಿಚಯ ಈಕೆಗಿತ್ತು.

ಭಾರತಿಸುತ, ಮುಳಿಯ ತಿಮ್ಮಪ್ಪಯ್ಯ ಹಾಗೂ ದಬಾ ಕುಲಕರ್ಣಿಯವರು ಇವರ ಕೆಲವು ಕತೆಗಳನ್ನು ಮೆಚ್ಚಿದ್ದರು. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಲಯದ ಚರ್ಚೆಗಳೊಂದಿಗೆ ಈಕೆ ಹೊಂದಿದ್ದ ಸಂಪರ್ಕ ಅವರ ಬರವಣಿಗೆಗೆ ಹೆಚ್ಚು ಕಸುವನ್ನು ತುಂಬಿತು. ದೂರದ ಜಮಖಂಡಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಮಡಿಕೇರಿಯಲ್ಲಿ ನಡೆದ ಐತಿಹಾಸಿಕ ಸಾಹಿತ್ಯ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಮಹಿಳೆ ಈಕೆ.

ಚಾರಿತ್ರಿಕವಾಗಿ ಮತ್ತು ವ್ಯಕ್ತಿಗತ ಪ್ರತಿಭೆಯಿಂದಾಗಿ ಕನ್ನಡದ ಕಥಾಸಾಹಿತ್ಯದಲ್ಲಿ ಪ್ರಮುಖ ಸ್ಥಾನ ಪಡೆಯಬಲ್ಲ ಅರ್ಹ ಲೇಖಕಿ ಕೊಡಗಿನ ಗೌರಮ್ಮ. ಅವರು ಬರೆಯತೊಡಗಿದಾಗ ಆಗಿನ್ನು ಸಣ್ಣ ಕಥೆಗಳ ಆರಂಭದ ಕಾಲ. ಕಲಿತ, ವಿದ್ಯಾವಂತೆಯಾದ, ಎಳೆಯ ವಯಸ್ಸಿನ ಗೌರಮ್ಮ ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಸಣ್ಣ ಕಥೆಗಳ ರೂಪವನ್ನು ಆರಿಸಿಕೊಂಡರು. ಅವರ ಕಥೆಗಳ ಉಸಿರೆಂದರೆ, ಅವರ ಸುತ್ತಲಿನ ಸಮಾಜದ, ಅವರ ಅನುಭವಕ್ಕೆ ಹತ್ತಿರವಾದ ಜಾತಿಯ ತರುಣ – ತರುಣಿಯರ ಮುಗ್ಧ ಪ್ರೇಮ, ವಿವಾಹದ ಹಲವಾರು ಕನಸುಗಳು, ಪ್ರೇಮದ ಹೆಸರಿನಲ್ಲಿ ಎದುರಿಸಬೇಕಾದ ನಿರಾಸೆ ಹಾಗೂ ಮಾನಭಂಗಗಳು, ಮಧ್ಯಮವರ್ಗದ, ವಿಶೇಷವಾಗಿ ಬ್ರಾಹ್ಮಣ ತರುಣಿಯರ ವಿವಾಹ ಸಂಸ್ಥೆಗೆ ಸಂಬಂಧಪಟ್ಟ ಹತ್ತು ಹಲವಾರು ಮುಖಗಳು ಮತ್ತು ಸುಖದ ಅನುಭವಗಳು – ಇವುಗಳ ಸುತ್ತ ಹರಡಿಕೊಂಡಿವೆ.

ಈ ಎಲ್ಲ ಕಥೆಗಳಲ್ಲೂ ಒಂದು ರೀತಿಯ ಸ್ತ್ರೀ ಪರವಾದ ವೈಚಾರಿಕ ನೆಲೆಗಟ್ಟಿದೆ. ಈ ಕಥೆಗಳು ಎತ್ತುವ ಸಮಸ್ಯೆಗಳು ಮತ್ತು ಪ್ರಶ್ನೆಗಳು ಹೊಸದಲ್ಲವಾದರೂ ಗೌರಮ್ಮ ಅನ್ವೇಷಿಸಿಕೊಂಡ ಕಲಾತ್ಮಕ ರೂಪಗಳಿಂದಾಗಿ ಇವು ವಿಶಿಷ್ಟ ಒಳನೋಟವನ್ನು ತೋರುತ್ತವೆ. ಒಣ ಭಾಷಣವಾಗುವುದಿಲ್ಲ.

ಗೌರಮ್ಮನವರು ರಚಿಸಿರುವ ಬಹುಪಾಲು ಕಥೆಗಳು ಪತ್ರಗಳ ರೂಪದಲ್ಲಿವೆ. ಇಲ್ಲವೆ, ಕೆಲವು ಪತ್ರಗಳು ಕಥೆಯ ಒಡಲಲ್ಲಿ ತೂರಿಕೊಂಡು ಬಂದಿವೆ. ಅಕ್ಷರ ಸಂಸ್ಕೃತಿಗೆ ಹೊಸದಾಗಿ ತಮ್ಮನ್ನು ತೆರೆದುಕೊಳ್ಳುತ್ತಿದ್ದ ಬಹುಪಾಲು ಸ್ತ್ರೀ ಪುರುಷರು ಈ ತಲೆಮಾರಿನವರಾದ್ದರಿಂದ ಪತ್ರಗಳ ರಚನೆ ಅವರ ಭಾವನಾತ್ಮಕ ಸಂಬಂಧಗಳಿಗೆ ಉತ್ತಮ ಸಂವಹನವಾಗಿದ್ದಂತೆ ಕಂಡುಬರುತ್ತದೆ.

ಅದು ಪ್ರೇಮಪತ್ರ ಅಥವಾ ಆತ್ಮ ನಿವೇದನೆಯೇ ಇರಲಿ ಅಥವಾ ಆತ್ಮಹತ್ಯೆಯ ಟಿಪ್ಪಣಿಯೇ ಆಗಿರಲಿ ಎಲ್ಲವೂ ಪತ್ರಗಳ ಒಕ್ಕಣೆಯಲ್ಲಿ ಚಿತ್ರಿತವಾಗಿವೆ. ವಿದ್ಯಾವಂತ ಯುವಕ ಯುವತಿಯರಿಂದ ಹಿಡಿದು ವೇಶ್ಯೆ ರಾಜಮ್ಮನವರೆಗೂ ಎಲ್ಲರೂ ಪತ್ರರಚನೆಯನ್ನೇ ತಮ್ಮ ಭಾವನೆಗಳ ಮಾಧ್ಯಮವನ್ನಾಗಿ, ನಿವೇದನೆಗೆ ವಾಹಕವನ್ನಾಗಿ ಮಾಡಿಕೊಂಡಿದ್ದಾರೆ.

ಲಿಂಗ ಅಸಮಾನತೆಯನ್ನು ಹೆಚ್ಚು ನಿಖರವಾಗಿ ಮತ್ತು ಕಲಾತ್ಮಕವಾಗಿ ಅಭಿವ್ಯಕ್ತಿಸಿದ ಲೇಖಕಿಯರಲ್ಲಿ ಗೌರಮ್ಮ ವಿಶಿಷ್ಟ ಸ್ಥಾನ ಪಡೆಯುತ್ತಾರೆ. ಗೌರಮ್ಮನವರ ಮೊಟ್ಟ ಮೊದಲ ಕಥೆ 'ಪುನರ್ವಿವಾಹ'ದಲ್ಲಿ ವಿಧುರನೊಬ್ಬ ಮಡದಿ ಸತ್ತು ಆರು ತಿಂಗಳಾಗಿರದಿದ್ದರೂ ತಾನು ಮೋಹಿಸಿದ ಹುಡುಗಿಯನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಆದರೆ ಆ ಹುಡುಗಿ ವಿಧವೆಯೆಂಬ ನಿಜ ಸ್ಥಿತಿ ಅರಿವಾದೊಡನೆ ಅವಳನ್ನು ಮದುವೆಯಾಗಲು ತಿರಸ್ಕರಿಸುತ್ತಾನೆ. ಗೌರಮ್ಮನ ಮೊದಲ ಪ್ರಯತ್ನವೇ ಇದಾದರೂ ಈ ಕತೆಯಲ್ಲಿ ಚಿತ್ರಿಸಲ್ಪಟ್ಟ ಬಾಲೆ 'ರಾಜಿ' ತುಂಬಾ ಗಟ್ಟಿಪಾತ್ರವಾಗಿ ಮೂಡಿಬಂದಿದೆ.

ಗೌರಮ್ಮನವರ ಹೆಣ್ಣಿನ ಸೌಂದರ್ಯದ ಪರಿಕಲ್ಪನೆ ಕುತೂಹಲಕಾರಿಯಾದುದು, ಹಾಗೆಯೇ ವಿಶಿಷ್ಟವಾದುದು ಕೂಡ. ಇವರ ಕತೆಗಳಲ್ಲಿ ಬರುವ ಬಹುಪಾಲು ಸ್ತ್ರೀ ಪಾತ್ರಗಳು ಸುಂದರಿಯರಲ್ಲ. ಅಂದರೆ ಸಾಂಪ್ರದಾಯಿಕವಾದ ಸ್ತ್ರೀ ಸೌಂದರ್ಯ ವರ್ಣನೆಗಳಿಂದ ಕಂಗೊಳಿಸುವುದಿಲ್ಲ. ದೈಹಿಕ ಸೌಂದರ್ಯಕ್ಕಿಂತ ಹೆಚ್ಚಾಗಿ ಆ ಪಾತ್ರಗಳ ಹೃದಯ ಸಂಪನ್ನತೆ, ಅನುಪಮವಾದ ನಡವಳಿಕೆ, ಕಲಾ ಸಂಪನ್ನತೆಗಳೇ ಮೆಚ್ಚಿನ ಅಂಶಗಳಾಗಿ ಮೂಡಿಬರುತ್ತದೆ. ಮನುಷ್ಯನ ಅಂತರಾಳದಲ್ಲಿ ಹುದುಗಿರುವ ಇಂತಹ ಮಾನವೀಯ ಅಂಶಗಳ ಕಡೆಗೆ ಹೆಚ್ಚು ಗಮನ ಕೊಡುವುದು ಕಥೆಯ ವೈಚಾರಿಕತೆಯ ನಿಲುವೂ ಆಗುತ್ತದೆ. 'ವಾಣಿಯ ಸಮಸ್ಯೆ', 'ಅವಳ ಭಾಗ್ಯ', 'ಪ್ರಾಯಶ್ಚಿತ್ತ', 'ಹೋಗಿಯೇ ಬಿಟ್ಟಿದ್ದ', 'ಯಾರು?', 'ಅದೃಷ್ಟದ ಆಟ' – ಈ ಕತೆಗಳ ಮುಖ್ಯ ಸ್ತ್ರೀ ಪಾತ್ರಗಳೆಲ್ಲಾ ಸಾಮಾನ್ಯ ಹೆಂಗಸರು; ಇಲ್ಲವೆ 'ಇದ್ದಿಲಿನ ಮೈಬಣ್ಣದ, ಚಪ್ಪಟೆ ಮೂಗಿನ' 'ರಮಣೀಯರು'. 'ಅವಳ ಭಾಗ್ಯ' ಕತೆಯಲ್ಲಿ ಪಾತ್ರವೊಂದು ಹೇಳುವ ಮಾತುಗಳು ಒಟ್ಟು ಕತೆಗಾರ್ತಿಯ ಜೀವನ ದೃಷ್ಟಿಯನ್ನೇ ಬಿಚ್ಚಿಡುತ್ತದೆ: ಅದು ಪತಿಯಿಂದ ಪರಿತ್ಯಕ್ತೆಯಾದ ಹುಡುಗಿಯೊಬ್ಬಳು ಅಳುತ್ತಾ ಕೂರದೆ, ಕಲಾವಿದೆಯಾಗಿ ಸಿನಿಮಾ ನಟಿಯಾಗಿ ಜೀವನವನ್ನು ಆಯ್ಕೆ ಮಾಡಿಕೊಳ್ಳುವಂತದ್ದು.

ಅಲ್ಲಿಂದ ಸುಮಾರು ಎಂಟು ವರ್ಷಗಳವರೆಗೆ ಅವರ ಕಥಾ ಸೃಷ್ಟಿ ನಿರಂತರವಾಗಿ ಸಾಗಿತ್ತು. ಈ ಅವಧಿಯಲ್ಲಿ ಸುಮಾರು ಇಪ್ಪತ್ತೊಂದು ಕಥೆಗಳನ್ನು ಬರೆದಿದ್ದಾರೆ. 1939ರ ಏಪ್ರಿಲ್ 13ರಂದು ಅವರ ಮನೆಗೆ ಮೂರು ಮೈಲಿಗಳ ಅಂತರದಲ್ಲಿ ಹರಿಯುತ್ತಿದ್ದ ಹಟ್ಟಿ ಹಳ್ಳಿಯಲ್ಲಿ ಈಜಲು ಹೋಗಿ ಅಲ್ಲಿ ಸುಳಿಗೆ ಸಿಕ್ಕಿ ಹೊರಬರಲಾಗದೆ ಪ್ರಾಣಬಿಟ್ಟರು.

ಹೊಸ ಬದುಕಿನ ಕಾಳಜಿ ಮತ್ತು ಸದಭಿರುಚಿಯ ದ್ಯೋತಕವಾಗಿದ್ದ ಗೌರಮ್ಮ ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ, ಮಾನವೀಯ ವಿವರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುವ ಅಪಾರ ಜೀವನ ಪ್ರೀತಿಯ ಕತೆಗಾರ್ತಿಯಾಗಿದ್ದಾರೆ.

ಅವರ ಮರಣದ ಹಿಂದಿನ ದಿನ ಬರೆದ ಕಥೆಗಳು 'ಮುನ್ನಾ ದಿನ' ಮತ್ತು 'ಹೋಗಿಯೇ ಬಿಟ್ಟಿದ್ದ'. ವರಕವಿ ದರಾ ಬೇಂದ್ರೆಯವರು ಇವರ ಮರಣದ ನಂತರ ಪ್ರಕಟವಾದ ಇವರ 'ಕಂಬನಿ' ಮತ್ತು 'ಚಿಗುರು' ಕಥಾಸಂಕಲನಗಳಿಗೆ ಮುನ್ನುಡಿ ಬರೆದಿದ್ದಾರೆ, ಎನ್ನುವುದೇ ಗೌರಮ್ಮನವರನ್ನು ಅವರ ಸಮಕಾಲೀನರು ಎಷ್ಟು ಗಂಭೀರವಾಗಿ ಪರಿಗಣಿಸಿದ್ದರು, ಎಂಬುದಕ್ಕೆ ಸಾಕ್ಷಿ.

❑ ಎನ್. ಗಾಯತ್ರಿ, ಕೃಪೆ : ಪ್ರಜಾವಾಣಿ

# ರಣತಂಬೋರ್ ರಾಷ್ಟ್ರೀಯ ವನದ ಹುಲಿಗಳು ದಿಢೀರ್ ಮಾಯ !!!



(ಚಿತ್ರದಲ್ಲಿರುವವರು – ಸುಷ್ಮಾ ಬಿಢೆ, ನಾಗವೇಣಿ ಹೆಗಡಿ, ಜಯಾ ಆಚಾರ್ಯ, ರಾಧಿಕಾ ರಾವ್, ರೇಣುಕಾ ನಿಡಗುಂದಿ, ಸ್ವರ್ಣಲತಾ ಮೃತ್ಯುಂಜಯ, ಸುಗುಣಾ ನಾಗೇಶ್, ಯಶೋಧಾ ಬಂಟ್ವಾಳ್, ವಿಲಾಸಿನಿ ಶೆಟ್ಟಿ, ನಂದಿನಿ ಮಲ್ಯ, ಮಾಲತಿರಾಜ್, ಸುಕನ್ಯಾ ಶ್ಯಾಮಸುಂದರ್, ಆಶಾ ಕಾರಿಯಪ್ಪ, ಅರುಣಾ, ಎಸ್.ಸಿ. ಹೇಮಲತ, ಡಾ. ಅಹಲ್ಯಾಚಿಂತಾಮಣಿ, ರಂಗಮಣಿರಾವ್, ನಯನ ಶೆಟ್ಟಿ, ಉಷಾ ಭರತಾದ್ರಿ, ಸರೋಜ ಮಾಧವ, ರಾಜೇಶ್ವರಿ ಕಲ್ಲೂರ್, ಸುಮಿತ್ರಾ ರಾವ್, ಪ್ರಫುಲ್ಲ ಶೆಟ್ಟಿ)

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಒಟ್ಟು 23 ಸದಸ್ಯೆಯರು ಬರುತ್ತಿರುವ ಸುದ್ದಿ ತಿಳಿದ ರಣತಂಬೋರ್‌ನ ರಾಷ್ಟ್ರೀಯ ವನದಲ್ಲಿದ್ದ ಹುಲಿಗಳೆಲ್ಲಾ ಮಾರ್ಚ್ 4ರಂದು ಇದ್ದಕ್ಕಿದ್ದಂತೆ ನಾಪತ್ತೆಯಾಗಿ ಬಿಟ್ಟವು !! ನಿಜಾರೀ ! ಇವರೆಲ್ಲಾ ಹೊರಟಿರುವ ಸುದ್ದಿ ತಿಳಿದವರ ಬಾಯಲ್ಲಿ ಒಂದೇ ಮಾತು. "ಅಯ್ಯೋ, ನೀವಿಷ್ಟು ಮಹಿಳೆಯರು ಹೋದ್ರೆ ಪಾಪ ಹುಲಿಗಳು ಹೆದರಿ ಮಾಯವಾಗೋದು ಖಂಡಿತಾ". ಈ ಮಾತು ಅಕ್ಷರಶಃ ನಿಜವಾಗಿಯೇ ಬಿಡೋದೇ!! ಕ್ಷೀಣಿಸುತ್ತಿರುವ ಹುಲಿಗಳ ಸಂಖ್ಯೆಯನ್ನು ಸಂರಕ್ಷಿಸುವ ಸಲುವಾಗಿರುವ ಪಾರ್ಕ್‌ಗಳಲ್ಲಿ ಒಂದಾದ ರಣತಂಬೋರ್‌ನಲ್ಲಿರುವ ಹುಲಿಗಳನ್ನು ನೋಡಲು ಅತ್ಯುತ್ಸಾಹದಿಂದ ಲೇಡಿಸ್ ಅಸೋಸಿಯೇಶನ್‌ನಿಂದ ಮೊದಲ ಬಾರಿಗೆ ಅತ್ಯಧಿಕ ಸಂಖ್ಯೆಯಲ್ಲಿ (23 ಮಹಿಳೆಯರು) ಭೇಟಿ ನೀಡಿದೆವು.

ಮೊದಲಿಗೆ ಮಾರ್ಚ್ 3ರಂದು ರಾಜಸ್ಥಾನದ ಕೋಟಾಗೆ ತಲುಪಿ ಅಲ್ಲಿಯ ಕೋಟೆ, ಪ್ರಸಿದ್ಧವಾದ ನಿಂತಿರುವ ಗಣೇಶ ಮೊದಲಾದ ಸ್ಥಳಗಳನ್ನು ವೀಕ್ಷಿಸಿ ಸವಾಯ್ ಮಾಧೋಪುರ್‌ನಲ್ಲಿ ತಂಗಿದೆವು. ರಣತಂಬೋರ್‌ನ ರಾಷ್ಟ್ರೀಯ ವನದ ಹುಲಿಗಳಿಗೆ ನಮ್ಮನ್ನು ನೋಡುವ ಅದೃಷ್ಟವಿರಲಿಲ್ಲ !!! ಬೆಳಗಿನ ಸಫಾರಿಯಲ್ಲಿ ವಿದೇಶಿಯರಿಗೆ ದರ್ಶನ ನೀಡಿದ್ದ ಹುಲಿರಾಯ ಸದ್ದಿಲ್ಲದೇ ಮಧ್ಯಾಹ್ನದ ವೇಳೆಗೆ ಎಲ್ಲೋ ಪೊದೆಯಲ್ಲಿ ಅಡಗಿ ಕುಳಿತೇ ಬಿಟ್ಟ! ಆದರೇನಂತೆ, 12ನೇ ಶತಮಾನದ ಸುಪ್ರಸಿದ್ಧ ಕೋಟೆಯ ಮೇಲಿರುವ ಗಣೇಶನ ದರ್ಶನ ಮಾಡಿ ಮನದ ಕೋರಿಕೆಯನ್ನು ಸಲ್ಲಿಸಿದೆವು. ಪುರಾತನವಾದ ಕೋಟೆಯೊಳಗಿರುವ ಗಣೇಶನ ಮಂದಿರ, ಜೈನ ಮಂದಿರ ಮೊದಲಾದವು ನಿಜಕ್ಕೂ ಅವಿಸ್ಮರಣೀಯ ಐತಿಹ್ಯಗಳು.

ಪ್ರತಿವರ್ಷ ಆಯೋಜಿಸುವ ಪ್ರವಾಸವನ್ನು ಈ ಬಾರಿ ಅಧ್ಯಕ್ಷೆ ರಂಗಮಣಿರಾವ್ ಹಾಗೂ ತಂಡದವರು ಅತ್ಯಂತ ಸುವ್ಯವಸ್ಥಿತವಾಗಿ ಎಳ್ಳಷ್ಟೂ ತೊಂದರೆಯಾಗದಂತೆ ಆಯೋಜಿಸಿದ್ದರು. ಸುಗುಣಾ ನಾಗೇಶ್ ಅವರ ಪತಿ ಬೈಕೆರೆ ನಾಗೇಶ್ ಅವರು ವಿಶೇಷ ಕಾಳಜಿಯಿಂದ ಪ್ರವಾಸಕ್ಕೆ ಹೊರಡಲು ಬೇಕಾದ ರೈಲು ಪ್ರಯಾಣದ ಟಿಕೆಟ್ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದರು. ರಂಗಮಣಿರಾವ್ ಅವರ ಪತಿ ಶ್ರೀ ಕೆ.ಎನ್. ರಾವ್ ಅವರು ನಾವೆಲ್ಲಾ ಬೆಳಗಿನ ಜಾವ ಕೋಟಾದಲ್ಲಿ ಇಳಿದ ಗಳಿಗೆಯಿಂದ ಹಿಡಿದು ಸವಾಯ್ ಮಾಧೋಪುರದಲ್ಲಿ ರಾತ್ರಿ 11 ಗಂಟೆಗೆ ದೆಹಲಿಯ ರೈಲು ಹತ್ತುವವರೆಗೂ ಎಲ್ಲ ರೀತಿಯ ವಿಶೇಷ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದು ನಿಜಕ್ಕೂ ಅಭಿನಂದನೀಯ. ಅವರಿಗೆ ಎಲ್ಲರೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತಾ ಎರಡು ದಿನಗಳ ಪ್ರವಾಸದ ಹಿತಕರ ಆನಂದವನ್ನು ಮನಸ್ಸಿನಲ್ಲಿ ಹೊತ್ತು ತಂತಮ್ಮ ಮನೆಯಲ್ಲಿರುವ 'ಹುಲಿ' (ಪತಿ)ರಾಯ (ಒಮ್ಮೊಮ್ಮೆ 'ಇಲಿ?') ನನ್ನು ಸೇರಿದೆವು.

■ **ಉಷಾ ಭರತಾದ್ರಿ**

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ವತಿಯಿಂದ ಮಾರ್ಚ್ 10ರಂದು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕೇಂದ್ರ ಸಾಮಾಜಿಕ ಕ್ಷೇಮಾಭಿವೃದ್ಧಿ ಮಂಡಳಿಯ ಅಧ್ಯಕ್ಷ ಹಾಗೂ ಮಾಜಿ ರಾಜ್ಯಸಭಾ ಸದಸ್ಯೆ ಶ್ರೀಮತಿ ಪ್ರೇಮಾ ಕಾರಿಯಪ್ಪ ಅವರು ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅಸೋಸಿಯೇಶನ್‌ನ ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಸುಷ್ಮ ಬಿಢೆ ಅವರು ಪ್ರೇಮಾ ಕಾರಿಯಪ್ಪ ಅವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಚಯಿಸಿದರು.

ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು. ಇತ್ತೀಚೆಗೆ ಜನಗಣತಿಯ ಪ್ರಕಾರ ದೇಶದಾದ್ಯಂತ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿರುವ ಅಪಾಯವನ್ನು ತಿಳಿಸುತ್ತಾ ಇದನ್ನು ತಡೆಗಟ್ಟುವಲ್ಲಿ ಜಾಗೃತಿ ಮೂಡಿಸುತ್ತಿರುವ ತಮ್ಮ ಸಂಸ್ಥೆಯ ಕಾರ್ಯ ವೈಖರಿಗಳನ್ನು ಪ್ರೇಮಾ ಕಾರಿಯಪ್ಪ ವಿವರಿಸಿದರು. ತಾಯಂದಿರೇ ಈ ಲಿಂಗ ಬೇಧವನ್ನು ಮಾಡುತ್ತಿರುವುದು ನಿಜಕ್ಕೂ ದೌರ್ಭಾಗ್ಯದ ಸಂಗತಿ ಎಂದ ಅವರು ಮಹಿಳೆಯರು ಇಂದಿನ ದಿನಗಳಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುತ್ತಿರುವುದು ಸಂತಸ ಹಾಗೂ ಹೆಮ್ಮೆಯ ಸಂಗತಿ ಎಂದರು. ಸರ್ಕಾರ ಜಾರಿಗೆ ತಂದಿರುವ ಮಹಿಳಾ ಮೀಸಲಾತಿಯಿಂದಾಗಿ ಇಂದು ಗ್ರಾಮೀಣ ಮಹಿಳೆಯರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಬಲವಾಗುತ್ತಿರುವುದನ್ನು ಅಂಕಿ ಅಂಶಗಳ ಮೂಲಕ ತಿಳಿಸಿದರು. ದೇಶದಾದ್ಯಂತ ತಿರುಗಾಡುತ್ತಾ ತಮ್ಮ ಉತ್ತಮ ಸೇವೆ ಸಲ್ಲಿಸುತ್ತಿರುವ ಪ್ರೇಮಾ ಕಾರಿಯಪ್ಪ ಅವರು ದೆಹಲಿಯ ಕನ್ನಡ ಮಹಿಳೆಯರು NGO ಸ್ಥಾಪಿಸಿಕೊಂಡು ಅಶಕ್ತ ಮಹಿಳೆಯರಿಗೆ ನೆರವಾಗಲು ಮುಂದಾಗಬೇಕು ಎಂದು ಕರೆ ನೀಡಿದರು. ಈ ಕುರಿತಾದ ಸದಸ್ಯೆಯರ ಪ್ರಶ್ನೆಗಳಿಗೆ ಮಾಹಿತಿ ನೀಡಿದರಲ್ಲದೇ ಇದಕ್ಕೆ ಸಾಧ್ಯವಾದ ನೆರವನ್ನು ಒದಗಿಸುವ ಭರವಸೆಯ ಪ್ರೋತ್ಸಾಹ ನೀಡಿದರು. ಅಸೋಸಿಯೇಶನ್ ಖಜಾಂಚಿ ಶ್ರೀಮತಿ ರಾಧಾ ಕೌಜಲಗಿ ವಂದನಾರ್ಪಣೆ ಸಲ್ಲಿಸಿದರು.

■ **ಹೇಮಲತ ಗುಡ್ಡೇಗೌಡ**



## ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ (ರಿ)ನ ನೂತನ ಕಾರ್ಯಕಾರಿ ಸಮಿತಿ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ (ರಿ) ನ 2012–14 ರ ನೂತನ ಕಾರ್ಯಕಾರಿ ಸಮಿತಿಯ ಆಯ್ಕೆ ನಡೆದಿದೆ.

ಅಧ್ಯಕ್ಷೆ : ಶ್ರೀಮತಿ ಸ್ವರ್ಣಲತಾ ಮೃತ್ಯುಂಜಯ, ಉಪಾಧ್ಯಕ್ಷೆ : ಶ್ರೀಮತಿ ಆಶಾ ಕಾರಿಯಪ್ಪ, ಕಾರ್ಯದರ್ಶಿ : ಶ್ರೀಮತಿ ಸುಗುಣಾ ನಾಗೇಶ್, ಜಂಟಿ ಕಾರ್ಯದರ್ಶಿ : ಶ್ರೀಮತಿ ನಾಗವೇಣಿ ಹೆಗಡಿ, ಖಜಾಂಚಿ : ಶ್ರೀಮತಿ ರಾಜೇಶ್ವರಿ ಕಲ್ಲೂರ್

ಸದಸ್ಯರು : ಶ್ರೀಮತಿ ವಿಲಾಸಿನಿ ಶೆಟ್ಟಿ, ಶ್ರೀಮತಿ ಉಷಾ ಭರತಾದ್ರಿ, ಶ್ರೀಮತಿ ಸುಕನ್ಯ ಶ್ಯಾಂಸುಂದರ್, ಶ್ರೀಮತಿ ಆಶಾ ಶ್ಯಾಂಸುಂದರ್ ಹಾಗೂ ಶ್ರೀಮತಿ ಡೀನಾ ಜೋಯ್ಸ್.

**ಆಯ್ಕೆಯಾದ ಹೊಸ ಸಮಿತಿಗೆ ಹಾರ್ದಿಕ ಅಭಿನಂದನೆಗಳು**

## ಜನಕಪುರಿ ಮಹಿಳಾ ಮಂಡಳಿಯಿಂದ ಪಿಕ್‌ನಿಕ್

ಮಾರ್ಚ್ 18, 2012ರಂದು ಜನಕಪುರಿ ಮಹಿಳಾ ಮಂಡಳಿಯು ನೆಹರೂ ಪಾರ್ಕ್‌ಗೆ ವನವಿಹಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಪ್ರೇರಣ ವೆಂಕಟೇಶ್, ಡಾ। ರೂಪಶ್ರೀ, ರಾಜೇಶ್ವರಿಪ್ರಕಾಶ್, ವಂದನಾ ಶೆಟ್ಟಿ, ಸವಿತ ಇನಾಂದಾರ್ ಮೊದಲಾದವರು ಮಹಿಳಾ ಮಂಡಳಿಯ ಕಾರ್ಯದರ್ಶಿ ಮೋಹಿನಿ ರೈ ಅವರೊಡಗೂಡಿ ವನವಿಹಾರವನ್ನು ಅಚ್ಚುಕಟ್ಟಾಗಿ ಆಯೋಜಿಸಿದ್ದರು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಬಿ.ಎಸ್. ರಾಮಕೃಷ್ಣ ದಂಪತಿಗಳು ಬಹುಮಾನ ವಿತರಣೆ ಮಾಡಿದರು.

■ ಮೋಹಿನಿ ರೈ




# Saujanya Printing Press

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

**ಮೈಸೂರಿನ ಆರ್. ನಾಗರತ್ನಮ್ಮನವರೆಂದರೆ ಥಟ್ಟನೆ ನೆನಪಾಗುವುದು ಅವರ ಭೀಮನ ಪಾತ್ರ. ವೃತ್ತಿ ರಂಗಭೂಮಿಯಲ್ಲಿ ಅವರದು ಎಲ್ಲ ಅರ್ಥಗಳಿಂದಲೂ ಸಾಹಸ ಭೀಮ ವಿಜಯವೇ! ಪದ್ಮಶ್ರೀ ಪ್ರಶಸ್ತಿ ಬಂದಿರುವ ಸಂತಸದ ಕ್ಷಣದಲ್ಲಿ ಅವರ ನೆನಪಿನ ಬುತ್ತಿ ಇದು.**

# ರತ್ನನ್ ಪರ್‌ಪಂಚ !



1938ನೇ ಇಸವಿ. ಹೆಣ್ಣು ಮಕ್ಕಳನ್ನು ಮನೆಯ ಆಚೆಗೂ ಕಳುಹಿಸದ ಕಾಲವದು. ಈ ಪುರುಷ ಪ್ರಧಾನ ವ್ಯವಸ್ಥೆ ಸ್ತ್ರೀಗೆ ಯಾಕೆ ಇಂಥ ಬಂಧನಗಳನ್ನು ಹೇರಿದೆ ಎಂದು ಕೇಳಲೂ ಬಾರದ ಮನಃಸ್ಥಿತಿ. ಇಂಥ ಸಮಯದಲ್ಲಿ ಹೆಣ್ಣು ಮಗಳೊಬ್ಬಳು 'ನಾನು ರಂಗಭೂಮಿಗೆ ಹೋಗುತ್ತೇನೆ' ಅಂದರೆ ಬಿಟ್ಟಾರೆಯೇ?

ರಂಗಭೂಮಿ ಆವತ್ತು ಗಂಡಸರ ಸೊತ್ತು. ನಾಟಕದಲ್ಲಿ ಪಾರ್ಟು ಮಾಡುತ್ತಿದ್ದ ಕೆಲವೇ ಕೆಲವು ಹೆಂಗಸರಿಗೂ ಕೆಟ್ಟ ಶಬ್ದಗಳಿಂದ ಕರೆಯುತ್ತಿದ್ದರು. 'ಅಂಥ ಹೀನಪಟ್ಟ ಕಟ್ಟಿಕೊಳ್ಳುವುದಕ್ಕಾಗಿ ಅಲ್ಲಿಗೆ ಹೋಗಬೇಕೇ?' ಎಂದೂ ಅನಿಸಿದುಂಟು. ಅದರಲ್ಲೂ ಪಕ್ಕಾ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದ ನನಗೆ ಬಣ್ಣದ ಬದುಕಿನತ್ತ ಹೋಗುತ್ತೇನೆಂದು ಹೇಳುವುದೂ ಭಯಂಕರ ಕಷ್ಟದ್ದೇ. ಆದರೂ 12ನೇ ವಯಸ್ಸಿಗೆ ನಾಟಕದಲ್ಲಿ ಪಾರ್ಟು ಮಾಡುತ್ತೇನೆಂದು ಹೇಳಿದೆ. ಈ ವಿಷಯದಲ್ಲಿ ಮನೆಯಲ್ಲಷ್ಟು ಸಂಚಲನ ಆಯಿತು. ಅಪ್ಪನ ಗೆಳೆಯರೇ ಪಾತ್ರ ಮಾಡಲು ಕರೆದದ್ದರಿಂದ ಒಪ್ಪಿಕೊಳ್ಳಬೇಕಾಗಿಯೂ ಬಂತು. 'ಸಂಸಾರ ನೌಕೆ' ನಾಟಕದ ಮೂಲಕ ರಂಗಪ್ರವೇಶ ಮಾಡಿದೆ. . .

ಹೀಗೆ ತಮ್ಮ ನೆನಪಿನ ಪುಟಗಳನ್ನು ತೆರೆದುಕೊಂಡು ಕುಳಿತರು, 'ಪದ್ಮಶ್ರೀ' ಪ್ರಶಸ್ತಿಗೆ ಭಾಜನರಾಗಿರುವ ನಟ ಭಯಂಕರಿ ಆರ್. ನಾಗರತ್ನಮ್ಮ.

ಆರ್. ನಾಗರತ್ನಮ್ಮನವರು ಹುಟ್ಟಿದ್ದು 1926 ಜೂನ್ 21ರಂದು. ಇವರು ಮೈಸೂರಿನ ರಾಮಭಟ್ಟ–ರುಕ್ಮಿಣಿಯಮ್ಮ ದಂಪತಿಗಳ ಪುತ್ರಿ. ಓದಿದ್ದು ಏಳನೇ ತರಗತಿವರೆಗೆ ಮಾತ್ರ. ರಂಗಭೂಮಿಯ ಸೆಳೆತದಿಂದಾಗಿ ಶಾಲೆ ಬಿಟ್ಟು ಚಾಮುಂಡೇಶ್ವರಿ ಕಂಪನಿಗೆ ಸೇರಿದರು. ಇಲ್ಲಿಂದ ಶುರುವಾದ ರಂಗಯಾತ್ರೆ ಮಂಜುನಾಥ ಕೃಪಾಪೋಷಿತ ನಾಟಕ ಸಂಸ್ಥೆ, ಗುಬ್ಬಿ ವೀರಣ್ಣ ಸಂಸ್ಥೆ, ಹಿರಣ್ಣಯ್ಯ ಮಿತ್ರ ಮಂಡಳಿ, ಎಂ.ವಿ. ಸುಬ್ಬಯ್ಯ ನಾಯ್ಡು ಕಂಪೆನಿ ಹೀಗೆ ನಿರಂತರ ಆರು ದಶಕಗಳ ಕಾಲ ದಣಿವರಿಯದ ರಂಗಸೇವೆ.

ಪಾತ್ರವನ್ನಷ್ಟೇ ಮಾಡಿಕೊಂಡಿದ್ದರೆ ನಾಗರತ್ನಮ್ಮನವರು ಇವತ್ತು ವಿಶೇಷವಾಗೇನೂ ಕಾಣಿಸುತ್ತಿರಲಿಲ್ಲ. ಪುರುಷ ವರ್ಗದ ಕಪಿಮುಷ್ಟಿಯಿಂದ ರಂಗಭೂಮಿಯನ್ನು ಬಿಡಿಸಿಕೊಂಡರು, ಅದನ್ನು ಹೆಂಗಳೆಯರ ಕಡೆಗೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. 1958ರಲ್ಲಿ 'ಶ್ರೀ ಸ್ತ್ರೀ ನಾಟಕ ಮಂಡಳಿ'ಯನ್ನು ಪ್ರಾರಂಭಿಸಿ, ಎಲ್ಲಾ ಪಾತ್ರಗಳನ್ನು ಹೆಂಗಸರಿಂದಲೇ ಮಾಡಿಸಿ, ಅದರಲ್ಲಿ ಯಶಸ್ಸನ್ನೂ ಕಂಡ ಮೊದಲ ಮಹಿಳೆ ನಾಗರತ್ನಮ್ಮನವರು.

ಸ್ತ್ರೀ ನಾಟಕ ಮಂಡಳಿ ಪ್ರಾರಂಭಿಸಿದಾಗ ಇವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಇದರ ಬಗ್ಗೆ ಅವರೇ ನೆನಪು ಮಾಡಿಕೊಳ್ಳುವ ಘಟನೆಗಳು ಹೀಗಿವೆ. 'ಸ್ತ್ರೀ ನಾಟಕ ಮಂಡಳಿ ಕಟ್ಟಬೇಕು ಅನ್ನುವುದು ನನ್ನ ಕನಸಾಗಿರಲಿಲ್ಲ. ಇದು ಆಕಸ್ಮಿಕವಾಗಿ ನನ್ನ ಕೊರಳಿಗೆ ಬಿದ್ದ ಭಾರ. ಮೈಸೂರಿನಲ್ಲಿ ಅಂಬುಜಮ್ಮ ಅಂತ ಇದ್ದರು. ಅವರಿಗೆ ರಂಗಭೂಮಿಯ ಕಲಾವಿದರೊಂದಿಗೆ ನಂಟಿತ್ತು. ಆವತ್ತು ಬರೀ ಒಂದೇ ರೀತಿಯ ನಾಟಕಗಳಿದ್ದವು. ಏನಾದರೂ ಒಂದು ಹೊಸತನ್ನು ಕೊಡುವ ಬಯಕೆ ಆಕೆಯಲ್ಲಿ ಮೂಡಿತ್ತು. ಪುರುಷ ಪಾತ್ರಗಳನ್ನು ಹೆಂಗಸರೇ ಏಕೆ ಮಾಡಬಾರದೆಂದು ಅನಿಸಿ, ಮಹಿಳೆಯರನ್ನು ಸೇರಿಸಿ ದೊರೆಸ್ವಾಮಿ ಅನ್ನುವವರ ಸಹಾಯ ಪಡೆದು ಇಂಥದೊಂದು ತೀರ್ಮಾನಕ್ಕೆ ಬಂದಿದ್ದಳು. ಆಗ ನಾನು ದೊಡ್ಡ ದೊಡ್ಡ ಕಂಪೆನಿಗಳಲ್ಲಿ ಪಾತ್ರ ಮಾಡುತ್ತಿದ್ದೆ. ತುಂಬಾ ಸುಂದರವಾಗಿಯೂ ಇದ್ದ ಕಾರಣ ಬಹುಬೇಡಿಕೆಯ ನಾಯಕಿಯಾಗಿದ್ದೆ. ಕಲಾವಿದ ಎಂ.ಆರ್. ಪಾರ್ಥಸಾರಥಿ ಅವರನ್ನು ಮದುವೆಯೂ ಆಗಿದ್ದೆ. ಈ ವೇಳೆಯಲ್ಲಿ ಗಂಡಸು ಪಾತ್ರ ಮಾಡೋಕೆ ನನ್ನನ್ನು ಕರೆದರು. ನನಗೂ ವಿಶೇಷ ಅನಿಸಿ ಒಪ್ಪಿಕೊಂಡೆ. ಮನೆಗೆ ಬಂದು ಇಂಥದ್ದೊಂದು ಪಾತ್ರ ಮಾಡುತ್ತಿದ್ದೇನೆ ಅಂದಾಗ ಎಲ್ಲರೂ ಸಾಕಷ್ಟು ಬೈದರು. 'ಬೇಡಿಕೆಯಲ್ಲಿರುವಾಗ ಏನಿದು ಹುಚ್ಚಾಟ?' ಅಂದರು. ಮಾತು ಕೊಟ್ಟಾಗಿತ್ತು. ಹೀಗಾಗಿ ಬಿಡುವ ಪ್ರಶ್ನೆಯೇ ಇರಲಿಲ್ಲ. ಆದರೂ ಮನದಲ್ಲಿ ಸಣ್ಣದೊಂದು ಅಳುಕು ಇತ್ತು.

'ಕೃಷ್ಣ ಗಾರುಡಿಗ' ನಾಟಕವನ್ನು ತೆಗೆದುಕೊಂಡಿದ್ದರು. ಮೊದಲು ಕೃಷ್ಣನ ಪಾತ್ರ ಮಾಡು ಅಂದರು. ಆಮೇಲೆ ಅರ್ಜುನನ ರೋಲ್ ಕೊಟ್ಟರು. ಕೊನೆಗೆ ನನಗೆ ಸಿಕ್ಕಿದ್ದು ಭೀಮನ ಪಾತ್ರ! ಆಯ್ತು ಅಂತ ಮಾತು ಕಲಿಯೋಕೆ ಶುರು ಮಾಡಿದೆ. ಪ್ರಥಮ ಪ್ರದರ್ಶನ ಮಂಡ್ಯದಲ್ಲಿ. ಆಗಲೇ ಆ ಪ್ರದೇಶ ನಾಟಕಗಳಿಗೆ ಪ್ರಸಿದ್ಧಿ ಆಗಿತ್ತು. ದೊಡ್ಡ ದೊಡ್ಡ ಕಲಾವಿದರು ಅಲ್ಲಿದ್ದರು. ಇಂಥವರ ಮಧ್ಯೆ ಭೀಮನ ಪಾತ್ರ ನಿರ್ವಹಿಸೋದು ಹೇಗೆ ಎಂಬ ಚಿಂತೆ ಶುರುವಾಯಿತು. ನಾಟಕದ ದಿಗ್ಗಜರಾಗಿದ್ದ ನಾಗೇಶರಾಯರು, ಸುಬ್ಬರಾಯರೊಂದಿಗೆ ಪಾತ್ರ ಮಾಡಿದ್ದರೂ ಭೀಮನ ಪಾತ್ರಕ್ಕೆ ಧೈರ್ಯ ಸಾಲುತ್ತಿಲ್ಲ, ಹೇಗಾದರು ಮಾಡಿ ನಾಟಕ ನಿಂತು ಹೋಗಲಿ ಅಂದುಕೊಂಡೆ. ಪುಣ್ಯಕ್ಕೆ ಹಾಗೆಯೇ ಆಯ್ತು! ಯಾವುದೋ ಕಾರಣಕ್ಕೆ ನಾಟಕ ನಡೆಯಲಿಲ್ಲ. ಆದರೆ ಅಂಬುಜಮ್ಮ ಅಲ್ಲಿಗೇ ಬಿಡಲಿಲ್ಲ. ಮತ್ತೆ ಪ್ರಯತ್ನ ಮಾಡಿ ನಾಟಕ ನಡೆಯುವಂತೆ ಮಾಡಿಬಿಟ್ಟಳು. ಪ್ರದರ್ಶನ ಶುರುವಾಯಿತು! ಝಗಝಗಿಸುವ ರಂಗಮಂಟಪ. ದರ್ಬಾರು ದೃಶ್ಯದಿಂದ ನಾಟಕ ಪ್ರಾರಂಭವಾಗಬೇಕು. ಅರ್ಜುನ, ಧರ್ಮರಾಯರು, ಕೃಷ್ಣ ಎಲ್ಲಾ ಪಾತ್ರಧಾರಿಗಳೂ ಕುಳಿತಿದ್ದಾರೆ. ಮಹಿಳೆಯರೇ ಪುರುಷ ಪಾತ್ರ ಮಾಡುತ್ತಿದ್ದಾರೆಂದು ಸುದ್ದಿ ಗೊತ್ತಾಗಿದ್ದರಿಂದ ಸಾಕಷ್ಟು ರಸಿಕರೇ ನೆರೆದಿದ್ದರು. ನಾನೂ ಕೂಡಾ ಸಿಂಹಾಸನದ ಮೇಲೆ ಕೂತಿದ್ದೆ. ಮತ್ತೆ ನಡುಕ ಶುರುವಾಯಿತು. ಆಗಲೇ ಭೀಮನ ಪಾತ್ರದ ಮೂಲಕ ಕೃಷ್ಣಮೂರ್ತಿ ರಾಯರು ಫೇಮಸ್ ಆಗಿದ್ದರು.

ಅವರನ್ನು ಕಲಿಯುಗದ ಭೀಮ ಅಂತಲೇ ಕರೆಯುತ್ತಿದ್ದರು. ಅವರನ್ನು ಮೀರಿಸುವ ಪಾತ್ರ ಮಾಡಬೇಕಿತ್ತು. ಎಲ್ಲರ ಮಾತೂ ಶುರುವಾಯಿತು. ನನ್ನ ಸರದಿ, ಧೈರ್ಯ ತಂದುಕೊಂಡು ಎದ್ದೆ. ಹಾಗೆಯೇ ಒಂದು ಸಾರಿ ಮೀಸೆಯ ಮೇಲೆ ಬೆರಳಾಡಿಸಿದೆ. ಹುಚ್ಚೆದ್ದು ಚಪ್ಪಾಳೆ ತಟ್ಟಿಬಿಟ್ಟರು ಪ್ರೇಕ್ಷಕರು! ಅಲ್ಲಿಗೆ ಕೊಂಚ ಧೈರ್ಯ ಬಂತು. ಹಾಕಿದ ಶಲ್ಯವನ್ನು ಕೊಡವಿ ಮೈಕ್ ಮುಂದೆ ನಿಂತು ಮಾತು ಹೇಳೋಕೆ ಶುರು ಮಾಡಿದೆ. ಪ್ರತಿ ಮಾತಿಗೂ ಚಪ್ಪಾಳೆ! ಅಲ್ಲಿಂದ ಶುರುವಾದ ಭೀಮನ ಪಾತ್ರ ಇವತ್ತಿಗೂ ನನ್ನ ಬಿಟ್ಟಿಲ್ಲ. ಇವತ್ತಿಗೂ ನನ್ನ ಭೀಮನ ಪಾತ್ರಧಾರಿ ನಾಗರತ್ನಮ್ಮ ಅಂದೇ ಗುರುತಿಸುತ್ತಾರೆ.

ನಾಟಕ ಹೆಸರು ಮಾಡಿತು. ಪ್ರಯೋಗಕ್ಕೆಂದು ಮಾಡಿದ ನಾಟಕಕ್ಕೆ ಸಾಕಷ್ಟು ಪ್ರತಿಕ್ರಿಯೆ ಸಿಕ್ಕಿದ್ದರಿಂದ, ಅದನ್ನು ಬಿಡುವುದು ಬೇಡ ಅಂದರು ದೊರೆಸ್ವಾಮಿ. 'ನಿಮ್ಮಿಂದ ನಾಟಕ ಅಷ್ಟೊಂದು ಹೆಸರು ಮಾಡಿದ್ದು. ನೀವೇ ಮಾಲೀಕರಾಗಬೇಕು' ಎಂದರು. ಶ್ರೀ ಸ್ತ್ರೀ ನಾಟಕ ಮಂಡಳಿ, ಆರ್. ನಾಗರತ್ನಮ್ಮ ಪಾರ್ಟಿ ಅಂತ ಹೆಸರು ಬರೆಸಿಬಿಟ್ಟರು. ಅಲ್ಲಿಂದ ಒಪ್ಪಿಕೊಂಡು ಕಂಪೆನಿಯನ್ನು ನಡೆಸಿಕೊಂಡು ಬಂದಿದ್ದೇನೆ.

ಹಾಗಂತ ನಾವು ನಡೆದು ಬಂದ ಹಾದಿ ಹೂವಿನದೇನೂ ಆಗಿರಲಿಲ್ಲ. ಪುರುಷರ ಕಣ್ಣುಗಳು ಸರಿ ಇರಲಿಲ್ಲ. ನಮ್ಮ ಕಂಪನಿಯಲ್ಲಿ ಚಿನ್ನಾಮಣಿ ಅನ್ನುವ ಹಿರಿಯ ಹೆಂಗಸನ್ನು ಬಿಟ್ಟರೆ ಉಳಿದವರು ಹದಿಹರೆಯದ ಹುಡುಗಿಯರು. ಅವರನ್ನು ಕಾಯುವುದೇ ಒಂದು ದೊಡ್ಡ ಕೆಲಸವಾಗಿತ್ತು. ಬೇರೆ ಊರಲ್ಲಿ ಕ್ಯಾಂಪ್ ಹಾಕಿದರೆ ಏನೇನೋ ಸಮಸ್ಯೆಗಳು. ಪಟ್ಟಣಗಳಲ್ಲಿ ರೌಡಿಗಳ ಕಾಟ ಇರುತ್ತಿತ್ತು. ಶಿರಸಿಯಲ್ಲಿ ಒಂದು ಸಲ ಕ್ಯಾಂಪ್ ಹಾಕಿದ್ದೆವು. ಅಲ್ಲಿ ಗಣೇಶ ಅನ್ನುವ ರೌಡಿಯ ಉಪಟಳ ಹೆಚ್ಚಾಗಿತ್ತಂತೆ. ನಾವು ಅಲ್ಲಿಗೆ ಹೋದ ದಿನವೇ ಆತ ಜೈಲಿನಿಂದ ಬಿಡುಗಡೆ ಆಗಿದ್ದ. ಅದನ್ನು ಯಾರೋ ಬಂದು ನನಗೆ ಹೇಳಿದರು. ನಿಮ್ಮ ನಾಟಕಕ್ಕೆ ಗಣೇಶ ಬಂದಿದ್ದಾನೆ ಅಂತ. ಮುಂದಿನ ಕುರ್ಚಿಯಲ್ಲಿಯೇ ಕುಳಿತಿದ್ದ. ಎಲ್ಲರಿಗೂ ಆತಂಕ. ಆಗ ನಾನು ಸೆಕ್ಯೂರಿಟಿ ಕರೆದು ಆತನ ಹತ್ತಿರ ಇದ್ದ ಚಾಕು ಇಸಿದುಕೊಂಡೆ. ಕಲಾವಿದೆಯರ ಸಮೀಪಕ್ಕೆ ಗಣೇಶ್ ಬಂದರೆ ಚುಚ್ಚಿಬಿಡೋಣ ಅಂತ ತೀರ್ಮಾನ ಮಾಡಿದೆ. ಆದರೆ, ನಮ್ಮ ನಾಟಕ ನೋಡಿದ

ಮೇಲೆ ಆತನಿಗೂ ಹೃದಯ ಪರಿವರ್ತನೆ ಆಗಿತ್ತು. ಚೆನ್ನಾಗಿ ನಾಟಕ ಮಾಡಿದ್ರಿ ಎಂದು ಕೈಮುಗಿದು ಹೋಗಿದ್ದ.
ಗುಳೇದಗುಡ್ಡದಲ್ಲೂ ಹೀಗೆಯೇ ಆಗಿತ್ತು. ನಮ್ಮ ಕಂಪನಿಯನ್ನು ಮುಚ್ಚಿಸಲು ಅನೇಕರು ಪ್ರಯತ್ನಪಟ್ಟರು. ಮೈಸೂರಿನಲ್ಲಿ ಐಯ್ಯಂಗಾರ್ ಅನ್ನೋರು ನಮ್ಮ ವಿರುದ್ಧ ಕಂಪನಿ ಶುರು ಮಾಡಿದರು. ಕಲಾವಿದೆಯರನ್ನು ಬಲವಂತವಾಗಿ ಬೇರೆ ಕಂಪನಿಯವರು ಕರೆದುಕೊಂಡು ಹೋಗಿ ತೊಂದರೆ ನೀಡಿದರು. ಏನೇ ಕಷ್ಟ ಬಂದರೂ ಸ್ತ್ರೀ ನಾಟಕ ಮಂಡಳಿ ಮಾತ್ರ ಯಾವತ್ತೂ ಸೋಲಲಿಲ್ಲ. ಸಾಕಷ್ಟು ನಾಟಕಗಳನ್ನು ರಂಗಭೂಮಿಗೆ ನೀಡಿದೆ. ನನ್ನ ತಂಗಿ ಆರ್. ಮಂಜುಳಾ ಹಾಸ್ಯ ಕಲಾವಿದೆಯಾಗಿ, ನನ್ನ ತಮ್ಮ ಪರಮಶಿವನ್ ಹಾರ್ಮೋನಿಯಂ ವಾದಕನಾಗಿ ನನಗೆ ಸಾಥ್ ನೀಡಿದ್ದಾರೆ. ನನ್ನ ಗಂಡ ಪಾರ್ಥಸಾರಥಿಯವರು ಹಿರಣ್ಣಯ್ಯ ಮಿತ್ರಮಂಡಳಿ ಕಲಾವಿದರು. ಅವರ ಕೊಡುಗೆಯೂ ಸಾಕಷ್ಟಿದೆ.
ಕೃಷ್ಣಲೀಲಾದಲ್ಲಿ ಕೃಷ್ಣ, ಕೃಷ್ಣ ಗಾರುಡಿಯಲ್ಲಿ ಭೀಮ, ಸುಭದ್ರಾ ಪರಿಣಯದಲ್ಲಿ ಬಲರಾಮ, ಬೇಡರ ಕಣ್ಣಪ್ಪದಲ್ಲಿ ಕಣ್ಣಪ್ಪ, ಸದಾರಮೆಯಲ್ಲಿ ಕಳ್ಳ, ಸಂಸಾರ ನೌಕೆಯಲ್ಲಿ ಸುಂದರ ಹೀಗೆ ಸಾಕಷ್ಟು ಪಾತ್ರಗಳನ್ನು ಮಾಡಿದ್ದರೂ ಇವತ್ತಿಗೂ ನನ್ನನ್ನು ಗುರುತಿಸೋದು ಭೀಮನ ಪಾತ್ರದಲ್ಲೇ. ನನ್ನ ರಂಗಸೇವೆಯನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ-ನಾಟಕ ಅಕಾಡೆಮಿ ಪುರಸ್ಕಾರ, ಗುಬ್ಬಿವೀರಣ್ಣ ಪ್ರಶಸ್ತಿ, ಕೆ.ವಿ. ಶಂಕರೇಗೌಡ ಪ್ರಶಸ್ತಿಗಳೆಲ್ಲಾ ನನಗೆ ಬಂದಿವೆ. ಈಗ ಕೇಂದ್ರ ಸರಕಾರ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸುತ್ತಿದೆ. ನನಗೀಗ ಎಂಬತ್ತೈದು ವರ್ಷ. ನನಗೆ ಇನ್ನೂ ಸಾಕಷ್ಟು ಕನಸುಗಳಿವೆ. ಈಗಲೂ ನನಗೆ ಭೀಮನಾಗಿ ಕಾಣಿಸಿಕೊಳ್ಳುವ ಆಸೆ ಇದೆ !

**ನಿರೂಪಣೆ : ಶರಣು ಹುಲ್ಲೂರು**

ಕೃಪೆ : ವಿಜಯ ಕರ್ನಾಟಕ

## ಓದುಗರ ಅನಿಸಿಕೆ

ಮಾರ್ಚ್ ತಿಂಗಳ ಅಭಿಮತದಲ್ಲಿ ಸಂಘದ ಅಧ್ಯಕ್ಷರು ತಮ್ಮ ಅಂತರಾಳದಲ್ಲಿ ಬರೆದಿರುವ ವಿಷಯವನ್ನು ಕುರಿತು ಬರೆಯುತ್ತಿದ್ದೇನೆ. ಅವರೇ ಹೇಳಿರುವಂತೆ ನಾನೂ ಕೂಡಾ ಪುಸ್ತಕ ಮೇಳಕ್ಕೆ ಅವರ ಜೊತೆ ಹೋಗಿದ್ದೆ. ಪುಸ್ತಕ ಮೇಳದಿಂದ ಪುಸ್ತಕಗಳನ್ನು ಖರೀದಿಸಿ ಅವುಗಳನ್ನು ತೆಗೆದುಕೊಂಡು ಬರುತ್ತಿರುವಾಗ ಅಲ್ಲಾಬಕ್ಷ ಶೇಕ್ ಅವರು ಸಹಾಯಕ್ಕೆ ಎಂದು ಬಂದಿದ್ದರು. ಅವರ ಜೊತೆ ಅಧ್ಯಕ್ಷರು ಮಾತನಾಡುತ್ತಾ ಅವರ ವಿಷಯಗಳನ್ನು ಕೆದಕಿ ಕೆದಕಿ ಕೇಳುತ್ತಾ ಬರುತ್ತಿರುವಾಗಲೇ ಮನಸ್ಸಿನಲ್ಲೇ ಅಂದುಕೊಂಡಿದ್ದೆ, ಅವರ ಕುರಿತು ಲೇಖನಿಗೆ ಕೆಲಸ ಕೊಡಬಹುದು ಎಂದು. ಅಂದುಕೊಂಡಂತೆ ಬರೆದೇ ಬಿಟ್ಟರು. ಐದು ನಿಮಿಷದ ಹಾದಿಯ ಸಂಭಾಷಣೆಯನ್ನು ಹೇಗೆ ಸೊಗಸಾಗಿ ಲೇಖನಿಯಲ್ಲಿ ಮೂಡಿಸಬಹುದು ಎಂಬುದು ನನಗೆ ಅರ್ಥವಾಗಿದ್ದು ಈಗಲೇ.

**ಬಾಲಚಂದ್ರ ಬಿ.ಎಸ್**



ಬೆಂಗಳೂರಿನಲ್ಲಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಜನಕಪುರಿ ಕನ್ನಡ ಕೂಟದ ಶ್ರೀ ಬಿ.ಆರ್. ವಿಶ್ವನಾಥ್ ಅವರಿಗೆ ಕೂಟದ ಅಧ್ಯಕ್ಷ ಶ್ರೀ ಬಿ.ಎಸ್. ರಾಮಕೃಷ್ಣ ಅವರು ಕೂಟರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಕವನ

## ಪಾಚಿ

ಸಸ್ಯ ವಿಜ್ಞಾನದ ಚೊಚ್ಚಿಲಲ್ಲವೆ ನೀನು
ಪಾಚಿ ಎಂಬ ಹೆಸರಿನ ನೀನು ವಿಸ್ಮಯವೆಂಬ ಕವಚದಿಂದ
ಮುಚ್ಚಿದ ಒಂದು ಒಗಟಿನ ಕಗ್ಗಂಟು ನೀನು
ಕಾಮನ ಬಿಲ್ಲಿನ ಸಪ್ತವರ್ಣಗಳನ್ನು
ಅದಲು-ಬದಲು ಮಾಡಿಕೊಂಡು ನೀನು
ನಿನ್ನ ಸ್ಥಾನವನ್ನೂ ಸೌಂದರ್ಯವನ್ನೂ ಹೆಚ್ಚಿಸಿಕೊಂಡಿದ್ದೀಯ ಅಲ್ಲವೇ!
ನಿನ್ನಲ್ಲಿ ಕೆಲವು ನೀಲಿ-ಹಸಿರು, ಕೆಲವು ಕೆಂಪು-ನೀಲಿ
ಇನ್ನು ಕೆಲವು ಕಿತ್ತಳೆ-ಹಸಿರು; ಒಂದೇ ಎರಡೇ ಹಲವಾರು
ಎಲೆ ಹಸಿರು, ಕಡು ಹಸಿರು ಹೀಗೇ-ಹಾಗೆ ಸುಂದರರೂಪಿ ನೀನು!
ಸಿಹಿ ನೀರಿನಲ್ಲಿ ಉಪ್ಪು ನೀರಲ್ಲಿ ನಿಂತ ನೀರಲ್ಲಿ ತೇವ ಇದ್ದೆಡೆಯಲ್ಲಿ
ಬೆಳೆಯುವ ನೀನು ಅದ್ಭುತ ಗಾತ್ರೆ:
ನೀನು ಅನ್ನಪೂರ್ಣೆ; ಶಕ್ತಿ ಮಾತೆಯಲ್ಲವೇ ನೀನು!
ನಾನೆಂತು ನಿನ್ನ ಮರೆಯಲಿ; ಮೂರ್ತಿ ಚಿಕ್ಕದು-ಕೀರ್ತಿ ದೊಡ್ಡದು
ಎಂಬುದರ ಸಾರ್ಥಕ ನಿದರ್ಶನ ನೀನು.
ಪಾಚಿ, ಕಾಯಿ, ಸ್ಕಮ್, ಸಮುದ್ರದ ಹುಲ್ಲು, ಶೈವಾಲ ಎಂಬ
ಅನೇಕ ಹೆಸರುಗಳಿಂದ ಕರೆಯಲ್ಪಟ್ಟ ಮಹಾ ಮಾಯೆ
ನನಗೆ ನಿನ್ನಿಂದ ಆದ ಉಪಕಾರವನ್ನು ಮರೆಯಲು ಸಾಧ್ಯವೇ ಇಲ್ಲ
ಒಂದು ಬಾರಿ ನಿನ್ನನ್ನು ನೋಡಲು ಹೋಗಿ ಜಾರಿ ಬಿದ್ದಾಗ
ಆದ ನೋವ ಮರೆತೆ ಅಷ್ಟೆ;
ನಿನ್ನ ನಾ ಮರೆತಲ್ಲಿ ನನ್ನಿಂದ ಘೋರ ಪಾಪವಾದೀತು
ನಿನ್ನ ಮರೆತಲ್ಲಿ ಪ್ರಕೃತಿಮಾತೆಗೆ ಮೋಸಮಾಡಿದಂತೆ
ನಿನ್ನನ್ನು ಹಗಲು-ರಾತ್ರಿ ಗುಣಗಾನ ಮಾಡುವುದೇ ನನ್ನ ದೇವರಪೂಜೆ
ಆಗ-ಈಗ ನಿನ್ನನ್ನು ಪೋಷಿಸಿ
ಸ್ವಾರ್ಥಕ್ಕಾಗಿ ನಿನಗೆ ತೊಂದರೆ ಕೊಟ್ಟು
ಕಲಿಯುತ್ತಿದ್ದುದು ನನಗೆಷ್ಟು ಅವಶ್ಯಕವಿತ್ತು
ನಿನಗೇನು ಗೊತ್ತು ನಾನು ನಿನ್ನಿಂದ ಕಲಿತಿದ್ದು ಏನೆಂದು
ನಿನಗೇನು ಗೊತ್ತು ನಾನು ನಿನ್ನಿಂದ ಪಡೆದದ್ದು
ಪದವಿಗಳೇ, ಉಪಾದಿಗಳೇ, ಅನ್ನಸಾರೇ, ವ್ಯಂಜನವೇ
ಜೀವರಸಗಳೇ, ಉದ್ಯೋಗವೇ ಒಂದೇ ಎರಡೇ!
ಸದ್ದಿಲ್ಲದೆ ಎಲ್ಲೋ ಸಿಕ್ಕಿದ ಕಡೆ ಬೆಳೆಯುತ್ತಾ
ಒಂದು ನಿಟ್ಟುಸಿರು ಸಹಾ ಬಿಡದೇ
ಯಾವ ಗೊಣಗಾಟ-ಮುಜುಗರವೂ ಇಲ್ಲದೇ
ಇಡೀ ಪ್ರಾಣಿಕುಲವನ್ನು ಕಾಪಾಡಿ ಸಲಹುತ್ತಿದ್ದೀಯ
ಎಲೆ ಮಾನವ ಉಪಕಾರಿಯಾಗಿ ಬದುಕೀ
ಎಂದು ಘಳಿಗೆ-ಘಳಿಗೆಗೆಚ್ಚರಿಸುವ ನಿನ್ನ ಹೇಗೆ ಮರೆಯಲಿ
ಪರಿಸರ ದೂಷಣೆಯಿಂದ ಎಂತಹ ಕಟು
ಸ್ಥಿತಿಗೂ ಹೆದರದೆ ಅಚಲವಾಗಿ ಬೆಳೆಯುತ್ತಾ
ನೀನ್ಯಾವ ಯುಗದಿಂದ ಬಂದಿರುವೆಯೋ
ಎಲ್ಲೈ ಹರಾ-ನೀಲ ಶೈವಾಲ ನಿನಗೆ ನನ್ನ ನಮನ.

**ಡಾ.ಅಹಲ್ಯಾ ಚಿಂತಾಮಣಿ**

# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ



ಏಪ್ರಿಲ್ 1 ರಂದು ಸಂಘದ ಸಭಾಂಗಣದಲ್ಲಿ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಿತು. ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸರ್ವ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯ ಗೊತ್ತುವಳಿಗಳನ್ನು ಸದಸ್ಯರ ಮುಂದಿಟ್ಟರು. ಈ ಕುರಿತಾಗಿ ಸದಸ್ಯರ ಹತ್ತು ಹಲವು ಪ್ರಶ್ನೆಗಳಿಗೆ ವಿಚಾರಗಳಿಗೆ ಅಧ್ಯಕ್ಷರು ಸಮರ್ಪಕವಾದ ವಿವರಣೆಯನ್ನು ನೀಡಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಖಜಾಂಚಿ ಕೆ. ಆರ್. ರಾಮಮೂರ್ತಿಯವರು ಆರ್ಥಿಕ ವಿಷಯಗಳ ಬಗ್ಗೆ ಸ್ಪಷ್ಟೀಕರಣ ನೀಡಿದರು. ಹಲವಾರು ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರು. ವೇದಿಕೆಯಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಉಪಾಧ್ಯಕ್ಷರುಗಳಾದ ಉಷಾ ಭರತಾದ್ರಿ, ಬಿ.ಕೆ. ಬಸವರಾಜು ಹಾಗೂ ಜಂಟಿ ಕಾರ್ಯದರ್ಶಿಗಳಾದ ಎನ್.ಆರ್. ಶ್ರೀನಾಥ್, ರೇಣುಕಾ ನಿಡಗುಂದಿ ಉಪಸ್ಥಿತರಿದ್ದರು. ಸುಮಾರು ಮೂರುವರೆ ಗಂಟೆಗಳ ಕಾಲ ನಡೆದ ಸಭೆಯು ಮಧ್ಯಾಹ್ನದ ಭೋಜನದೊಂದಿಗೆ ಮುಕ್ತಾಯವಾಯಿತು.

**(ವಾರ್ಷಿಕ ಮಹಾಸಭೆಯ ನಡಾವಳಿಯನ್ನು ವಿವರವಾಗಿ ಸಂಘದ ಸರ್ವ ಸದಸ್ಯರೆಲ್ಲರಿಗೂ ಪ್ರತ್ಯೇಕವಾಗಿ ಕಳುಹಿಸಿಕೊಡಲಾಗುವುದು)**








# ವಿಜಯ ಕರ್ನಾಟಕ ಸಂಪಾದಕ ಇ. ರಾಘವನ್ ನಿಧನ



‘ವಿಜಯ ಕರ್ನಾಟಕ’ ಮತ್ತು ‘ವಿಜಯ ನೆಕ್ಸ್ಟ್’ನ ಸಂಪಾದಕ ಇ. ರಾಘವನ್ ಅವರು ಮಾರ್ಚ್ 6ರಂದು ಬೆಂಗಳೂರಿನಲ್ಲಿ ಹೃದಯಾಘಾತದಿಂದ ನಿಧನರಾಗಿದ್ದಾರೆ.ಹೃದಯಾಘಾತಕ್ಕೆ ಒಳಗಾಗಿದ್ದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಸೇರಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ.

ಬೆಂಗಳೂರಿನಲ್ಲಿ 1951ರ ಜನವರಿ 18ರಂದು ಜನಿಸಿದ ರಾಘವನ್, ಗ್ಯಾಸ್ ಕಾಲೇಜಿನಲ್ಲಿ ಬಿಎ ಪದವಿ ಪಡೆದಿದ್ದರು. ಮೈಸೂರಿನ ಪತ್ರಿಕೆಯ ಮೂಲಕ ವೃತ್ತಿ ಜೀವನ ಆರಂಭಿಸಿದ ಅವರು ಆ ನಂತರ ಬೆಂಗಳೂರಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ವರದಿಗಾರರಾದರು. 3 ದಶಕಗಳಿಗೂ ಹೆಚ್ಚು ಕಾಲ ರಾಷ್ಟ್ರಮಟ್ಟದ ಪತ್ರಿಕೆಗಳಲ್ಲಿ ರಾಜಕೀಯ ಹಾಗೂ ಆರ್ಥಿಕ ವಿಶ್ಲೇಷಕರಾಗಿದ್ದರು.

ಮಾಜಿ ಮುಖ್ಯಮಂತ್ರಿಗಳಾದ ದೇವರಾಜ ಅರಸು, ಗುಂಡೂರಾವ್ ಹಾಗೂ ರಾಮಕೃಷ್ಣ ಹೆಗಡೆ ಅವರ ಅವಧಿಯಲ್ಲಿ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಗಳ ಕುರಿತು Broadening and Deepening Democracy Political Innovation in Karnataka ಎಂಬ ಪುಸ್ತಕ ಬರೆದಿದ್ದರು. University of Londonನ ಪ್ರೊಫೆಸರ್ James Manor ಈ ಪುಸ್ತಕದ ಸಹ ಲೇಖಕರಾಗಿದ್ದರು.

ದೆಹಲಿಯಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ವರದಿಗಾರರಾಗಿ ಹಲವು ವರ್ಷ ಕೆಲಸ ಮಾಡಿದ್ದ ಅವರು ಟೈಮ್ಸ್ ಸಮೂಹಕ್ಕೆ ಸೇರ್ಪಡೆಯಾಗಿ ಎಕನಾಮಿಕ್ ಟೈಮ್ಸ್‌ನ ಸಂಪಾದಕರಾಗಿ ಕೆಲಸ ಮಾಡಿದ್ದರು. ಕೆಲ ಕಾಲ ಡಿಎನ್‌ಎ ಪತ್ರಿಕೆಯ ರಾಜಕೀಯ ಅಂಕಣಕಾರರಾಗಿದ್ದರು. ನಂತರ ವಿಜಯ ನೆಕ್ಸ್ಟ್ ಪುರವಣಿಯ ಸಂಪಾದಕರಾಗಿದ್ದರು. 15 ತಿಂಗಳ ಹಿಂದೆ ವಿಶ್ವೇಶ್ವರ ಭಟ್ ಅವರು ವಿಜಯ ಕರ್ನಾಟಕ ಸಂಪಾದಕರಾಗಿ ನಿರ್ಗಮಿಸಿದ ನಂತರ ರಾಘವನ್ ಆ ಸ್ಥಾನವನ್ನು ಅಲಂಕರಿಸಿದ್ದರು.

**ಅಗಲಿದ ರಾಘವನ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತೇವೆ.**

# ಕನ್ನಡ ಕವಿಗೋಷ್ಠಿ ಹಾಗೂ 'ಕರಿಭಂಟ' ನಾಟಕ ಪ್ರದರ್ಶನ



ನಾಟಕ –ಕರಿಭಂಟ

ಸಾಹಿತ್ಯ ಅಕಾಡೆಮಿ, ನವದೆಹಲಿ, ಅಭಿವ್ಯಕ್ತಿ, ನಾಗತಿಹಳ್ಳಿ ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಮಾರ್ಚ್31 ಭಾನುವಾರ ಸಂಜೆ ಕನ್ನಡ ಕವಿಗೋಷ್ಠಿಯನ್ನು ಪ್ರಸ್ತುತ ಪಡಿಸಲಾಯಿತು. ಕವಿಗೋಷ್ಠಿಯನ್ನು ಖ್ಯಾತ ಲೇಖಕ, ಚಲನಚಿತ್ರ ನಿರ್ಮಾಪಕ ಹಾಗೂ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ಉದ್ಘಾಟಿಸಿ ಮಾತನಾಡಿದರು. ಚಂಪೂ ಕಾವ್ಯದಿಂದ ಹುಟ್ಟಿ ನವ್ಯಕಾವ್ಯದವರೆಗೂ ಸಮೃದ್ಧ ಹಾಗೂ ಶ್ರೀಮಂತವಾಗಿ ಸಾಗಿ ಬಂದ ಕನ್ನಡ ಸಾಹಿತ್ಯ ಪರಂಪರೆಯನ್ನು ಸ್ಮರಿಸುತ್ತಾ ಎಲ್ಲ ಕಾವ್ಯಗಳ ತಾಯಿ ಬೇರು ಜನಪದ ಎಂಬುದಾಗಿ ಹೇಳಿದರು. ನಮ್ಮ ಸಾಹಿತ್ಯ, ಸಮಾಜ ಕಾಲಘಟ್ಟಕ್ಕೆ ಅನುಗುಣವಾಗಿ ಬದಲಾಗುತ್ತಾ ಬಂದ ಬಗೆಯನ್ನು ವಿವರಿಸುತ್ತಾ ಹಿರಿಯ–ಕಿರಿಯ ಕವಿಗಳ ಸಂಗಮದ ಕವಿಗೋಷ್ಠಿಯನ್ನು ರಾಷ್ಟ್ರದ ರಾಜಧಾನಿಯ ಕನ್ನಡಿಗರ ಮುಂದೆ ನಡೆಸುತ್ತಿರುವುದಕ್ಕೆ ಸಂತಸ ವ್ಯಕ್ತ ಪಡಿಸಿದರು.

ಲಂಕೇಶ್ ಪತ್ರಿಕೆಯ 'ಕಟ್ಟೆ ಪುರಾಣ' ಅಂಕಣದ ಖ್ಯಾತ ಲೇಖಕ ಬಿ. ಚಂದ್ರೇಗೌಡ ಅವರು ಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳ ಕಿರು ಪರಿಚಯ ನೀಡಿದರು. ಸುಧಾ ವಾರಪತ್ರಿಕೆಯ ಸಹಸಂಪಾದಕ ಬಿ.ಎಂ. ಹನೀಫ್, ಹೆಸರಾಂತ ಕವಿ ಎಲ್.ಎನ್. ಮುಕುಂದರಾಜ್, ಪುಷ್ಪ ನಾಗತಿಹಳ್ಳಿ, ಪ್ರೊ. ಪದ್ಮ ಟಿ., ಗೊರೂರು ಪಂಕಜ, ನಾ ರೈತ, ಜಗದಾಂಬಾ ನಾಗತಿಹಳ್ಳಿ, ಶಿವಕುಮಾರ ಕಾರೆಪುರ, ಶ್ರೀನಿವಾಸ್ ಕರಿಯಪ್ಪ ಹಾಗೂ ಶಿಲ್ಪಶ್ರೀ ಹರವು ಇವರುಗಳು ತಮ್ಮ ಕವನಗಳನ್ನು ವಾಚಿಸಿದರು. ಗ್ರಾಮೀಣ ಬದುಕಿನ ಗಟ್ಟಿ ಅನುಭವವನ್ನು ಅತ್ಯಂತ ಪರಿಣಾಮಕಾರಿ ಮನಮುಟ್ಟುವಂತೆ ವಾಚಿಸಿದ ಕವಿಗಳು ಸಭಿಕರ ಮೆಚ್ಚುಗೆಗೆ ಪಾತ್ರರಾದರು.

ಈ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ ಖ್ಯಾತ ಕವಿ, ಲೇಖಕ, ವಿಚಾರವಾದಿ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ಎಲ್. ಹನುಮಂತಯ್ಯ ಅವರು "ನಾಗತಿಹಳ್ಳಿ ಚಂದ್ರಶೇಖರ್ ಅವರು ತನ್ನ ಹುಟ್ಟೂರನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಪ್ರತಿವರ್ಷ ಸಂಸ್ಕೃತಿ ಹಬ್ಬವನ್ನು ಆಯೋಜಿಸುವ ಅವರ ಕಾರ್ಯ ಅಭಿನಂದನೀಯ ಹಾಗೂ ಅನುಕರಣೀಯ. ನಾಗತಿಹಳ್ಳಿಯಿಂದ ಬಂದ ಅನೇಕ ಪ್ರತಿಭೆಗಳು ಕಾವ್ಯ ಹಾಗೂ ನಾಟಕ ಪ್ರದರ್ಶನ ನೀಡುತ್ತಿರುವುದು ಸುತ್ತ್ಯಾರ್ಹ. ಜೀವನಾನುಭವದ ದ್ರವ್ಯವನ್ನು ಪರಿಣಾಮಕಾರಿಯಾಗಿ ಹಿಡಿದಿಡಬಲ್ಲ ನಿಜವಾದ ಶಕ್ತಿ ಕಾವ್ಯಕ್ಕೆ ಮಾತ್ರ ಇದೆ" ಎಂಬುದಾಗಿ ಹೇಳುತ್ತಾ ಅವರೂ ಕೂಡ ಕವನವನ್ನು ವಾಚಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳನ್ನು ಹಾಗೂ ಮಹಿಳಾ ಕಲಾವಿದರನ್ನು ಅಭಿನಂದಿಸುತ್ತಾ ವಂದನಾರ್ಪಣೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರೂಪಿಸಿದರು.

ನಂತರ ಅಭಿವ್ಯಕ್ತಿ ಮಹಿಳಾ ಸಂಘ, ನಾಗತಿಹಳ್ಳಿಯ ಮಹಿಳೆಯರು 'ಕರಿಭಂಟ' ನಾಟಕವನ್ನು ಪ್ರದರ್ಶಿಸಿದರು. ನಿಸರ್ಗಪ್ರಿಯ ವಿರಚಿತ ನಾಟಕದ ನಿರ್ದೇಶನ ಛಾಯಾ ಭಾರ್ಗವಿ ಅವರದ್ದು. 'ಕರಿಭಂಟ ಕಾಳಗ' ಜನಪದ ನಾಟಕವು ಇದುವರೆಗೂ ವಿಭಿನ್ನ ಪ್ರಕಾರಗಳಲ್ಲಿ ಪ್ರದರ್ಶಿತಗೊಂಡಿದೆ. ಕಾಡು ಮತ್ತು ನಾಡು ನಡುವಿನ ಸಂಘರ್ಷ ಹಾಗೂ ಸಾಮರಸ್ಯದ ಕಥಾವಸ್ತುವುಳ್ಳ ಈ ನಾಟಕ ಬಯಲು ಸೀಮೆಯ ಹಾಡುಗಾರಿಕೆಯಿಂದ ಕೂಡಿದ್ದು ವಿಶಿಷ್ಟ ಅನುಭವ ನೀಡಿತು. ಸಂಪೂರ್ಣ ಮಹಿಳೆಯರೇ ಅಭಿನಯಿಸಿದ ಈ ನಾಟಕದ ಬಹುತೇಕ ಮಹಿಳೆಯರು ಅನಕ್ಷರಸ್ಥರು ಹಾಗೂ ಗ್ರಾಮೀಣ ಪ್ರದೇಶದ ರೈತ ಕುಟುಂಬದ ಗೃಹಿಣಿಯರು ಎಂಬುದು ನಿಜಕ್ಕೂ ಅಚ್ಚರಿಯ ಸಂಗತಿ. ಗ್ರಾಮೀಣ ಪ್ರತಿಭೆಯ ಕಲಾವಿದೆಯರ ನೈಜ ಅಭಿನಯ ದೆಹಲಿ ರಂಗಾಸಕ್ತರ ಪ್ರಶಂಸೆ ಗಳಿಸುವಲ್ಲಿ ಯಶಸ್ವಿಯಾಯಿತು.




ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳು

Delhi Karnataka Sangha's Abhimatha Monthly,
April -2012, Price Rs.1/- RNI Regn. No. 53405/91, DL-SW-15/4016/10-11-12
Printout Date : April 8th / 9th, Postal Date :10th / 11th, Total Pages-24




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770